# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

KENDHOOLI *Kannada Weekly*

kendhooli.com/e-paper/


**ಜನರ ದಿಕ್ಕು ತಪ್ಪಿಸಲು ಈ ಹಿಜಾಬ್ ವಿವಾದ**



ಸನತ್‌ಕುಮಾರ ಬೆಳಗಲಿ
ಅವರ ಅಂಕಣದಲ್ಲಿ...


ಸಂಪುಟ - 02 । ಸಂಚಿಕೆ - 63 । ಪುಟ - 16 । ರೂ. 16/- । ಜನವರಿ 27 ರಿಂದ ಫೆಬ್ರವರಿ 2, 2022 KARKAN/2018/76310


# ಶೀಘ್ರದಲ್ಲೇ ಮತ್ತೆ ಪಕ್ಷಾಂತರ ಪರ್ವ ?



## ಸಚಿವರ ಕೈತಪ್ಪಿದ ಜಹಗೀರು

ಭಾಸ್ಕರ ರಾವ್ ಅವರ
ಅಂಕಣದಲ್ಲಿ...

## ಬೆಂಗಳೂರು ಹೊರವಲಯದಲ್ಲಿ ಶುರುವಾಗಿದೆ ಭೂಮಾಫಿಯಾ ಮರ್ಡರ್!!

## ಲೋಕಾಯುಕ್ತ ಎನ್ನುವ ಸಂಸ್ಥೆಯನ್ನು ಶೋಕೇಸ್‌ನಲ್ಲಿಟ್ಟ ಸರ್ಕಾರಗಳು

# ಧರ್ಮ ಮತ್ತು ರಾಜಕೀಯ ನಡುವಿನ ಸಂಬಂಧ

ರಾಜಕಾರಣದಲ್ಲಿ ಧರ್ಮ ಇರಬಾರದು ಎಂದು ಅನಾದಿ ಕಾಲದಿಂದಲೂ ಹೇಳಲಾಗುತ್ತಿದೆ ಆದರೆ ಯಾವುದೇ ದೇಶವೂ ಈಗ ಇದರಿಂದ ಹೊರತಾಗಿಲ್ಲ . ಇನ್ನೂ ಹೆಚ್ಚು ಆಧುನೀಕರಣಗೊಳ್ಳುತ್ತಿದ್ದಂತೆ 'ಧರ್ಮ' ಪ್ರಭಾವ ಹೆಚ್ಚಾಗುತ್ತಲೆ ಇದೆ ಇದಿಲ್ಲದೆ ರಾಜಕಾರಣವೆ ಇಲ್ಲ ಎನ್ನುವಂತಾಗಿದೆ. ಆದರೆ ಅದು ಇತ್ತೀಚಿನ ದಿನಗಳಲ್ಲಿ ಅದು ಮತ್ತಷ್ಟು ಹೆಚ್ಚಾಗಿದೆ ಒಂದು ಪಕ್ಷದ ಪ್ರಮುಖ ಸಿದ್ಧಾಂತವೇ 'ಧರ್ಮ'ದ ಆಧಾರದ ಮೇಲೆ ನಿಂತಿದೆ ಇಡೀ ದೇಶವನ್ನೇ ಧರ್ಮ ಎಂಬ ಅಫೀಮಿನಲ್ಲಿ ತೇಲಾಡಿಸುತ್ತಿದೆ ಎಂದರೆ ರಾಜಕಾರಣಿಗಳು ಜನರನ್ನು ಈ ಧರ್ಮ' ದ ಪ್ರಭಾವಕ್ಕೆ ತರಲು ಎಷ್ಟು ತಾಲೀಮು ಮಾಡಿರಬೇಕು ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

'ಧರ್ಮ' ಎನ್ನುವುದು ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎಂದರೆ ದೇಶದ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾದರೂ ಪರ್ವಾ ಇಲ್ಲ ಆದರೆ ಧಾರ್ಮಿಕ ಕೇಂದ್ರಗಳಲ್ಲಿ ಈಗ ಅತ್ಯಂತ ವೈಭೋಗದ ಮತ್ತು ಆಧುನೀಕರಣದ ಮೂಲಕ ವೈಭವೀಕರಿಸುವ ಕಾರ್ಯಗಳು ನಿರಂತರವಾಗಿ ನಡೆಯಲುತ್ತಲೇ ಇದೆ.

ಇದಕ್ಕೆ ಉದಾಹರಣೆಗಳು ಸಾಕಷ್ಟು ನಮ್ಮ ಮುಂದೆ ಇವೆ ಇತ್ತೀಚೆಗೆ

ವಿಶ್ವದ ಅತ್ಯಂತ ಪುರಾತನ ನಗರಗಳಲ್ಲಿ ಒಂದಾಗಿರುವ ಕಾಶಿಯನ್ನು ಕೊಳಕು, ಇಕ್ಕಟ್ಟಿನ ಸ್ಥಿತಿಯಿಂದ ಆಧುನಿಕ ನಗರವನ್ನಾಗಿ ಪರಿವರ್ತಿಸಿದೆ ಇದಕ್ಕಾಗಿ 900 ಕೋಟಿ ವೆಚ್ಚದ ಕಾಶಿ ವಿಶ್ವನಾಥಧಾಮ ಯೋಜನೆಯು ನಗರದಾದ್ಯಂತ ಸಂಚಾರವನ್ನು ಸುಗಮಗೊಳಿಸುವ ಕಾರಿಡಾರ್ ನಿರ್ಮಾಣ, ದೇವಸ್ಥಾನದ ಸುತ್ತಲಿನ ಜಾಗಗಳನ್ನು ಸ್ವಚ್ಛಗೊಳಿಸಿದೆ. ಆ ಮೂಲಕ ದೇಶದ ಜನರನ್ನು ಈ ಮೂಲಕ ಗಮನ ಸೆಳೆದು ಧಾರ್ಮಿಕತೆಗೆ ಇವರು ಉದಯಿಸಿದ್ದಾರೆ ಎಂದು ಬಿಂಬಿಸುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಇಡೀ ದೇಶದ ಜನರಲ್ಲಿಯೇ ಭೇಷ್ ಎನಿಸಿಕೊಂಡಿದ್ದು ಗೊತ್ತಿರುವ ಸಂಗತಿಯೇ.

ದಕ್ಷಿಣ ಭಾರತ ಮತ್ತು ಇತರ ಪ್ರದೇಶಗಳಲ್ಲಿ ಹಲವು ದೇವಸ್ಥಾನಗಳು ಆಳುವವರ ಗಮನ ಸೆಳೆಯಲು ಹೆಣಗುತ್ತಿವೆ. ರಾಮನಾಥಸ್ವಾಮಿ ದೇವಸ್ಥಾನ ಇರುವ ತಮಿಳುನಾಡಿನ ರಾಮೇಶ್ವರದಲ್ಲಿ ವಿಶ್ವದ ಅತ್ಯಂತ ಉದ್ದನೆಯ ಕಾರಿಡಾರ್‌ಗಳು ಇವೆ. ಇವುಗಳನ್ನು ನೋಡುವುದೇ ಒಂದು ಆನಂದ. ಜಗನ್ನಾಥ, ಬಲಭದ್ರ ಮತ್ತು ಸುಭದ್ರೆಯರ ಕಟ್ಟಿಗೆಯ ಮೂರ್ತಿಗಳು ಇರುವ ಪುರಿಯ ಜಗನ್ನಾಥ ದೇವಸ್ಥಾನವು ವಾರ್ಷಿಕ ರಥಯಾತ್ರೆಯ ಸಂದರ್ಭದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಸೆಳೆಯುತ್ತದೆ. ಅಲ್ಲಿ ಶಂಕರಾಚಾರ್ಯರು ಸ್ಥಾಪಿಸಿದ



ಗೋವರ್ಧನಪೀಠ ಕೂಡ ಇದೆ. ಆಂಧ್ರ ಪ್ರದೇಶದಲ್ಲಿ ತಿರುಮಲ ದೇವಸ್ಥಾನ ಇದೆ. ಇದು ಭಾರತದ ಅತ್ಯಂತ ಶ್ರೀಮಂತ ದೇವಸ್ಥಾನ. ಪ್ರತಿದಿನವೂ ಇಲ್ಲಿಗೆ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಾರೆ.ಇಂತಹ ಎಲ್ಲ ದೇವಳ ನಗರಿಗಳಿಗೂ ಬದಲಾವಣೆಯ ಅಗತ್ಯವಿದೆ. ಇವು ಧಾರ್ಮಿಕವಾಗಿ ಮಹತ್ವವಾಗಿರುವ ನಗರಗಳು ಎಂಬ ಕಾರಣಕ್ಕೆ ಮಾತ್ರವೇ ಅಲ್ಲ. ಬದಲಿಗೆ, ಈ ನಗರಗಳು ಅರ್ಥ ವ್ಯವಸ್ಥೆ ಹಾಗೂ ಸಮಾಜಕ್ಕೆ ನೀಡುವ ಕೊಡುಗೆಯ ಕಾರಣದಿಂದಾಗಿಯೂ ಬದಲಾವಣೆ ತರಬೇಕಾದ ಅಗತ್ಯವಿದೆ. ಭಾರತದ ದೇವಸ್ಥಾನ ಕೇಂದ್ರಿತ ಅರ್ಥ ವ್ಯವಸ್ಥೆಯ ಪೂರ್ಣ ತಾಕತ್ತನ್ನು ಇನ್ನಷ್ಟೇ ಕಂಡುಕೊಳ್ಳಬೇಕಿದೆ.

ಎಲ್ಲರ ಜೊತೆ, ಎಲ್ಲರ ಅಭಿವೃದ್ಧಿ ಎಂಬ ತತ್ವದ ಹೆಸರಿನಲ್ಲಿ ಪ್ರಮಾಣ ಮಾಡುವ ಪ್ರಧಾನಿಯವರು, ಪುನರುಜ್ಜೀವನದ ಯೋಜನೆಗಳ ಪಟ್ಟಿಯಲ್ಲಿ ಎಲ್ಲ ಧರ್ಮಗಳ ಶ್ರದ್ಧಾ ಕೇಂದ್ರಗಳನ್ನು ಸೇರಿಸಿ, ಆ ಮಾತಿಗೆ ಕ್ರಿಯಾರೂಪ ನೀಡಬೇಕು. ಆರಂಭಿಕ ಹೆಜ್ಜೆಯಾಗಿ, ಚಾರ್ ಧಾಮ್ ಮಾದರಿಯಲ್ಲಿ ಪಂಚಧಾಮದ ಬಗ್ಗೆ ಗಮನ ನೀಡಬೇಕು.

ತಮಿಳುನಾಡಿನ ಕ್ಯಾಥೊಲಿಕ್ ಚರ್ಚ್ ವೇಲಾಂಕಣಿ, ಪುಣೆ ಸಮೀಪದ ಶಿರಡಿ ಸಾಯಿಬಾಬಾ ಕೇಂದ್ರ, ರಾಜಸ್ಥಾನದ ಅಜ್ಮೇರ್ ದರ್ಗಾ, ಸಿಖ್ಖರ ಪವಿತ್ರ ಸ್ಥಳವಾದ ಅಮೃತಸರ, ಬೌದ್ಧರ ಪವಿತ್ರ ಕೇಂದ್ರವಾದ ಸಾರಾನಾಥವನ್ನು ಜೋಡಿಸಬೇಕು. ಇವೆಲ್ಲವೂ ಬೇರೆ ಬೇರೆ ಧರ್ಮಗಳ ಜನರನ್ನು ಆಕರ್ಷಿಸುತ್ತವೆ. ಬೇರೆ ಬೇರೆ ಧರ್ಮಗಳ ನಡುವಿನ ಏಕತೆಯ ಮಾದರಿಯಾಗಿ ನಿಂತಿವೆ ಇವು.ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಪ್ರಸರಣದಲ್ಲಿ ತೊಡಗಿಸಿಕೊಂಡಿರುವ, ಸಮಾಜಸೇವೆಯಲ್ಲಿ ತೊಡಗಿಸಿ ಕೊಂಡಿರುವ ವಿಶ್ವಾಸಾರ್ಹ ಸಂಸ್ಥೆಗಳಾದ ರಾಮಕೃಷ್ಣ ಮಿಷನ್, ಚಿನ್ಮಯ ಮಿಷನ್, ಸಿದ್ಧಗಂಗಾ ಮಠ, ಮದರ್ ತೆರೇಸಾ ಸ್ಥಾಪಿಸಿದ ಮಿಷನರೀಸ್ ಆಫ್ ಚ್ಯಾರಿಟಿಯಂತಹ ಬೇರೆ ಬೇರೆ ಸಂಸ್ಥೆಗಳನ್ನು ಕೋಮುವಾದ ಮತ್ತು ಜಾತಿವಾದವನ್ನು ಹತ್ತಿಕ್ಕಲು, ಬೇರೆ ಬೇರೆ ಧರ್ಮಗಳ ನಡುವೆ ಒಗ್ಗಟ್ಟನ್ನು ಹೆಚ್ಚಿಸಲು ಹಾಗೂ ಸಾಮಾಜಿಕ ಸೌಹಾರ್ದ ಬಲಪಡಿಸಲು ಬಳಸಿಕೊಳ್ಳಬೇಕು.ಭಾರತೀಯರಿಗೆ ರಾಜಕೀಯ ಮುಖಂಡರು ಅಥವಾ ಬೇರೆ ಯಾವುದೇ ಮುಖಂಡರಿಗಿಂತ ಧಾರ್ಮಿಕ ನಾಯಕರಲ್ಲಿ ನಂಬಿಕೆ ಹೆಚ್ಚು. ಅವರು ಹೇಳಿದ್ದನ್ನು ಕೇಳಿ ಪ್ರಭಾವಿತರಾಗುವ ಸಾಧ್ಯತೆಯೂ ಇರುತ್ತದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ, 'ಪಾವಿತ್ರ್ಯ, ಪರಿಶುದ್ಧತೆ ಮತ್ತು ದಯೆಯಂತಹ ಮೌಲ್ಯಗಳು ಯಾವುದೇ ಚರ್ಚ್‌ನ ಸ್ವಾಧೀನಕ್ಕೆ ಸೇರಿದವು ಅಲ್ಲ. ಪ್ರತಿಯೊಂದು ವ್ಯವಸ್ಥೆಯೂ ಅತ್ಯುನ್ನತ ವ್ಯಕ್ತಿತ್ವದ ಸ್ತ್ರೀ, ಪುರುಷರಿಗೆ ಜನ್ಮ ನೀಡಿದೆ'. ಮತಾಂತರವನ್ನು ನಿಷೇಧಿಸುವ ಕಾನೂನಿಗಿಂತಲೂ ಮಿಗಿಲಾಗಿ, ತಮ್ಮ ನಂಬಿಕೆಗಳನ್ನು ಪಾಲಿಸುತ್ತಲೇ ಇನ್ನೊಬ್ಬರ ನಂಬಿಕೆಗಳನ್ನು ಗೌರವಿಸುವ ಮಾರ್ಗಕ್ಕೆ ಹೃದಯಗಳನ್ನು ಪರಿವರ್ತಿಸುವುದು ಇಂದಿನ ಅಗತ್ಯ.

ಇದು ಒಂದು ರೀತಿಯಾದರೆ ಇನ್ನೊಂದು ರೀತಿಯದ್ದು 'ಧರ್ಮ' ಎನ್ನುವ ಅಫೀಮು ಇದೆಯಲ್ಲ ಇದನ್ನು ಹೇಗೆ ಜನರ ಭಾವನೆಗಳಿಗೆ ಇಳಿಸಿ ಆಳುವ ಪಕ್ಷ ತನ್ನ ಕಾರ್ಯವನ್ನು ಅತ್ಯಂತ ಸುಲಲಿತವಾಗಿ ಮಾಡಿಕೊಳ್ಳುತ್ತಿದೆ ಎನ್ನುವುದು ಕೂಡ ಅಷ್ಟೆ ಮುಖ್ಯವಾಗುತ್ತದೆ.

ಧರ್ಮವನ್ನು ರಾಜಕೀಯದಿಂದ ದೂರವಿಟ್ಟಿದ್ದು ಅತಿ ವಿರಳ. ಆಯಾ ಕಾಲದ ರಾಜರು ರಾಜಧರ್ಮವೆಂದು ಸ್ವೀಕರಿಸಿದ ನಂತರವೆ ಕ್ರಿಶ್ಚಿಯನ್, ಇಸ್ಲಾಂ, ಬೌದ್ಧ, ಪಾರ್ಸಿ, ಸಿಖ್ ಮತ್ತು ಲಿಂಗಾಯತ ಧರ್ಮಗಳು ದೊಡ್ಡ ಪ್ರಮಾಣದಲ್ಲಿ




ಬೆಳೆದವು. ಹಿಂದೂ ಸಾಮಾಜಿಕ ವ್ಯವಸ್ಥೆಯ ವರ್ಣಾಶ್ರಮ ಪದ್ಧತಿಯಲ್ಲಿ ಧರ್ಮವನ್ನು ಕಾಪಾಡಿ ಬೆಳೆಸುವುದು ರಾಜನ ಆದ್ಯ ಕರ್ತವ್ಯವಾಗಿತ್ತು. ಹೀಗೆ ಬಹುತೇಕ ರಾಜಕೀಯ ವಿಷಯಗಳನ್ನು ಧರ್ಮದಿಂದ ಬೇರ್ಪಡಿಸುವುದು ಆಗ ಕಷ್ಟಸಾಧ್ಯವಾಗಿತ್ತು.

ಈಗ ಧಾರ್ಮಿಕ ನಂಬಿಕೆ, ವಿಚಾರ–ಆಚಾರಗಳಲ್ಲಿ ಜನರು ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಧಾರ್ಮಿಕ ಸಂಗತಿಗಳನ್ನು ತರ್ಕಬದ್ಧವಾಗಿ ಚರ್ಚಿಸಬಹುದಾಗಿದೆ. ಆದ್ದರಿಂದಲೇ ಇಂದು 'ಜಾತ್ಯತೀತ' ಎಂಬ ತತ್ವವು ಜನಪ್ರಿಯವಾಗಿದೆ. ಅದು ಯುರೋಪ್‌ನ ಪುನರುತ್ಥಾನ ಕಾಲದಲ್ಲಿ ರಾಜಕೀಯ ವಿಷಯಗಳಲ್ಲಿ ಚರ್ಚ್ ಪ್ರಭಾವವನ್ನು ನಿಯಂತ್ರಿಸುವ ಪ್ರಯತ್ನಗಳಿಂದ ಬೆಳೆದ ಸಿದ್ಧಾಂತ. ಅದರಿಂದ ಯುರೋಪ್‌ನ ಬಹುತೇಕ ದೇಶಗಳು ರಾಜಕೀಯವನ್ನು ಧರ್ಮದಿಂದ ಬೇರ್ಪಡಿಸಿಕೊಂಡಿವೆ.

ನಮ್ಮ ಸಂವಿಧಾನ ರಚನಾಕಾರರು ಪಾಶ್ಚಾತ್ಯ ಮಾದರಿಗಳಿಂದಲೇ ವಿವಿಧ ಪರಿಕಲ್ಪನೆಗಳನ್ನು ಆಯ್ದುಕೊಂಡರು. ಬ್ರಿಟನ್ನಿನ ಪಾರ್ಲಿಮೆಂಟರಿ ಪದ್ಧತಿ, ಐರ್ಲೆಂಡ್‌ನ ನಿರ್ದೇಶಕ ತತ್ವಗಳು, ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ ಮೂಲಭೂತ ಹಕ್ಕುಗಳು ಮತ್ತು ಸ್ವತಂತ್ರ ನ್ಯಾಯಪದ್ಧತಿ... ನಾವು ಎರವಲು ಪಡೆದುಕೊಂಡ ಸಿದ್ಧಾಂತಗಳಾಗಿವೆ. ಸಮಾನತೆ, ಗಣರಾಜ್ಯ, ಸಮನ್ಯಾಯ, ಜಾತ್ಯತೀತ ತತ್ವಗಳು ನಮ್ಮ ಸಂವಿಧಾನದ ಜೀವಾಳಗಳು. ಅವು ಅಮೆರಿಕ ಮತ್ತು ಫ್ರೆಂಚ್ ಕ್ರಾಂತಿಗಳಿಗೆ ಆದರ್ಶಗಳಾಗಿದ್ದವು. ನಮ್ಮ ದೇಶದಲ್ಲಿ ಆದರ್ಶಗಳಿಗೂ ಮತ್ತು ನಿತ್ಯ ಜೀವನದ ವಾಸ್ತವಿಕ ಆಗುಹೋಗುಗಳಿಗೂ ಬಹಳ ವ್ಯತ್ಯಾಸವಿದೆ. ಅವುಗಳ ನಡುವಿನ ಅಂತರಗಳೇ ಅವಾಂತರಗಳಾಗುತ್ತವೆ. ಹಿಂದೆಂದೂ ಸಮಾನತೆಯನ್ನು ಕಾಣದ, ಯಜಮಾನಿಕೆ ಮನೋಭಾವದ, ಧಾರ್ಮಿಕ ಗೊಂದಲಗಳ ಬೀಡಾದ ಭಾರತದಲ್ಲಿ ಪಾಶ್ಚಾತ್ಯ ಮಾದರಿಯ ಸಂವಿಧಾನದ ಪ್ರಯೋಗವು ಪಾಳು ಭೂಮಿಯಲ್ಲಿ ಹುಲುಸಾಗಿ ಬೆಳೆಯುವ ಬೀಜಗಳನ್ನು ಬಿತ್ತಿದಂತಾಗಿದೆ!

# ನೀಲಗಾರ ಮಹಾದೇವಸ್ವಾಮಿ ಎಂಬ ಜಾನಪದ ಗಾರುಡಿಗ

ಇಂಥವರು

ಜನಪದ ಗೀತೆಗಳನ್ನೇ ಉಸಿರಾಡುವ ಮಹಾದೇವಸ್ವಾಮಿ ಅವರು ಮಳವಳ್ಳಿಯ ಬಸ್ ನಿಲ್ದಾಣದಲ್ಲಿ ಹಾಡುತ್ತಾ, ಭಿಕ್ಷೆ ಬೇಡುತ್ತಾ ಊರೂರು ಸುತ್ತಿದವರು. ಅವರ ಬದುಕೇ ಜನಪದ ಗೀತೆಗಳ ಭಂಡಾರ, ಸಾವಿರಾರು ಗೀತೆಗಳನ್ನು ಉಸಿರಾಡುವ ಅವರು ಕೇಳುಗರ ಮನಸೂರೆಗೊಂಡವರು. ನೀಲಗಾರರ ಸಂಪ್ರದಾಯದ ಜೊತೆಗೆ ದೇವರಗುಡ್ಡ ಸಂಪ್ರದಾಯದ ಮಲೆ ಮಹಾದೇಶ್ವರ ಗೀತೆಗಳನ್ನೂ ಮೈಗೂಡಿಸಿಕೊಂಡು ರಾಜ್ಯದಾದ್ಯಂತ ತಮ್ಮ ನಾದ ಸುಧೆ ಹರಿಸಿದ್ದಾರೆ.

ಮಹಾದೇವಸ್ವಾಮಿ ಅವರು 7 ರಾತ್ರಿಗಳ ಕಾಲ ಮಲೆ ಮಹಾದೇಶ್ವರನ 7 ಅಧ್ಯಾಯದ ಕತೆ ಹೇಳುತ್ತಾರೆ. 4 ರಾತ್ರಿಗಳ ಕಾಲ ಮಂಟೆಸ್ವಾಮಿ ಕತೆ ಬಿಚ್ಚಿಡುತ್ತಾರೆ. ಸಂಕಮ್ಮ, ನಂಜುಂಡೇಶ್ವರ, ಬಿಳಿಗಿರಿ ರಂಗನಾಥ, ನೀಲವೇಣಿ, ಚಾಮುಂಡೇಶ್ವರಿ ಮುಂತಾದ ಜನಪದ ಕತೆಗಳನ್ನು ತಮ್ಮ ನೆನಪಿನ ಅಂಗಳದಲ್ಲಿ ತುಂಬಿಕೊಂಡಿದ್ದಾರೆ. ಹೆಗಲ ಮೇಲೆ ತಂಬೂರಿ, ಬೆರಳಲ್ಲಿ ಗಗ್ರ ಹಿಡಿದು ಕೂತರೆ ಹಗಲು– ರಾತ್ರಿಗಳ ವ್ಯತ್ಯಾಸ ಮರೆತು ಹೋಗುತ್ತದೆ.



ಮಹಾದೇವಸ್ವಾಮಿ ಅವರು ಬಸ್ ಹತ್ತಿ ಪ್ರಯಾಣಿಕರಿಂದ ಭಿಕ್ಷೆ ಪಡೆದು ಹೊಟ್ಟೆ ಪಾಡು ಮಾಡುತ್ತಿದ್ದರು. ಹಳ್ಳಿಗಳಿಗೆ ತೆರಳಿ ಬೀದಿಬೀದಿಯಲ್ಲಿ ಹಾಡಿ ದವಸ ಧಾನ್ಯ ಸಂಗ್ರಹಿಸುತ್ತಿದ್ದರು. ಜನರು ಅವರನ್ನು ಮನೆಗೆ ಕರೆದುಕೊಂಡು ಹೋಗಿ ತಮ್ಮ ಮನೆದೇವರ ಮೇಲೆ ಪದ ಕಟ್ಟಿ ಹಾಡಿಸುತ್ತಿದ್ದರು.

ಅವರು ಮಾದಯ್ಯ– ಮಂಚಮ್ಮ ಅವರ ಪುತ್ರ, ತಂದೆ ಶಹನಾಯಿ ನುಡಿಸುತ್ತಿದ್ದರು. ತಾಯಿ ಸೋಬಾನೆ ಪದ ಹಾಡುಗಾರ್ತಿ. ಮನೆಯಲ್ಲೇ ಜನಪದ ಗೀತೆಗಳು ತುಂಬಿದ್ದವು. ಜೊತೆಗೆ ಅವರ ಡಾ.ರಾಜ್‌ಕುಮಾರ್ ಚಿತ್ರಗಳ ಅಪ್ಪಟ ಅಭಿಮಾನಿ. ಆರಂಭದಲ್ಲಿ ರಾಜ್‌ಕುಮಾರ್ ಗೀತೆಗಳನ್ನು ಮನಸಾರೆ ಹಾಡುತ್ತಿದ್ದರು. ಅವರ ಪ್ರತಿಭೆ ಗುರುತಿಸಿದ ಉಳ್ಳಂಬಳ್ಳಿ ಮಹದೇವಪ್ಪ ಅವರು ಜನಪದ ಕತೆಗಳ ಪಾಠ ಹೇಳಿಕೊಟ್ಟರು.

ನೂರಾರು ಕತೆಗಳನ್ನು ಮನದಾಳದಲ್ಲಿಟ್ಟುಕೊಂಡ ಮಹಾದೇವಸ್ವಾಮಿ ಅವರು ಬಸ್ ನಿಲ್ದಾಣದಲ್ಲಿ ಭಿಕ್ಷೆ ಬೇಡುವುದನ್ನು ಬಿಟ್ಟು ತಮ್ಮದೇ ತಂಡ ಕಟ್ಟಿಕೊಂಡು ರಾಜ್ಯದಾದ್ಯಂತ ಕತೆಗಳಿಗೆ ಹಾಡು ಕಟ್ಟಿ ಗಾಯನ ಪ್ರಸ್ತುತಪಡಿಸಿದರು. ಮೈಸೂರು ದಸರಾ ಸೇರಿದಂತೆ ಹಲವು ಉತ್ಸವಗಳಲ್ಲಿ ತಮ್ಮ ಗಾನಗಂಗೆ ಹರಿಸಿದರು.

ಕ್ಯಾಸೆಟ್ ಲೋಕದಲ್ಲಿ ಮಹಾದೇವಸ್ವಾಮಿ ಅವರ ಸಾಧನೆ ಬಲು ದೊಡ್ಡದು. 90 ದಶಕದಲ್ಲಿ ಅವರ ಕ್ಯಾಸೆಟ್‌ಗಳು ಕೇಕ್ ಮಾದರಿ ಮಾರಾಟವಾಗುತ್ತಿದ್ದವು. ಸಿದ್ದಪ್ಪಾಜಿ ಪವಾಡ, ಮಹಾದೇಶ್ವರ ಮಹಿಮೆ, ಶಿವಶರಣೆ ಸಂಕಮ್ಮ, ಬೇವಿನಹಟ್ಟಿ ಕಾಳಮ್ಮ, ಆಲಂಬೋಡಿ ಜುಂಜೇಗೌಡ, ನೀಲವೇಣಿ, ಚನ್ನಿಗರಾಮ, ಚಾಮುಂಡೇಶ್ವರಿ ಸೇರಿ 150ಕ್ಕೂ ಹೆಚ್ಚು ಕೆಸೆಟ್, ಸಿಡಿಗಳು ಹೊರಬಂದಿವೆ. 'ಮಾದೇಶ್ವರ... ದಯೆ ಬಾರದೆ, ಬರಿದಾದ ಬಾಳಲ್ಲಿ ಬರಬಾರದೆ' ಗೀತೆ ಈಗಲೂ ಜನರ ನಾಲಗೆಯ ಮೇಲೆ ನಲಿದಾಡುತ್ತಿದೆ.

ಮೈಸೂರು ಆಕಾಶವಾಣಿ ಎ ಶ್ರೇಣಿ ಕಲಾವಿದರೂ ಆಗಿರುವ ಅವರು ಸಾವಿರಾರು ಗೀತೆಗಳಿಗೆ ಜೀವ ತುಂಬಿದ್ದಾರೆ. ಅಮೆರಿಕದಲ್ಲಿ ಕನ್ನಡ ಜನಪದ ಗೀತೆ ಮೊಳಗಿಸಿದ್ದಾರೆ. ಅವರ ಸೇವೆಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ದೊಡ್ಡಮನೆ ಸಿರಿ ಪ್ರಶಸ್ತಿ, ಕಲಾ ಕೇಸರಿ, ಜನಾನಪದ ಜಂಗಮ ಪ್ರಶಸ್ತಿ ಸಂದಿವೆ. ಈಗ 63ನೇ ವಯಸ್ಸಿನಲ್ಲಿ ಜಾನಪದ ಅಕಾಡೆಮಿ ಅವರ ಸೇವೆ ಗುರುತಿಸಿ ಪ್ರಶಸ್ತಿ ಘೋಷಿಸಿದೆ.

ಇಂತಹ ಮಹಾದೇವ ಸ್ವಾಮಿಗೆ ಕರ್ನಾಟಕ ಜಾನಪದ ಅಕಾಡೆಮಿ ನೀಡುತ್ತಿರುವ 2021ನೇ ಸಾಲಿನ ಜಾನಪದ ಅಕಾಡೆಮಿ ವಾರ್ಷಿಕ ಪ್ರಶಸ್ತಿಗೆ ಭಾಜನಾಗಿರುವುದು ಜಾನಪದಕ್ಕೆ ಸಂದ ಜಯ.

# ಕೊಟ್ಟು, ಕಸಿಯುವ ಪ್ರವೃತ್ತಿ ಸರ್ಕಾರದ ನಡೆ



ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

ಅನಾವರಣ

ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಬಾಗಿಯಾಗಿ
ಚಂದಾದಾರರ ವಿವರ

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

ಒಂದು ಕಡೆ ಕೊಟ್ಟು ಇನ್ನೊಂದು ಕಡೆ ಕಸಿಯುವ ಪ್ರವೃತ್ತಿಯಂತಿದೆ ಕೇಂದ್ರ ಸರ್ಕಾರದ ಧೋರಣೆ. ರೈತರ ಬಗ್ಗೆ ಬಾಯಿತುಂಬಾ ಹೊಗಳುವ ಅನ್ನದಾತನ ಸುಖವೇ ಸರ್ಕಾರಗಳ ಸೋಪಾನ ಎಂದೆಲ್ಲೇ ಬೊಗಳೆ ಬಿಡುವ ಆಡಳಿತ ಪಕ್ಷಗಳು ಇದ್ದಕ್ಕಿದ್ದಂತೆ ರೈತರ ಮೇಲೆ ಕರ ಹೇರುವುದು, ಕೃಷಿ ಚಟುವಟಿಕೆಗಳ ಸಲಕರಣೆಗಳ ಬೆಲೆ ಏರಿಕೆ ಮಾಡುವುದು ನಡೆಯುತ್ತಲೆ ಇದೆ ಆದರೆ ಈಗ ಇನ್ನೂ ಒಂದು ಹೆಜ್ಜೆ ಮುಂದೋಗಿ ಬೆಂಬಲ ಬೆಲೆಯಡಿ ರಾಗಿ ಖರೀದಿಸುವ ಪ್ರಮಾಣವನ್ನು2.10 ಲಕ್ಷ ಟನ್‌ಗೆ ಸೀಮಿತಗೊಳಿಸುವ ಮೂಲಕ ರಾಗಿ ಬೆಳೆಗಾರರಿಗೆ ನಿಜಕ್ಕೂ ಶಾಕ್ ನೀಡಿದೆ.

ಈಗಾಗಲೇ ರೈತರು ಬೆಂಬಿಡದ ಮುಂಗಾರು ಮಳೆಯಿಂದ ಬೆಳದಿದ್ದ ಬೆಳೆ ಮಳೆಗೆ ಕೊಚ್ಚಿಹೋಗಿದೆ ಕಡಲೆ, ಶೇಂಗ, ಜೋಳ ಮೊದಲಾದ ಫಸಲು ಕೊಚ್ಚಿ ಹೋಗಿ ಬದುಕು ಒಂದು ರೀತಿ ದುಸ್ತರವಾದ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಹೊರಡಿಸಿರುವ ಈ ಆದೇಶ ನಿಜಕ್ಕೂ ರೈತರ ಬದುಕನ್ನು ಕಿತ್ತು ತಿನ್ನುವ ಪರಿಸ್ಥಿತಿಗೆ ತಂದೊಡ್ಡಿದೆ.

ಇಂಥ ಪರಿಸ್ಥಿತಿಯಲ್ಲಿ ಬೆಂಬಲ ಬೆಲೆಯಡಿ ರಾಗಿ ಖರೀದಿ ಮೇಲೆ ಮಿತಿ ವಿಧಿಸುವಂತಹ ಕ್ರಮಕ್ಕೆ ಸರ್ಕಾರ ಮುಂದಾಗ ಬಾರದಿತ್ತು. ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಬೆಂಬಲಕ್ಕೆ ನಿಲ್ಲಬೇಕಾಗಿತ್ತು. ಸಾಲ ಮಾಡಿ, ಹವಾಮಾನ ವೈಪರೀತ್ಯ ಎದುರಿಸುತ್ತಾ, ಪರಿಶ್ರಮದೊಂದಿಗೆ ಬೆಳೆ ಬೆಳೆದಿರುವ ರೈತರ ನೆರವಿಗೆ ಧಾವಿಸಬೇಕಿದ್ದ ಸರ್ಕಾರವೇ ಇಂಥ ಪರಿಸ್ಥಿತಿಗೆ ತಂದೊಡ್ಡಿದರೆ ರೈತನ ಪಾಡೇನು ಎನ್ನುವುದನ್ನು ಯೋಚಿಸಬೇಕಿತ್ತು. ಮಾತೆತ್ತಿದ್ದರೆ ನಮ್ಮದು ರೈತ ಪರ ಸರ್ಕಾರ ಎಂದು ಹೇಳಿಕೊಳ್ಳುವ ಸರ್ಕಾರಗಳು ಇದ್ದಕ್ಕಿದ್ದಂತೆ ಇಂಥ ಅದೇಶಗಳನ್ನು ಹೊರಡಿಸುವುದನ್ನು ನೋಡಿದರೆ ಈ ಸರ್ಕಾರಗಳು ರೈತರ ಪರವೇ ಎನ್ನುವ ಪ್ರಶ್ನೆಗಳು ಉದ್ಭವವಾಗುತ್ತವೆ.

ರೈತರ ಆದಾಯ ದ್ವಿಗುಣ ಮಾಡುವುದಾಗಿ ಹೇಳುವ ಕೇಂದ್ರ ಸರ್ಕಾರ, ಕೃಷಿಕರ ಕನಿಷ್ಠ ವರಮಾನಕ್ಕೂ ಸಂಚಕಾರ ತರುವಂತಹ ಇಂತಹ ಅಪಕ್ವ ನಿರ್ಧಾರಗಳನ್ನು ಮಾಡಬಾರದು. ಸಂಕಷ್ಟದಲ್ಲಿರುವ ರೈತರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಸಕಾರಾತ್ಮಕವಾಗಿ ಸ್ಪಂದಿಸಬೇಕು. ಸ್ಥಗಿತಗೊಳಿಸಿರುವ ನೋಂದಣಿ ಪ್ರಕ್ರಿಯೆಯನ್ನು ಮತ್ತೆ ಆರಂಭಿಸಬೇಕು.

ಕರ್ನಾಟಕದ ರೈತರು ಹೆಚ್ಚು ಮಳೆಯಿಂದ ರೈತ ಕಂಗಾಲಾಗಿದ್ದು ಈ ನಡುವೆಯೇ ಅಷ್ಟು ಇಷ್ಟು ಬೆಳೆಯನ್ನು ಕಂಡಿದ್ದಾನೆ ಈ ಕಷ್ಟದ ಮಧ್ಯೆಯೂ ಬೆಳದ ರಾಜ್ಯದಲ್ಲಿ ಸುಮಾರು 4.50 ಲಕ್ಷ



ಟನ್‌ಗಳಷ್ಟು ರಾಗಿ ಫಸಲು ಬರುವ ಅಂದಾಜು ಮಾಡಲಾಗಿತ್ತು. ಇಳುವರಿ ಹೆಚ್ಚಾಗುತ್ತಿದ್ದಂತೆ ಮಾರುಕಟ್ಟೆಯಲ್ಲಿ ರಾಗಿಯ ದರ ಕುಸಿಯಿತು. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ ಜನವರಿ 1ರಿಂದ ರಾಗಿ ಖರೀದಿ ಪ್ರಕ್ರಿಯೆ ಆರಂಭಿಸಿದವು. ಕ್ವಿಂಟಲ್ ರಾಗಿಗೆ 3,377 ದರ ನಿಗದಿಪಡಿಸಿ, ಒಂದು ಎಕರೆಗೆ 10 ಕ್ವಿಂಟಲ್‌ನಂತೆ, ಪ್ರತೀ ರೈತನಿಂದ ಗರಿಷ್ಠ 20 ಕ್ವಿಂಟಲ್ ಖರೀದಿಸುವುದಾಗಿ ರಾಜ್ಯ ಸರ್ಕಾರ ಪ್ರಕಟಿಸಿತು. ರಾಗಿ ಬೆಳೆದವರಿಗೆ ನೋಂದಣಿ ಮಾಡಿಸಿಕೊಳ್ಳುವಂತೆಯೂ ಸೂಚಿಸಿತ್ತು. ನೋಂದಣಿ ಸೇರಿ ಎಲ್ಲ ಪ್ರಕ್ರಿಯೆಗಳು ಸರಾಗವಾಗಿ ಸಾಗುತ್ತಿರು ವಾಗಲೇ, ಬೆಂಬಲ ಬೆಲೆಯಡಿ ರಾಗಿ ಖರೀದಿಸುವ ಪ್ರಮಾಣವನ್ನು ಈ ವರ್ಷ 2.10 ಲಕ್ಷ ಟನ್‌ಗೆ ಸೀಮಿತಗೊಳಿಸಲು ಸರ್ಕಾರ ನಿರ್ಧರಿಸಿದೆ. ಆ ಮಿತಿ ತಲುಪಿದ್ದರಿಂದ ಸದ್ಯ ರಾಗಿ ಖರೀದಿಯ ನೋಂದಣಿ ಪ್ರಕ್ರಿಯೆ ಸ್ಥಗಿತಗೊಂಡಿದೆ. ಈವರೆಗೆ ನೋಂದಣಿ ಮಾಡಿಸಿದವರಿಂದ ಮಾತ್ರ ರಾಗಿ ಖರೀದಿಸುವುದಾಗಿ ಅಧಿಕಾರಿಗಳು ಹೇಳುತ್ತಿದ್ದಾರೆ ಎನ್ನಲಾಗಿದೆ.

ಸಂಕಷ್ಟದಲ್ಲಿರುವ ರೈತರ ನೆರವಿಗೆ ಬರಬೇಕಿದ್ದ ಸರ್ಕಾರ, ಇಂತಹ ನಿಲುವು ತಾಳಿರುವುದು ಆಶ್ಚರ್ಯ ಉಂಟುಮಾಡಿದೆ. ರಾಗಿ ಬೆಳೆದವರು ಇದರಿಂದಾಗಿ ತೀವ್ರ ಆಘಾತ ಅನುಭವಿಸುತ್ತಿದ್ದಾರೆ. ಈ ಹಿಂದೆ ರಾಗಿ ಖರೀದಿ ಮೇಲೆ ಇಂತಹ ಮಿತಿ ವಿಧಿಸಿರಲಿಲ್ಲ. ಆಹಾರ ಭದ್ರತೆಯ ದೃಷ್ಟಿಯಿಂದ ರಾಗಿ, ಭತ್ತದಂತಹ ಆಹಾರ ಧಾನ್ಯಗಳನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವಾಗ ನಿರ್ಬಂಧ ವಿಧಿಸುವುದು ಸೂಕ್ತವಲ್ಲ . ಬೆಂಬಲ ಬೆಲೆಯಲ್ಲಿ ರಾಗಿಯನ್ನು ಖರೀದಿಸದೇ ಹೋದರೆ ರೈತರು ತಾವು ಬೆಳೆದ ಫಸಲನ್ನು ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುವ ಅನಿವಾರ್ಯ ಸೃಷ್ಟಿಯಾಗುತ್ತದೆ. ಅಪರೂಪಕ್ಕೆ ಉತ್ತಮ ಫಸಲು ಕಂಡಿರುವ ರೈತರು, ಕಡಿಮೆ ಬೆಲೆಗೆ ರಾಗಿ ಮಾರಿದರೆ, ಬೆಳೆದ ಖರ್ಚೂ ಹುಟ್ಟುವುದಿಲ.

ಲಾಕ್‌ಡೌನ್ ಮತ್ತಿತರ ಕಾರಣಗಳಿಂದಾಗಿ ನಗರ ಬಿಟ್ಟು ಹಳ್ಳಿ ಸೇರಿರುವ ಅನೇಕ ಯುವಕರು ಕೃಷಿಯತ್ತ ಒಲವು ತೋರಿದ್ದು ರಾಗಿ ಉತ್ಪಾದನೆ ಹೆಚ್ಚಲು ಕಾರಣವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಬೆಂಬಲ ಬೆಲೆಯಡಿ ರಾಗಿ ಖರೀದಿ ಮೇಲೆ ಮಿತಿ ವಿಧಿಸುವಂತಹ ಕ್ರಮಕ್ಕೆ ಸರ್ಕಾರ ಮುಂದಾಗ ಬಾರದಿತ್ತು. ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಬೆಂಬಲಕ್ಕೆ ನಿಲ್ಲಬೇಕಾಗಿತ್ತು.

ಖರ್ಚು ವೆಚ್ಚಮಾರುಕಟ್ಟೆಯ ಕಾರಣಕ್ಕಾಗಿ ರಾಗಿಯ ಹೊಲ, ಭತ್ತದ ಗದ್ದೆಗಳೆಲ್ಲ ಅಡಿಕೆ ತೋಟಗಳಾಗುತ್ತಿವೆ. ಇದು ಭವಿಷ್ಯದಲ್ಲಿ ಆಹಾರ ಭದ್ರತೆಗೆ ಧಕ್ಕೆ ಉಂಟುಮಾಡುವುದರ ಜೊತೆಗೆ, ಜಲಕ್ಷಾಮಕ್ಕೂ ಕಾರಣವಾಗುವ ಸಾಧ್ಯತೆ ಇದೆ. ಹೀಗಾಗಿ ಸರ್ಕಾರ ತಕ್ಷಣ ಎಚ್ಚೆತ್ತುಕೊಂಡು, ರಾಗಿ ಬೆಳೆಗಾರರ ನೆರವಿಗೆ ಧಾವಿಸಬೇಕು.

ಅನೇಕ ಬಾರಿ ಕೇಂದ್ರ ಸರ್ಕಾರ ಇಂತ ನಿರ್ಧಾರಗಳನ್ನು ಪ್ರಕಟಿಸುವ ಮೂಲಕ ರೈತರ ಬದುಕನ್ನು ದುಸ್ತರ ಮಾಡುವ ಪ್ರವೃತ್ತಿಗೆ ಇಳಿದುಬಿಡುತ್ತವೆ . ತಜ್ಞರು ಈ ಬಗ್ಗೆ ಹೆಚ್ಚು ಗಮನಹರಿಸಬೇಕಿದೆ ರೈತರು ಕಷ್ಟ ಪಟ್ಟು ಬೆವರ ಸುರಿಸಿ ಬೆಳದ ಫಸಲಿಗೆ ಅಗತ್ಯ ಬೆಲೆ ಸಿಗದೆ ಹೋದರೆ ಆತ ಏನು ಮಾಡಲು ಸಾಧ್ಯ ಮತ್ತೇ ಸಾಲ ಶೂಲಕ್ಕೆ ಬಿದ್ದು ಜೀವನವನ್ನೇ ಸಾಲದಲ್ಲಿ ಮುಳುಗುವ ಪರಿಸ್ಥಿತಿ ಉಂಟಾಗುತ್ತದೆ ನಿಜವಾದ ರೈತರ ಬಗ್ಗೆ ಕಾಳಜಿ ಇದ್ದ ಸರ್ಕಾರಗಳು ಇಂತ ಅವೈಜ್ಞಾನಿಕ ನಿರ್ಧಾರಗಳನ್ನು ತಗೆದುಕೊಳ್ಳುವುದನ್ನು ನಿಲ್ಲಿಸಬೇಕು.

# ಹಳೆಯ ವೀಡಿಯೋ ಮಹಾಬ್ರೇಕಿಂಗ್ ಹೇಗಾಗುತ್ತದೆ?

ಹಿಟ್ & ರನ್




ಇದೆಂಥ ವಿಪರ್ಯಾಸ ನೋಡಿ. ಎಲ್ಲಿಯವರೆಗೂ ಬಂದಿದೆ ನಮ್ಮ ಪರಸ್ಥಿತಿ. ಒಂದು ಸುದ್ದಿಯನ್ನು ದೃಡಪಡಿಸಿಕೊಳ್ಳದೆ ಬೇಕಾಬಿಟ್ಟಿ ಪ್ರಸಾರ ಮಾಡುವ ಟಿವಿ ಚಾನಲ್‌ಗಳ ಅವಸ್ಥೆ ಹೇಗಿದೆ ನೋಡಿ.

ಜೆಸಿಪಿ ನಾರಾಯಣ ಪರಪ್ಪನ ಅಗ್ರಹಾರದಲ್ಲಿ ಜೈಲರ್‌ಗಳಿಗೆ ಹಣ ಕೊಟ್ಟು ಬೇಕಾದ್ದನ್ನೆಲ್ಲ ತರಸಿಕೊಳ್ಳುತ್ತಿದ್ದಾನೆ ಎನ್ನುವ ಸುದ್ದಿಯನ್ನು ಬ್ರೇಕಿಂಗ್ ಮತ್ತು ಇದು ನಮ್ಮ ಚಾನಲ್‌ನಲ್ಲಿ ಮಾತ್ರ ನಾವು ಬ್ರೇಕಿಂಗ್ ಮಾಡುತ್ತೇವೆ ನಮ್ಮನ್ನು ಇತರರು ಫಾಲೋಮಾಡುತ್ತಾರೆ ಎಂದು ಬೊಬ್ಬೆ ಹೊಡೆದುಕೊಂಡ ಸಾರ್ವಜನಿಕ ಚಾನಲ್ ಪ್ರಸಾರ್ ಮಾಡಿದ್ದು ಏನನ್ನು ಮೂರು ವರ್ಷದ ಹಿಂದಿನ ವೀಡಿಯೋವನ್ನು.

ಅಸಲಿಗೆ ಸದ್ಯ ಜೆಸಿಪಿ ನಾರಾಯಣ ಜೈಲಿನಲ್ಲಿ ಇಲ್ಲ ಮನೆಯಲ್ಲಿ ಅರಮಾಗಿದ್ದಾರೆ ಅವರು ಜೈಲಿನಲ್ಲಿದ್ದಾರೆ ಅವರು ಜೈಲರ್‌ಗಳಿಗೆ ಹಣ ಕೊಟ್ಟು ಏನು ಬೇಕಾದರೂ ತರೆಸಿಕೊಳ್ಳುತ್ತಿದ್ದಾರೆ ಎಂದು ಗಂಟೆಗಟ್ಟಲೆ ಮಹಾಬ್ರೇಕಿಂಗ್ ಮಾಡಿದ ರೀತಿಯಲ್ಲಿ ಬೊಬ್ಬೆ ಹೊಡೆದು ಕೊಂಡ ಸುದ್ದಿ ನಿಜಕ್ಕೂ ಹಾಸ್ಯಸ್ಪದವಾಗಿತ್ತು. ಯಾಕೆಂದರೆ ಜೆಸಿಪಿ ನಾರಾಯಣ ಮೂರು ವರ್ಷಗಳ ಹಿಂದೆ ಜೈಲಿನಲ್ಲಿ ಇದ್ದಾಗ ತಗೆದ ಈ ವೀಡಿಯೋವನ್ನು ಈಗ ಮಹಾಬ್ರೇಕಿಂಗ್ ಸುದ್ದಿಯನ್ನಾಗಿ ಮಾಡುತ್ತಾರೆ ಎಂದರೆ ಚಾನಲ್‌ಗಳು ಎಲ್ಲಿಯವರೆಗೂ ಬಂದು ನಿಂತಿವೆ ನೋಡಿ.. ಒಂದು ಸುದ್ದಿಯನ್ನು ದೃಡಪಡಿಸಿಕೊಳ್ಳದೆ ಯಾರೋ ವೀಡಿಯೋವನ್ನು ಕೊಟ್ಟರು ಎನ್ನುವ ಮಾತ್ರಕ್ಕೆ ಅದರ ಸಾಚಾತನವನ್ನು ಪರಿಶೀಲಿಸದೆ ಬ್ರೆಕಿಂಗ್ ಸುದ್ದಿ ಮಾಡುವ ಪತ್ರಕರ್ತರ ವರ್ತನೆಗೆ ಏನನ್ನಬೇಕೋ ಗೊತ್ತಿಲ್ಲ. ಈಗ ಅಂತ ಘಟನೆಗಳು ಪರಪ್ಪನ ಅಗ್ರಹಾರದ ಜೈಲಿನಲ್ಲಿ ನಡೆಯುತ್ತಿರುವಬಹುದು ಇಲ್ಲ ಅಂತಅಲ್ಲ ಆದರೆ ಜೆಸಿಪಿ ನಾರಾಯಣ ಎಂದು ಹೇಳಿಕೊಂಡು ವಿಡಿಯೋ ತೋರಿಸಿ ಪ್ರಸಾರ ಮಡಿದ ಆ ವೀಡಿಯೋ ಮೂರು ವರ್ಷದ ಹಿಂದಿನಿದ್ದ ಆಗ ಜೈಲು ಸೂಪರಿಡೆಂಟೆಂಟ್ ಇದ್ದದ್ದು ಸೋಮಶೇಖರ್ ಅಂತ ಈಗ ಇರುವುದು ರಂಗನಾಥ ಎನ್ನುವವರು. ಆದರೆ ಸುದ್ದಿಯನ್ನು ಕೊಡುವ ಬರಾಟೆಯಲ್ಲಿ ಗೃಹಸಚಿವರೇ ಇತ್ತ ನೋಡಿ ಎಂದು ದೊಡ್ಡದಾಗಿ ಬಿಂಬಿಸಿಕೊಂಡ ಚಾನಲ್‌ಗಳ ಮೊದಲು ಈ ಸುದ್ದಿ ಯಾವಾಗಿನದ್ದು ಎಷ್ಟು ಹಳೆಯದು ಎನ್ನುವುದನ್ನು ದೃಡಪಡಿಸಿಕೊಳ್ಳದೆ ಮಾಡಿದ ಅವಾಂತರಕ್ಕೆ ಏನೆನ್ನಬೇಕು ಹೇಳಿ.

ಇದೆಲ್ಲ ಆದ ಮೇಲೆ ಸಿಎಂ ಹತ್ತಿರ ಈ ಬಗ್ಗೆ ಪ್ರತಿಕ್ರಿಯೇ ಬೇರೆ ಕೇಳಿದ್ದಾರೆ ಆದರೆ ಅವರೆ ರಾಜಕೀಯ ಜಂಜಾಟದಲ್ಲಿರುವಾಗ ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದಿದ್ದಾರೆ. ಆದರೆ ಗೃಹಸಚಿವರು ಎಂತಾ ಮೂರ್ಖರು ಎಂದರೆ ಅದರ ಸಾಚಾತನದ ಬಗ್ಗೆ ಯೋಚಿಸದೆ ತನಿಖೆ ಮಾಡಿಸುತ್ತೇನೆ ಎಂದಿದ್ದಾರೆ. ಒಂದು ನಿಮಿಷ ಅದರ ಸತ್ಯಾಸತ್ಯತೆಯ ಬಗ್ಗೆ ಜೈಲರ್‌ಗೆ ಪೋನಾಯಿಸಿದ್ದರೆ ಅದು ಯಾವ ವೀಡಿಯೋ ಎಂದು ಗೊತ್ತಾಗುತ್ತಿತ್ತು ಅಗ ಅದಕ್ಕೆ ತಕ್ಕನಾಗಿ ಉತ್ತರ ನೀಡಬಹುದಿತ್ತು. ಏನೇ ಆಗಲಿ ನಮ್ಮ ಪತ್ರಿಕೋದ್ಯಮ ಎನ್ನುವ ಈ ವೃತ್ತಿಯಲ್ಲಿ ಕ್ರೈಮ್ ವರದಿಗಾರರು ಯಾವ ವಿಡೀಯೋ ಎನ್ನುವುದನ್ನು ಪರಿಶೀಲನೆ ಮಾಡದೆ ಅಸಲಿಗೆ ಜೆಸಿಪಿ ನಾರಾಯಣ ಜೈಲಿನಲ್ಲಿದ್ದಾನೆಯೇ ಇಲ್ಲವೇ ಎನ್ನುವುದನ್ನು ದೃಡಪಡಿಸಿಕೊಳ್ಳದೆ ಮಾಡಿದ ಅವಾಂತರಕ್ಕೆ ಸತ್ಯ ಗೊತ್ತಿದ್ದವರು ಬಿದ್ದು ಬಿದ್ದು ನಕ್ಕಿದ್ದಾರೆ.,. ಆದರೂ ಈ ಚಾನಲ್‌ಗಳಿಗೆ ಬುದ್ದಿಯಂತೂ ಬಂದಿಲ್ಲ ಇಂತ ಹಲವಾರು ಯಡವಟ್ಟುಗಳನ್ನು ಮಾಡುತ್ತಲೇ ಬಂದಿದ್ದಾರೆ.

# ಜನರ ದಿಕ್ಕು ತಪ್ಪಿಸಲು ಈ ಹಿಜಾಬ್ ವಿವಾದ



ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಜನರಿಗೆ ನೀಡಿರುವ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲಗೊಂಡಿದೆ.ಹೆಚ್ಚುತ್ತಿರುವ ಬೆಲೆ ಏರಿಕೆ,ನಿರುದ್ಯೋಗ ,ಮುಂತಾದ ಸಮಸ್ಯೆಗಳ ನ್ನು ಬಗೆಹರಿಸಲಾಗದೇ ಕೋಮು ರಾಜಕೀಯ ಮೂಲಕ ಮತ್ತೆ ಚುನಾವಣೆ ಗೆಲ್ಲಲು ಮಸಲತ್ತು ನಡೆಸಿದೆ.

ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ ಧರಿಸಿ ಶಾಲೆಗೆ ಬರಕೂಡದು ಅದು ಅಶಿಸ್ತು ಎಂದು ಕರ್ನಾಟಕದ ಶಿಕ್ಷಣ ಸಚಿವರು ಫರ್ಮಾನು ಹೊರಡಿಸಿದ್ದಾರೆ. ರಾಜಕೀಯ ಕಾರಣಗಳಿಗಾಗಿ ಇಂಥ ವಿಚಿತ್ರ ಆದೇಶಗಳು ಸರ್ಕಾರದ ಸೂತ್ರ ಹಿಡಿದವರಿಂದ ಬರುತ್ತಲೇ ಇವೆ. ಇವರ ಆದೇಶಕ್ಕೆ ಏನು ಕಾರಣ ಎಂದು ಎಲ್ಲರಿಗೂ ಗೊತ್ತಿದೆ.ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದರೆ ತಾವು ಕೇಸರಿ ಶಾಲು ಹಾಕಿಕೊಂಡು ಬರುವದಾಗಿ ಕೋಮುವಾದಿ ಸಂಘಟನೆಯೊಂದರ ವಿದ್ಯಾರ್ಥಿಗಳು ಬೆದರಿಕೆ ಹಾಕಿದ್ದನ್ನೇ ನೆಪ ಮಾಡಿಕೊಂಡು ಶಿಕ್ಷಣ ಮಂತ್ರಿ ಗಳು ಈ ಮಾತು ಹೇಳಿದ್ದಾರೆ.

ತೊಂಬತ್ತರ ದಶಕದಲ್ಲಿ ಅಯೋಧ್ಯೆಯ ಬಾಬರಿ ಮಸೀದೆ ನೆಲಸಮಗೊಂಡ ನಂತರ ಬಹುಮುಖಿ ಭಾರತದ ಪರಿಸ್ಥಿತಿ ಬದಲಾಗಿದೆ.ಧರ್ಮದ ಆಧಾರದಲ್ಲಿ ಭಾರತೀಯರನ್ನು ವಿಭಜಿಸುವಲ್ಲಿ ಕೋಮುವಾದಿ ಶಕ್ತಿಗಳು ಯಶಸ್ವಿ ಯಾಗಿವೆ.ಈ ವಿಭಜನೆಯ ಮೊದಲ ಬಲಿಪಶುಗಳು ಅಲ್ಪಸಂಖ್ಯಾತರಾಗಿದ್ದಾರೆ ಅದರಲ್ಲೂ ಮುಸಲ್ಮಾನರ ಪರಿಸ್ಥಿತಿ ದಾರುಣವಾಗಿದೆ .ಆರ್ಥಿಕ ವಾಗಿ ಸಾಮಾಜಿಕ ವಾಗಿ ಅವರ ಜೀವನ ಮಟ್ಟ ಕುಸಿದಿದೆ.ಆದರೆ ಅದನ್ನು ಬಾಯಿ ಬಿಟ್ಟು ಹೇಳುವ ಕೇಳುವ ಸ್ಥಿತಿಯಲ್ಲೂ ಅವರಿಲ್ಲ .ಏಕೆಂದರೆ ಈಗ ಅವರ ಮುಂದಿರುವ ಸವಾಲು ಬೇರೆಯದಾಗಿದೆ.

ಮುಸಲ್ಮಾನ ಸಮುದಾಯ ಬದಲಾವಣೆಗೆ ,ಸುಧಾರಣೆಗೆ ಮುಕ್ತವಾಗಬೇಕಾದರೆ ಮೊದಲು ಆ ಸಮುದಾಯವನ್ನು ಪ್ರತ್ಯೇಕಿಸಿ ದಾಳಿಗೆ ಗುರಿಪಡಿಸುವದು ನಿಲ್ಲಬೇಕು. ಭಾರತದ ಲ್ಲಿ ಕೋಮುವಾದಿ ಶಕ್ತಿಗಳ ನಿರಂತರ ಅಪಪ್ರಚಾರ ,ದಾಳಿ ನಿಲ್ಲುವವರೆಗೆ ಜಾಗತಿಕವಾಗಿ ಅಮೆರಿಕದ ಸಾಮ್ರಾಜ್ಯಶಾಹಿ ಉಗ್ರರ ದಮನದ ಹೆಸರಿನಲ್ಲಿ ನಡೆಸುವ ದಾಳಿ ನಿಲ್ಲುವ ವರೆಗೆ ಏಕಾಕಿತನ ಅನುಭವಿಸುವ ಸಮುದಾಯ ಅದರಿಂದ ಹೊರಗೆ ಬರುವದು ಸುಲಭವಲ್ಲ.

ಆದರೆ ಅಂದಿನ ಆ ದಿನಗಳು ಈಗ ನೆನಪು ಮಾತ್ರ. ಮುಸಲ್ಮಾನರು ಮತ್ತು ಇತರ ಸಮುದಾಯಗಳ ನಡುವೆ ಸಂಶಯದ ಗೋಡೆಯೊಂದು ಎದ್ದು ನಿಂತಿದೆ.ಇದು ತಾನಾಗಿ ಎದ್ದು ನಿಂತಿಲ್ಲ. ರಾಜಕೀಯ ಉದ್ದೇಶಗಳಿಗಾಗಿ ಕಂದಕ ತೂಡಿ ನಿಲ್ಲಿಸಿದ ಗೋಡೆ ಇದು.ಆಗ ಲಿಂಗಾಯತರು ,ಕುರುಬರು, ನಾಯಕರು ಎಂದೆಲ್ಲ ಕರೆಯಲ್ಪಡುತ್ತಿದ್ದವರು ಈಗ ಹಿಂದೂ ಬೋರ್ಡನ್ನು ಕೊರಳಿಗೆ ಹಾಕಿಕೊಂಡಿದ್ದಾರೆ.ನಗರ ಮಾತ್ರ ವಲ್ಲ ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಹಿಂದಿನಂತಿಲ್ಲ.

ನಾನು ಅವಿಭಜಿತ ಬಿಜಾಪುರ ಜಿಲ್ಲೆಯ ಹಳ್ಳಿಯೊಂದರಿಂದ ಬಂದವನು.ಲಿಂಗಾಯತರು ,ಕುರುಬರು, ಜೈನರು,ಬ್ರಾಹ್ಮಣರು ಮತ್ತು ಮುಸಲ್ಮಾನರು ಜೊತೆಯಾಗಿ ಬದುಕಿದ ದಿನಗಳನ್ನು ಕಣ್ಣಾರೆ ಕಂಡವನು.ಬಿಜಾಪುರ ದಿಂದ "ಸಂಯುಕ್ತ ಕರ್ನಾಟಕ"ದ ನೌಕರಿ ಸೇರಿ ಹುಬ್ಬಳ್ಳಿಗೆ ಬಂದಾಗಲೂ ಮುಸಲ್ಮಾನರು ನಮ್ಮ ಮನೆಯ ಅಕ್ಕಪಕ್ಕದಲ್ಲಿ ಇದ್ದರು.ಅವರ ರಮಜಾನ್,ಮೊಹರಮ್ ಬಂದರೆ ನಮ್ಮ ಮನೆಗೆ ಊಟದ ತಟ್ಟೆಗಳು ಬರುತ್ತಿದ್ದವು.ನಮ್ಮ ಮನೆಯಲ್ಲಿ ದೀಪಾವಳಿ, ಯುಗಾದಿ ಮಾಡಿದರೆ ಅವರ ಮನೆಗೆ ಊಟದ ತಟ್ಟೆಗಳು ಹೋಗುತ್ತಿದ್ದವು.ಬಾಲ್ಯದಲ್ಲಿ ಮೊಹರಮ್ ಕುಣಿತದಲ್ಲಿ ಲಿಂಗಾಯತ,ಕುರುಬರು ,ನಾಯಕರ ಹುಡುಗರನ್ನು ಕಂಡವನು,ಬಸವನ ಬಾಗೇವಾಡಿ ಬಸವಣ್ಣನ ಜಾತ್ರೆಯಲ್ಲಿ



ಸೀತೆ ತನ್ನ ಪಾತಿವ್ರತ್ಯ ದ ಅಗ್ನಿಪರೀಕ್ಷೆಗೆ ಗುರಿಯಾದಂತೆ ಮುಸಲ್ಮಾನರು ನಿತ್ಯವೂ ತಮ್ಮ ರಾಷ್ಟ್ರ ಭಕ್ತಿಯನ್ನು ಸಾಬೀತು ಪಡಿಸುತ್ತ ಈ ದೇಶದಲ್ಲಿ ಬದುಕಬೇಕಾಗಿದೆ.ಎಲ್ಲೇ ಬಾಂಬ್ ಸ್ಫೋಟವಾದರೂ ಭಯೋತ್ಪಾದಕ ರೆಂಬ ಹಣೆಪಟ್ಟಿಯನ್ನು ಅಮಾಯಕ ಮುಸಲ್ಮಾನರು ಅಂಟಿಸಿಕೊಳ್ಳಬೇಕಾಗಿದೆ.ಉದಾಹರಣೆಗೆ ಕೆಲ ವರ್ಷಗಳ ಹಿಂದೆ ಹುಬ್ಬಳ್ಳಿಯ ನ್ಯಾಯಾಲಯದ ಆವರಣದಲ್ಲಿ ಬಾಂಬ್ ಸ್ಫೋಟವಾದಾಗ "ಜಿಹಾದಿ" ಗಳ ಕೈವಾಡ ಎಂದು ಒಂದು ಸಮುದಾಯವನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಲಾಯಿತು.ಕೆಲ ಅಮಾಯಕರ ಬಂಧನವೂ ನಡೆಯಿತು.ಆದರೆ ಪ್ರಕರಣದ ತನಿಖೆ ನಡೆದ ನಂತರ ಬಯಲಾದದ್ದು ಬಲಪಂಥೀಯ ಕೋಮುವಾದಿ ಶಕ್ತಿಗಳ ಕೈವಾಡ. ಈ ಸ್ಫೋಟ ಮಾಡಿ ಅದನ್ನು ಒಂದು ಅಲ್ಪಸಂಖ್ಯಾತ ಸಮುದಾಯದ ತಲೆಗೆ ಕಟ್ಟಲು ಸಂಚು ಹೆಣೆಯಲಾಗಿತ್ತು.ಆ ಸಂಚು ಬಯಲಾಗಿ ಸದರಿ ಕೋಮುವಾದಿ ಸಂಘಟನೆಗಳ ಕಾರ್ಯಕರ್ತರ ಬಂಧನವೂ ನಡೆಯಿತು.

ಇದು ಒಂದು ಉದಾಹರಣೆ ಮಾತ್ರ. ಗೊಹತ್ಯೆ ನಿಷೇಧ,ದನಗಳ ಸಾಗಾಟ, ಲವ್ ಜಿಹಾದ್ ,ಮುಂತಾದ ಹೆಸರಿನಲ್ಲಿ ಮುಸ್ಲಿಂ ಸಮುದಾಯದ ಮೇಲೆ ದಾಳಿ ಹಲ್ಲೆಗಳು ನಡೆಯುತ್ತಲೇ ಇವೆ.ಮನೆಯ ಫ್ರಿಡ್ಜ್ ನಲ್ಲಿ ಗೋವಿನ ಮಾಂಸ ತಂದಿಡಲಾಗಿದೆ ಎಂಬ ಸುಳ್ಳು ಸುದ್ದಿ ಹರಡಿಸಿ ಉತ್ತರ ಪ್ರದೇಶದಲ್ಲಿ ಅಖ್ಲಾಕ್ ಎಂಬ ಅಮಾಯಕ ವ್ಯಕ್ತಿಯ ಹತ್ಯೆ ನಡೆಯಿತು.ಇಂಥ ಒಂದಲ್ಲ ಎರಡಲ್ಲ ನೂರಾರು ಉದಾಹರಣೆಗಳನ್ನು ಕೊಡಬಹುದು.

ಅಲ್ಪಸಂಖ್ಯಾತರ ಅದರಲ್ಲೂ ಮುಸಲ್ಮಾನರ ಶೋಚನೀಯ ಪರಿಸ್ಥಿತಿ ಯ ಬಗ್ಗೆ ಸ್ವಾತಂತ್ರ್ಯ ನಂತರ ಅನೇಕ ತಜ್ಞರ ಸಮಿತಿಗಳು ಅಧ್ಯಯನ ಮಾಡಿ ವರದಿಗಳನ್ನು ನೀಡಿವೆ.2006 ರಲ್ಲಿ ನ್ಯಾಯಮೂರ್ತಿ ರಾಜೇಂದರ ಸಾಚಾರ ನೇತೃತ್ವದ ಸಮಿತಿ ನೀಡಿರುವ ವರದಿಯ ಪ್ರಕಾರ ಭಾರತದಲ್ಲಿ ಮುಸಲ್ಮಾನರ ಪರಿಸ್ಥಿತಿ ದಲಿತರಿಗಿಂಥ ಹೀನಾಯ ವಾಗಿದೆ.ಅವರ ಜನಸಂಖ್ಯೆ ಗೆ ಅನುಗುಣವಾಗಿ ಸರಕಾರಿ ನೌಕರಿಯಲ್ಲಿ ನ್ಯಾಯವಾದ ಪಾಲು ಅವರಿಗೆ ಸಿಕ್ಕಿಲ್ಲ. ಆ ನಂತರ ರಚಿಸಲ್ಪಟ್ಟ ನ್ಯಾಯಮೂರ್ತಿ ರಂಗನಾಥ ಮಿಶ್ರಾ ಅವರ ನೇತೃತ್ವದ ಸಮಿತಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮುಸಲ್ಮಾನರಿಗೆ ಶೇಕಡಾ 10 ರಷ್ಟು ಮೀಸಲು ನೀಡಬೇಕೆಂದು ಶಿಫಾರಸು ಮಾಡಿತ್ತು.

ಮುಸಲ್ಮಾನರ ದಾರುಣ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲಿದ ನ್ಯಾಯಮೂರ್ತಿ ರಾಜೇಂದರ ಸಾಚಾರ ಹಾಗೂ ನ್ಯಾಯಮೂರ್ತಿ ರಂಗನಾಥ ಮಿಶ್ರಾ ನೇತೃತ್ವದ ಸಮಿತಿಗಳು ಆಳವಾದ ಮತ್ತು ಸಮಗ್ರ ವಾದ ಅಧ್ಯಯನ ನಡೆಸಿ ವಾಸ್ತವ ಪರಿಸ್ಥಿತಿ ಗೆ ಕನ್ನಡಿ ಹಿಡಿದಿವೆ.ಕೇಂದ್ರ ಸರ್ಕಾರದ ನೌಕರಿಗಳಲ್ಲಿ ಶೇಕಡಾ 2 ರಷ್ಟು ಕೂಡ ಮುಸಲ್ಮಾನರಿಲ್ಲ.ನಿರಕ್ಷರತೆ ಆ ಸಮುದಾಯದ ದಲ್ಲಿ ತಾಂಡವವಾಡುತ್ತಿದೆ. ಬಹುತೇಕ ಮುಸಲ್ಮಾನ ಯುವಕರು ಸರಕಾರಿ ನೌಕರಿಗಳನ್ನು ಅವಲಂಬಿಸದೇ ಗ್ಯಾರೇಜುಗಳಲ್ಲಿ,ಸೈಕಲ್ ರಿಪೇರಿ ಮಾಡುವ ಅಂಗಡಿಗಳಲ್ಲಿ ,ಹೋಟೇಲುಗಳಲ್ಲಿ ,ಬೀಡಿ ಮತ್ತಿತರ ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ಹಗಲೂ ರಾತ್ರಿ ದುಡಿಯುತ್ತಾರೆ. ಯಾರೋ ಒಬ್ಬಿಬ್ಬರು ಅಜೀಮ್ ಪ್ರೇಮಜಿ ಅಂಥವರು ಇರಬಹುದು .ಆದರೆ ಶೇಕಡಾ 99 ರಷ್ಟು ಮುಸಲ್ಮಾನರು ಕಡು ಬಡತನದಲ್ಲಿ ಇದ್ದಾರೆ.

ಅನ್ಯಾಯಕ್ಕೊಳಗಾದ ಈ ಮುಸಲ್ಮಾನ ಸಮುದಾಯಗಳಿಗೆ ಮೀಸಲು ಸೌಕರ್ಯ ಒದಗಿಸಲು ನ್ಯಾಯಮೂರ್ತಿ ಸಾಚಾರ ಮತ್ತು ನ್ಯಾಯಮೂರ್ತಿ ರಂಗನಾಥ ಮಿಶ್ರಾ ವರದಿಗಳು ಸರ್ಕಾರಕ್ಕೆ ಶಿಫಾರಸು ಮಾಡಿದ್ದರೂ ಈ ಶಿಫಾರಸುಗಳು ಸರ್ಕಾರದ ಕಡತಗಳಲ್ಲಿ

ಭಾರತದಲ್ಲಿ ಬಲಪಂಥೀಯ ಕೋಮುವಾದಿ ಶಕ್ತಿಗಳು ಬಲಿಷ್ಠವಾಗಿ ಇಡೀ ಭಾರತೀಯ ಸಮಾಜ ಕೋಮುವಾದೀಕರಣಗೊಳ್ಳುತ್ತಿರುವ ಈ ದಿನಗಳಲ್ಲಿ ಮುಸಲ್ಮಾನರ ಬೇಡಿಕೆ ಆರ್ಥಿಕ ಸಾಮಾಜಿಕ ನ್ಯಾಯವಲ್ಲ.ಭಾರತದ ಲ್ಲಿ ಸುರಕ್ಷಿತವಾಗಿ ಬದುಕುವಂಥ ವಾತಾವರಣ ಬೇಕೆಂಬುದು ಅವರ ಬೇಡಿಕೆಯಾಗಿದೆ.ನಿತ್ಯವೂ ಕೋಮುವಾದಿ ಶಕ್ತಿಗಳಿಂದ ರಕ್ಷಣೆ ನೀಡಿದರೆ ಸಾಕು ಹೇಗೋ ಬದುಕು ಕಟ್ಟಿಕೊಳ್ಳುತ್ತೇವೆ ಎಂಬುದು ಅವರ ಆಗ್ರಹವಾಗಿದೆ.

ಆದರೆ ಕೆಲವು ಮತೀಯವಾದಿ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಮಾಡುತ್ತಿರುವ ಆರೋಪವೇ ಬೇರೆ. ಅವರ ಪ್ರಕಾರ ಸರ್ಕಾರ ಮುಸಲ್ಮಾನರ ಬಗ್ಗೆ ತುಷ್ಟೀಕರಣ ನೀತಿ ಅನುಸರಿಸುತ್ತ ಬಂದಿದೆ ಎಂಬುದು ಅವರ ಆಕ್ಷೇಪ ವಾಗಿದೆ.ಇದಕ್ಕೆ ಅವರ ಕೊಡುವ ಉದಾಹರಣೆ ಶಾಬಾನು ಪ್ರಕರಣದಲ್ಲಿ ರಾಜೀವ ಗಾಂಧಿ ಸರ್ಕಾರ ಅನುಸರಿಸಿದ ಹಾಗೂ ಕೈಗೊಂಡ ಕ್ರಮಗಳಾಗಿವೆ.

ಭಾರತದ ಮುಸಲ್ಮಾನರು ಹಿಂದುಗಳಿಗೆ ಇರುವ ಯಾವ ನಾಗರಿಕ ಸೌಕರ್ಯ ವನ್ನು ಕೇಳದೇ ಎರಡನೇ ದರ್ಜೆಯ ಪ್ರಜೆಗಳಂತೆ ಇರಬೇಕು " ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಎರಡನೇ ಸರ ಸಂಘಚಾಲಕರಾದ ಮಾಧವ ಸದಾಶಿವ ಗೊಳ್ವಲಕರ್ ( ಗುರೂಜಿ) ಪ್ರತಿಪಾದಿಸಿದ್ದಾರೆ.ಅವರ ಸಿದ್ದಾಂತವನ್ನು ನಂಬುವ ಪಕ್ಷ ಅಧಿಕಾರಾದಲ್ಲಿರುವದರಿಂದ ಪೌರತ್ವ ಕಾಯ್ದೆಗೆ ತಿದ್ದುಪಡಿ ತಂದು ಆದುನಿಕ ಭಾರತವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ ಒಂದು ಬಹುದೊಡ್ಡ ಸಮುದಾಯದಲ್ಲಿ ಭೀತಿಯ ವಾತಾವರಣ ನಿರ್ಮಾಣ ಮಾಡಲಾಗಿದೆ.

ಮುಸಲ್ಮಾನರ ಮತ ಪಡೆದು ಅಧಿಕಾರಕ್ಕೆ ಬರುವ ಪಕ್ಷಗಳು ಕೂಡ ಮುಸ್ಲಿಂ ರಿಗೆ ರಾಜಕೀಯ ಪ್ರಾತಿನಿಧ್ಯ ಕೊಡಲು ಹಿಂದೇಟು ಹಾಕುತ್ತಿವೆ.ರಾಜ್ಯಗಳ ಶಾಸನ ಸಭೆಗಳಲ್ಲಿ, ಲೋಕಸಭೆಯಲ್ಲಿ ಮುಸಲ್ಮಾನರ ಪ್ರಾತಿನಿಧ್ಯ ಅತ್ಯಂತ ಕಡಿಮೆ.ಸ್ವಾತಂತ್ರ್ಯ ನಂತರ ವರ್ಷದಿಂದ ವರ್ಷಕ್ಕೆ ಶಾಸನ ಸಭೆಗಳಲ್ಲಿ ಅವರ ಪ್ರಾತಿನಿಧ್ಯ ಕುಸಿಯುತ್ತಲೇ ಇದೆ.

ಈ ಭೀತಿಯ ವಾತಾವರಣದಿಂದಾಗಿ ಹೊಸ ಪೀಳಿಗೆಯ ಬಹುತೇಕ ಮುಸಲ್ಮಾನ ಯುವಕರಲ್ಲಿ ಒಂದು ವಿಧದ ಒಂಟಿತನ ಅಥವಾ ತಬ್ಬಲಿತನ ಕಾಡುತ್ತಿದೆ.ಈ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿ ಮತ್ತು ಬಾಬಾಸಾಹೇಬ ಅಂಬೇಡ್ಕರ್ ನಡುವೆ ನಡೆದ ಮಾತುಕತೆಯೊಂದು ನೆನಪಿಗೆ ಬರುತ್ತಿದೆ.

ಲಂಡನ್ ನ ದುಂಡು ಮೇಜಿನ ಸಭೆಗೆ ಹೋಗಿ ವಾಪಸಾದ ನಂತರ ಗಾಂಧೀಜಿ ಮತ್ತು

ಅಂಬೇಡ್ಕರ್ ಅವರ ಮುಖಾಮುಖಿಯಾದ ಸಂದರ್ಭದಲ್ಲಿ ಗಾಂಧೀಜಿ ಅಂಬೇಡ್ಕರ್ ಅವರಿಗೆ " ನಿಮಗೆ ಮಾತೃಭೂಮಿ ಇದೆ " ಎಂದು ಹೇಳುತ್ತಾರೆ. ಈ ಮಾತಿಗೆ ತಿರುಗೇಟು ನೀಡಿದ ಅಂಬೇಡ್ಕರ್ "ನನಗೆ ಮಾತೃಭೂಮಿ ಇದೆ ಎನ್ನುತ್ತೀರಿ ಆದರೆ ಮತ್ತೆ ಮತ್ತೆ ಹೇಳುತ್ತೇನೆ ನನಗೆ ಮಾತೃಭೂಮಿ ಇಲ್ಲ.ನಾಯಿ ಬೆಕ್ಕುಗಳಿಗಿಂತ ಕೀಳಾಗಿ ಕಾಣುವ ಕುಡಿಯಲು ಹನಿ ನೀರು ಕೊಡದ ಇದನ್ನು ನನ್ನ ತಾಯಿ ನೆಲವೆಂದು ಹೇಗೆ ಕರೆಯಲಿ ಎಂದು ವಾಪಸು ಪ್ರಶ್ನಿಸುತ್ತಾರೆ.ಭಾರತದ ಮುಸಲ್ಮಾನರ ಪರಿಸ್ಥಿತಿ ಯೂ ಇಂದು ಅದೇ ಆಗಿದೆ.ಪೌರತ್ವ ಕಾಯ್ದೆಗೆ ತಿದ್ದುಪಡಿ ತಂದು ಅವರ ನಾಗರೀಕತ್ವವನ್ನೇ ಅಪಹರಣ ಮಾಡುವ ಹುನ್ನಾರ ನಡೆದಿರುವ ಈ ದಿನಗಳಲ್ಲಿ ಮುಸಲ್ಮಾನರಿಗೆ ಆರ್ಥಿಕ ಸಾಮಾಜಿಕ ನ್ಯಾಯಕ್ಕಿಂತ ಮುಖ್ಯ ವಾಗಿ ನಿಂತ ನೆಲ ಕುಸಿಯದಂತೆ ಸುರಕ್ಷಿತ ವಾಗಿರಬೇಕಾಗಿದೆ.

ಈ ಸಮಸ್ಯೆ ಗೆ ಒಂದೇ ಒಂದು ಪರಿಹಾರವೆಂದರೆ ಮುಸಲ್ಮಾನರನ್ನು ನಮ್ಮವರೆಂದು ಅಂದರೆ ಭಾರತೀಯರೆಂದು ಒಪ್ಪಿಕೊಳ್ಳಬೇಕು.ಅಣ್ಣ ತಮ್ಮಂದಿರಂತೆ ಬದುಕಬೇಕು. ಭಾರತ ಎಂಬುದು ಎಲ್ಲರ ಮನೆ .ಮನೆಯೊಳಗಿನ ಒಬ್ಬಿಬ್ಬರಿಗೆ ನೀವ ಊಟ ,ತಿಂಡಿ ನೀಡುವಲ್ಲಿ ತಾರತಮ್ಯ ಮಾಡಿದರೆ ಸರಿ ಪಡಿಸಬಹುದು.ಆದರೆ ನೀವು ಈ ಮನೆಯವರೇ ಅಲ್ಲ ಎಂದು ಹೊರ ದಬ್ಬಲು ಹೊರಟರೆ ಅದಕ್ಕಿಂತ ಕ್ರೌರ್ಯ ಇನ್ನೊಂದಿಲ್ಲ.

ಇಲ್ಲಿನ ಮುಸಲ್ಮಾನರು ಅರಬ್ ದೇಶಗಳಿಂದ ಬಂದವರಲ್ಲ.ಅವರು ಒತ್ತಾಯದಿಂದ ಮತಾಂತರ ಆದವರೂ ಅಲ್ಲ.ಈಗ ಹಿಂದು ಎಂದು ಹೆಸರು ಬದಲಿಸಿಕೊಂಡ ಶ್ರೇಣೀಕೃತ ಜಾತಿ ವ್ಯವಸ್ಥೆಯ ಅಡಿಗೆ ಸಿಕ್ಕು ಹುಡಿ ಹುಡಿಯಾಗಿ ಹೋದವರು ಆ ಬಂಧನದಿಂದ ಬಿಡುಗಡೆ ಪಡೆಯಲು ಮುಸಲ್ಮಾನರಾದವರು .ಈ ಮಾತನ್ನು ಸ್ವಾಮಿ ವಿವೇಕಾನಂದರು ಬಹಳ ಮಾರ್ಮಿಕವಾಗಿ ಹೇಳಿದ್ದಾರೆ. ಹಿಂದೆ ಮತಾಂತರವಾದವರನ್ನು ಮರಳಿ ಹಿಂದು ಧರ್ಮಕ್ಕೆ ಮರು ಮತಾಂತರ ಮಾಡಿದರೂ ಅವರು ಇಲ್ಲಿ ಬಂದು ಯಾವ ಜಾತಿಯಲ್ಲಿ ಆಸರೆ ಪಡೆಯಬೇಕು ಎಂಬ ಪ್ರಶ್ನೆ ಉದ್ಭವವಾಗುತ್ತದೆ.ಈ ಪ್ರಶ್ನೆ ಗೆ ಉತ್ತರ ನೀಡಲಾಗದವರಿಗೆ ಮರು ಮತಾಂತರದ ಬಗ್ಗೆ ಮಾತಾಡುವ ಹಕ್ಕಿಲ್ಲ.

ಇದು ಒಂದು ಮುಖವಾದರೆ ಮುಸಲ್ಮಾನರ ಬದುಕಿಗೆ ಸಂಬಂಧಿಸಿದ ಇನ್ನೊಂದು ಮುಖವೂ ಇದೆ.ಹೊಸ ಬದಲಾವಣೆ,ಮತ್ತು ಸುಧಾರಣೆ ಗೆ ಆ ಸಮುದಾಯ ಸ್ಪಂದಿಸುತ್ತಿಲ್ಲ.ಮುಖ್ಯ ವಾಹಿನಿಗೆ ಬರುತ್ತಿಲ್ಲ ಎಂಬ ಆರೋಪಗಳೂ ಇವೆ.ಆದರೆ ಭಾರತೀಯ ಸಂಗೀತ, ಕಲೆ,ಸಾಹಿತ್ಯ ಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದ ಸಮುದಾಯವಿದು. ನವ ಭಾರತದ ನಿರ್ಮಾಣದಲ್ಲಿ ಈ ಸಮುದಾಯದ ಜನರ ಬೆವರೂ ಹರಿದಿದೆ.ಇವರನ್ನು ಮುಖ್ಯ ವಾಹಿನಿಗೆ ತರುವ ಕೆಲಸವನ್ನು ಆ ಸಮುದಾಯದ ಸುಧಾರಣಾ ವಾದಿಗಳು ಮಾಡಬೇಕೆಂಬುದು ನಿಜ ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ಈ ದೇಶದ ಬಹುಸಂಖ್ಯಾತ ಸಮುದಾಯದ ಮೇಲಿದೆ.ಮುಸಲ್ಮಾನರ ತಬ್ಬಲಿತನ ಮಾಯವಾಗಬೇಕಾದರೆ ಅವರಿಗೆ ತಾಯ್ತನದ ಸ್ಪರ್ಶ ನೀಡುವ ಮನಸ್ಸು ಬಹುಸಂಖ್ಯಾತ ಸಮುದಾಯದ ಮೇಲ್ವರ್ಗಗಳಲ್ಲಿ ಮೂಡಬೇಕಾಗಿದೆ.

ಭಾರತದ ನೂರಾ ಮೂವತ್ತೈದು ಕೋಟಿ ಪ್ರಜೆಗಳಲ್ಲಿ ಮುಸಲ್ಮಾನರೂ ಸೇರಿದ್ದಾರೆ ಎಂಬುದನ್ನು ಒಪ್ಪಿಕೊಂಡು ಇರುವದೆಲ್ಲವನ್ನು ಹಂಚಿಕೊಂಡು ಪರಸ್ಪರ ಜೊತೆಯಾಗಿ ಬದುಕಿದರೆ ಈ ಭಾರತ ಒಂದಾಗಿ ಉಳಿಯುತ್ತದೆ.



## ಕೈನಿಂದ ಕೊಸರಿಕೊಂಡು ಹೋದವರು ಮತ್ತೇ ಹಸ್ತದತ್ತ?

# ಶೀಘ್ರದಲ್ಲೇ ಮತ್ತೆ ಪಕ್ಷಾಂತರ ಪರ್ವ?



● ತುರುವನೂರು ಮಂಜುನಾಥ

ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದ ಸಚಿವರ ಪಾಡು ಈಗ ಹೇಳತೀರದು. ಇರುವ ಒಂದೂಕಾಲು ವರ್ಷವಾದರೂ ಸಚಿವರಾಗಬೇಕು ಎಂದು ಆಸೆ ಹೊಂದಿದ್ದ ಒಂದಿಷ್ಟು ಮೂಲ ಬಿಜೆಪಿಗರಿಗೆ ಸಂಕ್ರಾಂತಿ ಹೊತ್ತಿಗೆ ನಾವು ಸಚಿವರಾಗಬಹುದು ಎನ್ನುವ ನಿರೀಕ್ಷೆ ಇತ್ತು ಆದರೆ ಯಾವಾಗ ಐದು ರಾಜ್ಯಗಳ ಚುನಾವಣೆ ಘೋಷಣೆಯಾಯಿತೋ.. ಆಗಲೇ ಅವರ ಆಸೆಗೆ ತಣ್ಣೀರು ಬಿದ್ದಂತಾಯಿತು. ಯಾಕೆಂದರೆ ಈ ಚುನಾವಣೆಗಳು ಮುಗಿಯುವ ಹೊತ್ತಿಗೆ ಯುಗಾದಿ ಬರುತ್ತದೆ ಅಲ್ಲಿಯವರೆಗೂ ಕಾಯಬೇಕಾದ ಪರಸ್ಥಿತಿ ನಿರ್ಮಾಣವಾಗಿದೆ ಹೀಗಾಗಿ ಹೊಟ್ಟೆಯಲ್ಲಿ ಉಳ ಬಿದ್ದವರಂತೆ ಒದ್ದಾಡುತ್ತಿದ್ದಾರೆ. ಹೇಗಾದರೂ ಮಾಡಿ ಸಚಿವರಾಗಲೇ ಬೇಕು ಎಂದು ಹಠತೊಟ್ಟಿರುವ ಒಂದಿಷ್ಟು ಮಂದಿ ಅವರಿವರ ಮನೆಬಾಗಿಲು ತಟ್ಟಿ ಒಂದಿಷ್ಟು ಒತ್ತಡ ಹೇರುವ ತಂತ್ರಗಳನ್ನು ಅನುಸರಿಸುತ್ತಿದ್ದಾರೆ.

ಹೌದು.. ಈಗ ಬಿಜೆಪಿಯಲ್ಲಿ ಸಚಿವರಾಗಬೇಕು ಎಂದುಕೊಂಡವರ ಪಾಡು ಇದು. ಆದರೆ ಬಿಜೆಪಿ ಮೇಲ್ನೋಟಕ್ಕೆ ಅಂದುಕೊಂಡಂತೆ ಇಲ್ಲ. ಆಂತರಿಕ ಕಲಹ ದಿನೇ ದಿನೇ ಬುಗಿಲೇಳುತ್ತಿದೆ.. ಹಿರಿಯ ಶಾಸಕರು ತಮ್ಮ ಆಕ್ರೋಶಗಳನ್ನು ಬೀದಿಯಲ್ಲಿ ಹೊರಹಾಕುತ್ತಿದ್ದಾರೆ. ಸಭೆಗಳ ಮೇಲೆ ಸಭೆ ಮಾಡಿ ವಿರೋಧಿಗಳ ಮನೆಗಳಿಗೂ ತೆರಳಿ ಆಗಿದ್ದೆಲ್ಲ ಆಗಿ ಹೋಗಿದೆ ಈಗ ಒಂದಾಗಿ ಒಂದಿಷ್ಟು ಕಾಲ ಸಚಿವರಾಗಿ ಒಳ್ಳೆಯ ಆಡಳಿತ ಕೊಡೋಣ ಎನ್ನುವ ಮಾತಿಗೆ ಬಂದು ನಿಂತಿದ್ದಾರೆ.. ಇದರ ಪರಿಣಾಮವೇ ಹವು ಮುಂಗಸಿಯಂತಿದ್ದ ರೇಣುಕಾ ಚಾರ್ಯ ಮತ್ತು ಬಸವರಾಜ್ ಪಾಟೀಲ್ ಯತ್ನಾಳ್ ರಹಸ್ಯ ಸಭೆ ಇವರಿಬ್ಬರು ಸೇರಿ ವಿರೋಧಿಯಂತಿದ್ದ ರಮೇಶ್ ಜಾರಕಿ ಮನೆ ಕದ ತಟ್ಟಿ ನೀವು ಮನಸ್ಸು ಮಾಡಿದರೆ ಏನುಬೇಕಾದರೂ ಮಾಡಬಹುದು ಸಚಿವ ಸಂಪುಟ ಪುನಾರ್‌ರಚನೆಗೆ ತಮ್ಮ ಸಹಕಾರ ಅಗತ್ಯ ಎನ್ನುವ ದುಂಬಾಲು ಬಿದ್ದಿದ್ದಾರೆ.. ಇದು ಇಂದಿವ ವಸ್ತುಸ್ತಿತಿ.

ಬಸವರಾಜ್ ಪಾಟೀಲ್ ಯತ್ನಾಳ್ ಪ್ರತಿ ಬಾರಿಯೂ ಒಂದು ರೀತಿ ರೆಬಲ್ ಇದ್ದಹಾಗೆ ಯಡಿಯೂರಪ್ಪ ಬದಲಾಗುತ್ತಾರೆ ಎಂದು ಹೇಳಿ ಹೇಳಿ ಬದಲಾಗುವಂತೆ ಮಾಡಿದ್ದರು. ಈಗ ಸಚಿವಸಂಪುಟ ವಿಸ್ತರಣೆ ಅಥವಾ ಪುನಾರ್‌ರಚನೆ ಆಗದೇ ಹೋದಲ್ಲಿ ಇರುವ ಬಿಜೆಪಿ ಶಾಸಕರು ಕೈ ಹಿಡಿಯಲಿದ್ದಾರೆ ಎಚ್ಚೆತ್ತುಕೊಳ್ಳಿ ಎಂದು ಹೈಕಮಾಂಡ್‌ಗೆ ಸಿಎಂಗೆ ಸಂದೇಶ ರವಾನೆ ಮಾಡಿದ್ದಾರೆ.

ಇದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ ಮತ್ತು ಡಿಕೆಶಿ ಕೂಡ ಬಿಜೆಪಿ ಜೆಡಿಎಸ್‌ನಿಂದ ಬರುವ ನಾಯಕರು ನಮ್ಮ ಜೊತೆ ಮಾತುಕತೆ ನಡೆಸಿದ್ದಾರೆ ಆದರೆ ಯಾರು ಯವಾಗ ಬರುತ್ತಾರೆ ಎನ್ನುವುದನ್ನು ಹೇಳಲಿಕ್ಕಾಗುವುದಿಲ್ಲ ಎಂದು ಬಾಂಬ್ ಹಾಕಿದ್ದಾರೆ ಇದು ಈಗ ಬಿಜೆಪಿಯಲ್ಲಿ ಸಿಎಂಗೆ ಬೆಂಕಿಯ ಮೇಲೆ ಕೂತಂತ ಪರಿಸ್ಥಿತಿನಿರ್ಮಾಣವಾಗಿದೆ ಆದರೂ ಮೌನವಹಿಸಿದ್ದಾರೆ ವರಷ್ಟಿರ ಕಡೆ ಮುಖಮಾಡಿ ನಿಸ್ಸಾಹಕರಾಗಿ ಕೂತಿದ್ದಾರೆ.



### ಬಿಜೆಪಿ ನಾಯಕರು ಕೈಹಿಡಿಯುವುದು ಖಚಿತವಾ?

ಹಾಗಾದರೆ ಬಿಜೆಪಿಯ ಶಾಸಕರು ಕಾಂಗ್ರೆಸ್‌ಗೆ ಸೇರುವುದು ಖಚಿತವಾ? ಎನ್ನುವ ಪ್ರಶ್ನೆಗೆ ಬಲ್ಲ ಮೂಲಗಳ ಪ್ರಕಾರ ಖಂಡಿತಾ ಈಗಾಗಲೇ ಆರು ಬಿಜೆಪಿ ಮುಖಂಡರು ಕೈನತ್ತ ಮುಖಮಾಡಲು ಸಜ್ಜಾಗಿದ್ದಾರೆ ಅದರಲ್ಲಿ ಯಾವುದೇ ಅನುಮಾನವೇ ಇಲ್ಲ. ಅದರಲ್ಲೂ ಕೈನಿಂದ ಕೊಸರಿಕೊಂಡು ಹೋಗಿ ಕಮಲದಲ್ಲಿ ಬಿದ್ದವರೇ ಮತ್ತೇ ಕೈ ಹಿಡಿಯಲು ಮುಂದಾಗಿದ್ದಾರೆ ಎನ್ನುವುದು ಸೂರ್ಯ ಉದಯದಷ್ಟೆ ಸತ್ಯ.



ಸಚಿವರಾದವರು ಸೇರಿ ಒಟ್ಟು ಆರು ಮಂದಿ ಈಗಾಗಲೆ ಸಿದ್ದು ಮತ್ತು ಡಿಕೆಶಿ ಜೊತೆ ಮಾತನಾಡಿದ್ದು ಯಾವ ಸಂದರ್ಭದಲ್ಲಿ ಬೇಕಾದರೂ ಕಾಂಗ್ರೆಸ್‌ಗೆ ಸೇರುವ ಲಕ್ಷಣಗಳಿವೆ ಒಂದು ಮೂಲದ ಪ್ರಕಾರ ಯುಗಾದಿ ನಂತರ ಎಲ್ಲರೂ ಕಾಂಗ್ರೆಸ್ ಸೇರುವ ಮಾಹಿತಿಯೂ ಇದೆ. ಹಾಗೆಯೇ ಚುನಾವಣೆ ಹೊತ್ತಿಗೆ ಇನ್ನೊಂದಿಷ್ಟು ಮಂದಿ ಕಾಂಗ್ರೆಸ್‌ಗೆ ಸೇರುವ ತವಕದಲ್ಲಿದ್ದಾರೆ ಒಟ್ಟಾರೆ ಚುನಾವಣೆ ಹೊತ್ತಿಗೆ ಒಂದು ಡಜನ್ ನಾಯಕರು ಕೈಹಿಡಿಯುವ ಎಲ್ಲಾ ಸಾಧ್ಯತೆಗಳು ಇವೆ.

ಈಗಾಗಲೇ ಮಾತುಕತೆ ನಡೆಸಿರುವ ಹಲವರು ಬಿಜೆಪಿಯಲ್ಲಿ ಸಚಿವರಾಗಲು ಸಾಧ್ಯವಿಲ್ಲ ಎನ್ನುವ ಕಾರಣಕ್ಕೆ ಕೈನತ್ತ ಮುಖಮಾಡಿದ್ದಾರೆ .ಬಿಜೆಪಿಯಲ್ಲಿ ಈಗ ನಾಯಕರಿಲ್ಲದೆ ಅನಾಥವಾಗಿದೆ ಹೀಗಾಗಿ ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತಬರುವ ಯಾವುದೇ ಸಾಧ್ಯತೆಗಳು ಇಲ್ಲ ಎನ್ನುವ ಅಚಲ ನಂಬಿಕೆಯಲ್ಲಿ ಕೊನೆ ಪಕ್ಷ ಕಾಂಗ್ರೆಸ್‌ನಲ್ಲಾದರೂ ಸಚಿವರಾಗಬಹುದು ಎನ್ನುವ ಕಾರಣಕ್ಕೆ ಈಗ ಕೈ ನತ್ತ ತಮ್ಮ ಚಿತ್ತ ಹರಿಸಿದ್ದಾರೆ . ಹೀಗಾಗಿಯೇ ಬಸವರಾಜ್ ಪಾಟೀಲ್ ಯತ್ನಾಳ್ ಅವರು ಪದೇ ಪದೇ ಹೈಕಮಾಂಡ್‌ಗೆ ಈ ವಿಷಯ ತಲುಪಿಸುವ ಯತ್ನವನ್ನು ಮಾಡುತ್ತಿದ್ದಾರೆ ಆದರೆ ಪಂಚ ರಾಜ್ಯಗಳ ಚುನಾವಣೆಯಲ್ಲಿರುವ ಅವರು ಸದ್ಯ ಈ ಮಾತುಗಳನ್ನು ಕಿವಿಗೆ ಹಾಕಿಕೊಳ್ಳುವ ಸಮಯ ಅವರಿಗಿಲ್ಲದಂತಾಗಿದೆ.

.ವಲಸಿಗರಲ್ಲಿ ನಾರಾಯಣಗೌಡ, ಸೇರಿದಂತೆ ಕೆಲವರ ಕಾರ್ಯನಿರ್ವಹಣೆಗೆ ಸಂಘ ಪರಿವಾರದಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಗಿದೆ. ಕೆಲವರನ್ನು ಕೈಬಿಟ್ಟು ಸಂಘ ಪರಿವಾರದ ಹಿನ್ನೆಲೆಯ ಶಾಸಕರಿಗೆ ಮಣೆ ಹಾಕಬೇಕು ಎಂದು ಇತ್ತೀಚೆಗೆ ಸಂಘ ಪರಿವಾರದ ಪ್ರಮುಖರು ಚರ್ಚಿಸಿ ರಾಜ್ಯ ಘಟಕಕ್ಕೆ ಸಂದೇಶ ಕಳುಹಿಸಿಕೊಟ್ಟಿದೆ. ಅದರ ಜೊತೆ ಪಕ್ಷದ ಕಡೆಯಿಂದಲೇ ಕೆಲ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ.

ಸಂಘ ಪರಿವಾರ ಮತ್ತು ಪಕ್ಷದ ಅಣತಿಯಂತೆ ಪಟ್ಟಿ ಹಿಡಿದು ದೆಹಲಿಗೆ ಹೋಗಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವರಿಷ್ಠರಿಂದ ಯಾವುದೇ ಸಕಾರಾತ್ಮಕವಾದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ಎಸ್.ಎ. ರಾಮದಾಸ್, ಅಪ್ಪಚ್ಚು ರಂಜನ್, ಶಿವರಾಜ್ ಪಾಟೀಲ್, ಎಂ.ಪಿ. ರೇಣುಕಾಚಾರ್ಯ, ಅರವಿಂದ ಬೆಲ್ಲದ್, ಸೋಮಶೇಖರ ರೆಡ್ಡಿ, ಎಂಎಲ್‌ಸಿ ಭಾರತಿ ಶೆಟ್ಟಿ, ಸಿ.ಪಿ.ಯೋಗೇಶ್ವರ್, ಸೋಮೇಶ್ವರ ರೆಡ್ಡಿ ಸೇರಿದಂತೆ ಒಂದಷ್ಟು ಶಾಸಕರು ಕ್ಷೇತ್ರದ ಕೆಲಸ ಅನ್ನೋ ನೆಪದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಸಚಿವ ಸ್ಥಾನಕ್ಕೆ ಲಾಬಿ ನಡೆಸುತ್ತಿದ್ದಾರೆ. ವಲಸಿಗರ ಕೋಟಾದಲ್ಲಿ ಸಂಪುಟ ಸೇರಲೇಬೇಕು ಎಂದು ನಿರ್ಧರಿಸಿರುವ ಅಥಣಿ ಶಾಸಕ ಮಹೇಶ್ ಕುಮಟಳ್ಳಿ ಬಹಿರಂಗವಾಗಿಯೇ ಹೇಳಿಕೆ ನೀಡಿ ಅಪೇಕ್ಷೆ ವ್ಯಕ್ತಪಡಿಸುತ್ತಿದ್ದಾರೆ. ಇವರ ಜೊತೆ ತಿಪ್ಪಾರೆಡ್ಡಿ, ಪೂರ್ಣಿಮಾ, ಪರಣ್ಣ ಮುನವಳ್ಳಿ ಸೇರಿದಂತೆ ಮತ್ತಷ್ಟು ಶಾಸಕರು ಸಚಿವ ಸ್ಥಾನದ ರೇಸ್‌ನಲ್ಲಿದ್ದಾರೆ.

ವಿಧಾನಸೌಧದಲ್ಲಿ ಯತ್ನಾಳ್ ಜೊತೆಗೆ ರೇಣುಕಾ ಚಾರ್ಯ ರಹಸ್ಯ ಮಾತುಕತೆ ನಡೆಸಿದ್ದಾರೆ. ಬಹಿರಂಗವಾಗಿ ಸಂಪುಟ ವಿಸ್ತರಣೆ ಈಗಲೇ ಆಗಬೇಕು ಎನ್ನುವ ಬೇಡಿಕೆ ಮುಂದಿಡುತ್ತಾ ಸಿಎಂ ಬೊಮ್ಮಾಯಿ ಮೇಲೆ ಒತ್ತಡ ಹೇರುತ್ತಿದ್ದಾರೆ. ಇಬ್ಬರು ನಾಯಕರು ಒಟ್ಟಿಗೆ ಸೇರಿ ಬೊಮ್ಮಾಯಿ ಸಂಪುಟಕ್ಕೆ ಸೇರ್ಪಡೆಯಾಗಲೇ ಬೇಕು ಎಂದು ಹೇಳಿ ದೆಹಲಿಯಾತ್ರೆಗೆ ಸಿದ್ಧಗೊಂಡಿದ್ದಾರೆ.

● 12ನೇ ಪುಟಕ್ಕೆ...

## ಚಿತ್ರದುರ್ಗ

**ಡಿವೈಎಸ್‌ಪಿ ಪಾಂಡುರಂಗಯಾರಾದರೂ ಅಟ್ರಾಸಿಟಿ ಕೇಸು ಕೊಡಲು ಬಂದರೆ ಬರುವ ಪರಿಹಾರದ ಹಣದಲ್ಲಿ 50/50 ಕೇಳುವ ಪಾಂಡುರಂಗ. ಮೇಲ್ಜಾತಿಯವರು ಹೆಚ್ಚಿಗೆ ಮಾತನಾಡಿದರೆಅಟ್ರಾಸಿಟಿ(ಜಾತಿ ನಿಂದನೆ) ಕೇಸ್‌ಕೊಡ್ರಿಅಂತಇವರೇಜನರಿಗೆ ಹಚ್ಚಿಕೊಡುತ್ತಾರೆ. ಇಂತಹಅವತಾರ ಪುರುಷ ಪಾಂಡುರಂಗ ಸಬ್‌ರಿಜಿಸ್ಟ್ರಾರ್‌ಕಛೇರಿಯ ಸ್ಟಾಂಪ್ ವೆಂಡರ್ ಮಂಜುನಾಥ್‌ಯಾದವನಕೇಸನ್ನುತನಿಖೆಕೈಗೆತ್ತಿಕೊಂಡಿದ್ದು, ಸರ್ಕಾರಕ್ಕೆ ನ್ಯಾಯ ಸಿಗುತ್ತೋ ಅಥವಾ ಮಂಜುನಾಥ್‌ಯಾದವ್ ಬಿಡುಗಡೆಯಾಗುತ್ತಾರೋ ಪಾಂಡುರಂಗನ ವರದಿಯಿಂದ ಬಹಿರಂಗವಾಗಬೇಕಿದೆ.**

# ಬಜರಂಗದಳ ಮುಖಂಡ ತಿಂದು ತೇಗಿದ ಕತೆ..!

● ಹೆಚ್.ಲಕ್ಷ್ಮಣ್

ಬಜರಂಗದಳ, ವಿಶ್ವ ಹಿಂದೂ ಪರಿಷತ್, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹೀಗೆ ನಾನಾ ಹೆಸರುಗಳಿಂದ ಗುರುತಿಸಿಕೊಂಡು ಸಮಾಜದಲ್ಲಿ ಗಣ್ಯ ವ್ಯಕ್ತಿಯೆಂಬಂತೆ ಪೋಜುಕೊಟ್ಟು,ಎಂ.ಎಲ್.ಎ. ತಿಪ್ಪಾರೆಡ್ಡಿ ಹಿಂದೆ, ಆರ್.ಎಸ್.ಎಸ್. ಮುಖಂಡರ ಹಿಂದೆಓಡಾಡಿಕೊಂಡಿದ್ದ ಮಂಜುನಾಥ್‌ಯಾದವ ಎಂಬ ಯುವಕ ಸ್ವತಃತಾನೇ ಬಜರಂಗದಳದ ಮುಖಂಡನೆಂದು ಹೇಳಿಕೊಂಡು ಆಯಾಯ ಇಲಾಖೆಗಳಲ್ಲಿ ಅಧಿಕಾರಿಗಳನ್ನು ಪರಿಚಯಿಸಿಕೊಂಡು ಅವರಿವರ ಕೆಲಸ ಮಾಡಿಕೊಂಡುಓಡಾಡುತ್ತಿದ್ದವನೊಬ್ಬ ಸರ್ಕಾರದ ಮುದ್ರಾಂಕ ಇಲಾಖೆಗೆ 1.76 ಕೋಟಿ ರೂಪಾಯಿಗಳನ್ನು ವಂಚನೆ ಮಾಡಿ, ಪೊಲೀಸ್‌ರ ಅತಿಥಿಯಾದ ಕತೆ ಹಿಂದಿನ ಸತ್ಯದ ಸಂಗತಿ ಹೇಗಿದೆ ನೋಡಿ...

ಮುದ್ರಾಂಕ ಇಲಾಕೆಯಲ್ಲಿ ಸ್ಟಾಂಪ್ ವೆಂಡರ್ ಆಗಿದ್ದ ಈ ಮಂಜುನಾಥ ಶ್ರೀರಾಮ್ ಅಸೋಸಿಯೇಟ್‌ನಲ್ಲಿ ಕೆಲಸಮಾಡಿಕೊಂಡಿದ್ದ ಈತ ಮುದ್ರಾಂಕ ಇಲಾಖೆಯಲ್ಲಿ ಕೋಟಿಗಟ್ಟಲೇ ಹಣ ವಂಚನೆ ಮಾಡಿ ತಲೆತಪ್ಪಿಸಿಕೊಳ್ಳಲು ಯತ್ನಿಸಿದಾಗ ಪೊಲೀಸರು ಈತನನ್ನು ಬಂಧಿಸಿ ತನಿಖೆಗೊಳಪಡಿಸಿದ್ದಾರೆ.

ಈ ಹಿಂದೆ ಈತನ ತಂದೆ ಚಿತ್ರಶೇಖರ್‌ಎಂಬುವವ 'ರುಅದೇಇಲಾಖೆಯಲ್ಲಿ ಸ್ಟಾಂಪ್ ವೆಂಡರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಚಿತ್ರದುರ್ಗ ತಾಲ್ಲೂಕು, ಕಸವನಹಳ್ಳಿ ಗ್ರಾಮದವರಾಗಿದ್ದು, ಸ್ಟಾಂಪ್ ವೆಂಡರ್ ಕೆಲಸ ಮತ್ತು ವಿವಿಧ ಸಂಘ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದ ಮಂಜುನಾಥ್ ಯಾದವ್, ಶಾಸಕ ತಿಪ್ಪಾರೆಡ್ಡಿ ಹೆಸರು ಹೇಳಿಕೊಂಡು ಅವರಿವರ ಬಳಿ ವರ್ಗಾವಣೆ, ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿಸಿಕೊಡುತ್ತೇನೆ ಎಂದು ಜನರಿಂದ ಹಣ ಎತ್ತಿದ ಆಸಾಮಿ. ಆದರೆ ಇತ್ತೀಚೆಗೆ ತಾನೇ ಸ್ವತಃ ಲೀಡರ್‌ಎಂಬಂತೆ ಪೋಜು ಕೊಟ್ಟುಕೊಳ್ಳುತ್ತಿದ್ದ ಮಂಜುನಾಥಯಾದವ್ ತನ್ನತಂದ 'ಚಿತ್ರಶೇಖರ್ ಜೊತೆಗೆ ತಾನೇ ಸ್ವತಃ ಸ್ಟಾಂಪ್ ವೆಂಡರ್ ಕಚೇರಿಯನ್ನು ಆರಂಭಿಸಿ ಸರ್ಕಾರದ 'ಕಂದಾಯ ಇಲಾಖೆಗೆ ವಂಚನೆ ಮಾಡಲು ಶುರುವಿಟ್ಟುಕೊಡಿದ್ದ.

ಸರ್ಕಾರದ ಕಂದಾಯ ಇಲಾಖೆಗೆ ಕಟ್ಟಬೇಕಾದ ಸ್ಟಾಂಪ್‌ಅಂಡ್‌ಡ್ಯೂಟಿ ಮತ್ತು ಚಲನ್‌ಗಳ ಹಣವನ್ನು ಸರ್ಕಾರದಖಾತೆಗೆ ಕಡಿಮೆ ಸಂದಾಯ ಮಾಡಿ, ನಕಲಿ ರಸೀದಿಗಳನ್ನು ಸೃಷ್ಟಿಮಾಡಿ, ಸಂಬಂಧಿಸಿದ ಇಲಾಖೆಗೆ ಸಲ್ಲಿಸುತ್ತಿದ್ದ. ಇದನ್ನು ತನಿಖೆ ನಡೆಸಿದ ಪೊಲೀಸ್‌ಇಲಾಖೆಯ ಅಧಿಕಾರಿಗಳು ಮಂಜುನಾಥಯಾದವ್‌ನನ್ನು ಬಂಧಿಸಿ, ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.








ಚಿತ್ರದುರ್ಗ ಸಬ್‌ರಿಜಿಸ್ಟ್ರಾರ್‌ಕಛೇರಿಯಲ್ಲಿಅಧಿಕಾರಿಯಾಗಿದ್ದು, ಈಗ ಪಾವಗಡ ಸಬ್‌ರಿಜಿಸ್ಟ್ರಾರ್ ಆಗಿ ವರ್ಗಾವಣೆಯಾಗಿರುವ ವೆಂಕಟೇಶ್ ಎಂಬುವವರು ಇದೇ ಹಗರಣದಲ್ಲಿ ಅಮಾನತ್ತುಗೊಂಡಿದ್ದು, ಮಂಜುನಾಥ್‌ಯಾದವ್ ಮಾಡಿದ್ದ ಲಫಡಾ ಕೆಲಸಗಳಿಂದಾಗಿ ವೆಂಕಟೇಶ್ ಸೇರಿದಂತೆ ಸಬ್‌ರಿಜಿಸ್ಟ್ರಾರ್‌ಕಚೇರಿಯ ಹಲವು ಜನ ನೌಕರರು ಪೊಲೀಸ್ ವಿಚಾರಣೆಗೆ ಒಳಪಟ್ಟಿದ್ದಾರೆ. ಕೆಲವರು ವರ್ಗಾವಣೆಯಾಗಿ ಹೋಗಿದ್ದು, ಮತ್ತೆ ಕೆಲವರು ವಿಚಾರಣೆ ಅಂಗವಾಗಿ ಅಮಾನತ್ತಿನಲ್ಲಿದ್ದಾರೆ.

ರಾಜಕೀಯ ಮುಖಂಡರು ಮತ್ತು ಬಜರಂಗದಳ ಸಂಘಟನೆಯ ಹೆಸರು ಹೇಳಿಕೊಂಡು ಮಾಡಬಾರದ ಮಾನಗೇಡಿ ಕೆಲಸಗಳನ್ನು ಮಾಡುತ್ತಿದ್ದ ಮಂಜುನಾಥಯಾದವ್, ತನ್ನಅಪ್ಪ ಮಾಡಿದ್ದ ಆಸ್ತಿಗಳನ್ನೆಲ್ಲಾ ಮುಂಡಾ ಮೋಚಿ, ತಾನೇ ಸ್ವಂತ ಸ್ಟಾಂಪ್ ವೆಂಡರ್‌ಕಚೇರಿ ನಡೆಸುವುದಾಗಿ ಹೇಳಿಕೊಡು ಕಂಡಕಂಡವರಿಗೆ ವಂಚನೆ ಮಾಡುತ್ತಾ, ಸರ್ಕಾರಕ್ಕೂಕೋಟ್ಯಾಂತರರೂಪಾಯಿಧೋಖಾ ಮಾಡಿರುವ ಮಂಜುನಾಥಯಾದವ್ ಮತ್ತುಆತನ ಹಗರಣದ ಸುತ್ತಉನ್ನತ ಮಟ್ಟದತನಿಖೆ ನಡೆಸಿ, ಬೆಂಬಲಕ್ಕಿರುವವರನ್ನು ಬೀದಿಗೆ ತರಬೇಕಾಗಿದೆ.

**ಕಡಕ್‌ಅಧಿಕಾರಿ ಲಕ್ಷ್ಮೀ ತುಳಸಿ:** ಸಬ್‌ರಿಜಿಸ್ಟ್ರಾರ್‌ಕಚೇರಿಗೆ ಕಳೆದ ನಾಲ್ಕೈದು ತಿಂಗಳ ಹಿಂದೆರಾಯಚೂರಿನಿಂದ ವರ್ಗಾವಾಗಿ ಬಂದಿರುವ ಲಕ್ಷ್ಮೀ ತುಳಸಿ ಎಂಬ ಅಧಿಕಾರಿಚಿತ್ರದುರ್ಗ ಸಬ್‌ರಿಜಿಸ್ಟ್ರಾರ್‌ಕಛೇರಿಯಲ್ಲಿ ಸ್ಟಾಂಪ್ ವೆಂಡರ್‌ಗಳು ಮಾಡುತ್ತಿದ್ದ ಸರ್ಕಾರಕ್ಕೆ ವಂಚಿಸುವ ದಂಧೆಯನ್ನು ಪತ್ತೆ ಹಚ್ಚಿ, ಮಟ್ಟ ಹಾಕಲು ಸರ್ಕಾರಕ್ಕೆ ಕೈಜೋಡಿಸಿದ್ದು, ಇಲ್ಲಿರುವಂತಹ ಸ್ಟಾಂಪ್ ವೆಂಡರ್‌ಗಳ ಮೇಲೆಲ್ಲಾ ಹದ್ದಿನ ಕಣ್ಣಿಟ್ಟುಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಂತಹ ಅಧಿಕಾರಿಗಳು ಕೆಲ ವರ್ಷ ಪ್ರಾಮಾಣಿಕವಾಗಿಕರ್ತವ್ಯ ನಿರ್ವಹಿಸಿದರೆ ಸಬ್‌ರಿಜಿಸ್ಟ್ರಾರ್‌ಕಛೇರಿಯ ಭ್ರಷ್ಟಾಚಾರವನ್ನುಒಂದು ಹಂತಕ್ಕೆತಹಬದಿಗೆ ತರಬಹುದು.

**ಇಲ್ಲೂ ಪಾಂಡುರಂಗಅವರೇತನಿಖಾಧಿಕಾರಿ:** ಚಿತ್ರದುರ್ಗಡಿವೈಎಸ್‌ಪಿ ಪಾಂಡುರಂಗ ವರ್ಗವಾಗಿ ಬಂದ ನಂತರಖ್ಯಾತಿ, ಅಪಖ್ಯಾತಿಗೆ ಒಳಗಾದವರು. ಇವರುಯಾವುದೇ ಕೆಲಸ ಮಾಡಿದರೂಅಲ್ಲಿಇಂತಿಷ್ಟು ಲಂಚ ಇರಲೇ ಬೇಕು.ಫ್ರೀಯಾಗಿ ಕೆಲಸ ಮಾಡಿದ ಉದಾಹರಣೆಗಳೇ ಇಲ್ಲ. ಇವರುಡಿವೈಎಸ್‌ಪಿ ಆಗಿ ಬಂದ ನಂತರ ಭ್ರಷ್ಟಾಚಾರಎಲೆಮೀರಿದೆ.ಹಾಲಿ ಎಸ್‌ಪಿ ರಾಧಿಕಾಅವರಿಗೆತಪ್ಪು ಮಾಹಿತಿ ನೀಡಿ, ದಿಕ್ಕು ತಪ್ಪಿಸಿ, ತನಗೆತೋಚಿದಂತೆ ತನಿಖೆಗಳನ್ನು ಮಾಡಿ, ವರದಿ ಸಲ್ಲಿಸುವಜಾಯಮಾನದ ಪಾಂಡುರಂಗ ಸಬ್‌ರಿಜಿಸ್ಟ್ರಾರ್‌ಕಛೇರಿಯತನಿಖೆಯನ್ನು ಇನ್ನೆಷ್ಟರಮಟ್ಟಿಗೆ ಮಾಡುತ್ತಾರೆಎಂಬುವುದು ಸಾರ್ವಜನಿಕರಲ್ಲಿತೀವ್ರ ಚರ್ಚೆಗೊಳಗಾಗುತ್ತಿದೆ.

ಡಿವೈಎಸ್‌ಪಿ ಪಾಂಡುರಂಗಯಾರಾದರೂ ಅಟ್ರಾಸಿಟಿ ಕೇಸು ಕೊಡಲು ಬಂದರೆ ಬರುವ ಪರಿಹಾರದ ಹಣದಲ್ಲಿ 50/50 ಕೇಳುವ ಪಾಂಡುರಂಗ. ಮೇಲ್ಜಾತಿಯವರು ಹೆಚ್ಚಿಗೆ ಮಾತನಾಡಿದರೆಅಟ್ರಾಸಿಟಿ(ಜಾತಿ ನಿಂದನೆ) ಕೇಸ್‌ಕೊಡ್ರಿಅಂತಇವರೇಜನರಿಗೆ ಹಚ್ಚಿಕೊಡುತ್ತಾರೆ. ಇಂತಹಅವತಾರ ಪುರುಷ ಪಾಂಡುರಂಗ ಸಬ್‌ರಿಜಿಸ್ಟ್ರಾರ್‌ಕಛೇರಿಯ ಸ್ಟಾಂಪ್ ವೆಂಡರ್ ಮಂಜುನಾಥ್‌ಯಾದವನಕೇಸನ್ನುತನಿಖೆಕೈಗೆತ್ತಿಕೊಂಡಿದ್ದು, ಸರ್ಕಾರಕ್ಕೆ ನ್ಯಾಯ ಸಿಗುತ್ತೋ ಅಥವಾ ಮಂಜುನಾಥ್‌ಯಾದವ್ ಬಿಡುಗಡೆಯಾಗುತ್ತಾರೋ ಪಾಂಡುರಂಗನ ವರದಿಯಿಂದ ಬಹಿರಂಗವಾಗಬೇಕಿದೆ.

ಪೊಲೀಸ್ ಇಲಾಖೆ ಸೇರಿ ಸರ್ಕಾರಿ ಕಛೇರಿಗಳನ್ನು ಗಬ್ಬೆದ್ದು ನಾರುವಂತೆ ಮಾಡಿರುವ ಸ್ಥಳೀಯ ಪ್ರಭಾವಿ ವ್ಯಕ್ತಿಯೊಬ್ಬರ ಆಣತಿಯಂತೆ ನಡೆದುಕೊಳ್ಳುವ ಡಿವೈಎಸ್‌ಪಿ ಪಾಂಡುರಂಗಕಂದಾಯ ಇಲಾಖೆಗೆ ವಂಚಿಸಿರುವ ಮಂಜುನಾಥಯಾದವ್‌ಕೇಸನ್ನು ನೀರಿಗೆ ತೊಳೆದ ಹುಣಸೇಹಣ್ಣಿನಂತೆ ಮಾಡಿಬಿಡುತ್ತಾನೇನೋ ಎಂದು ಭಾಸವಾಗುತ್ತಿದೆ. ಸರ್ಕಾರದ ಕಂದಾಯ ಇಲಾಖೆಗೆ ರಸೀದಿ ಹಾಕುವಲ್ಲಿ ಕೋಟ್ಯಾಂತರ ರೂಪಾಯಿ ವಂಚಿಸಿರುವ ಮಂಜುನಾಥನಯಾದವನ ಬೆಂಬಲಕ್ಕೆ ರಾಜಕೀಯ ಮುಖಂಡರೇ ನಿಂತಿದ್ದು, ಈತನ ಹಲ್ಕಾ ಕೆಲಸಗಳಿಗೆ ಕೆಲಸ ಸಂಘ ಪರಿವಾರದ ಮುಖಂಡರ ಬೆಂಬಲವೂ ಇದ್ದು, ಸ್ವತಃತಾನೇ ಭಜರಂಗಿಎಂದು ಹೇಳಿಕೊಂಡು ಓಡಾಡುತ್ತಿದ್ದ ಮಂಜುನಾಥಯಾದವ್, ಸರ್ಕಾರದಖಜಾನೆಗೆಗುನ್ನಇಟ್ಟಿದ್ದಾನೆ. ಇವುಗಳೆಲ್ಲವನ್ನು ಸಮಗ್ರತನಿಖೆ ನಡೆಸಿ, ನ್ಯಾಯ ಒದಗಿಸಿಕೊಡಬೇಕಾಗಿರುವವರು ಪೊಲೀಸ್‌ಇಲಾಖೆಯ ಮಹಾಭ್ರಷ್ಟಅಧಿಕಾರಿ ಪಾಂಡುರಂಗ. ಇವರುಗಳಿಂದ ಯಾವ ಮಟ್ಟದ ನ್ಯಾಯ ಸಿಗಬಹುದು ಎಂಬುದನ್ನು ಕಾದು ನೋಡಬೇಕು.

ಜಿಲ್ಲೆಯವರಲ್ಲದ ಸಚಿವರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ನೇಮಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ರಮದ ಹಿಂದ ಬಹಳ ದೊಡ್ಡ ಧೈರ್ಯ ಕೆಲಸ ಮಾಡಿದೆ. ಇದು ಸಚಿವರಲ್ಲಿ ಏಕರೂಪದ ಅಸಮಾಧಾನಕ್ಕೆ ಕಾರಣವೂ ಆಗಿದೆ. ಮೂವರಿಗೆ ಎರಡೆರಡು ಜಿಲ್ಲಾ ಉಸ್ತುವಾರಿ ಕೊಟ್ಟಿರುವುದು ಇಕ್ಕಟ್ಟಿಗೆ ಕಾರಣವಾಗಬಹುದು. ಸ್ವಾತಂತ್ರ್ಯ ದಿನ, ರಾಜ್ಯೋತ್ಸವದ ದಿನ ರಾಷ್ಟ್ರಧ್ವಜ, ಕನ್ನಡ ಬಾವುಟವನ್ನು ಜಿಲ್ಲಾ ಸಚಿವರು ಜಿಲ್ಲಾ ಕೇಂದ್ರದಲ್ಲಿ ಹಾರಿಸುವ ಪರಿಪಾಠವಿದೆ. ಈ ಮೂವರು ಸಚಿವರು ಆ ಕೆಲಸವನ್ನು ಎರಡೆರಡು ಕಡೆ ಮಾಡುವುದಾದರೂ ಹೇಗೆ...? ಇತರರ ಅಸಮಾಧಾನದಲ್ಲೂ ಸಂತೋಷಕೂಟಕ್ಕೆ ಶ್ರೀರಾಮುಲು ಅಣಿಯಾಗಿದ್ದಾರೆ. ಅವರಿಗೆ ಅವರ ಬಯಕೆಯ ಬಳ್ಳಾರಿ ಉಡುಗೊರೆ ರೂಪದಲ್ಲಿ ಬಂದಿದೆ.

# ಸಚಿವರ ಕೈತಪ್ಪಿದ ಜಹಗೀರು



ರಾಜಸೂತ್ರ

ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು

ಗಜಗರ್ಭ ಮುಕ್ತಿ ಕಂಡಿದೆ. ಅಂತೂ ಇಂತೂ ಎಂಬಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿಗೆ ಸಚಿವರನ್ನು ನೇಮಿಸಿದ್ದು ಅವರ ಅಧಿಕಾರಾವಧಿಗೆ ಹೋಲಿಸಿದರೆ ಬಹಳ ವಿಳಂಬವಾಗಿ ತೆಗೆದುಕೊಂಡ ತೀರ್ಮಾನ ಇದಾಗಿದೆ. ವರ್ಷ ಒಪ್ಪತ್ತಿನಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಅಷ್ಟು ಮಾತ್ರವೆ ಈ ಸರ್ಕಾರದ ಜೀವಿತಾವಧಿ. ಚುನಾವಣೆಯ ಬಳಿಕ ಇದೇ ಸರ್ಕಾರ, ಪಕ್ಷ ಅಧಿಕಾರಕ್ಕೆ ಬರುತ್ತದೊ ಬೇರೆಯದು ಸ್ಥಾನ ಹಿಡಿಯುತ್ತದೊ ಎನ್ನುವುದು ಮತದಾರರ ಮರ್ಜಿಗೆ ಬಿಟ್ಟಿದ್ದು. ಸದ್ಯಕ್ಕೆ ಬೊಮ್ಮಾಯಿ ತಮ್ಮ ಅಂತರ್ಗತ ಅಧಿಕಾರವನ್ನು ಸಚಿವರ ಮುಖಮೂತಿ ನೋಡದೆ ಚಲಾಯಿಸಿದ್ದಾರೆ. ಕೆಲವರಾದರೂ ಸಚಿವರು ನಡೆಸುತ್ತಿದ್ದ "ಜನತಂತ್ರಾತ್ಮಕ ನೀತಿ ನಡಾವಳಿಗೆ ವಿರುದ್ಧವಾದ ದರ್ಬಾರಿಗೆ" ವಿಸ್ಮಯಕಾರಿ ಬ್ರೇಕ್ ಹಾಕಿದ್ದಾರೆ. ತಮ್ಮ ತಮ್ಮ ಜಿಲ್ಲೆಗಳನ್ನು ಪಿತ್ರಾರ್ಜಿತ ಆಸ್ತಿ ಎಂಬಂತೆ; ರಾಜಮಹಾರಾಜರ ಕಾಲದಲ್ಲಿ ಉಂಬಳಿಯಾಗಿ ಬಂದಿರುವ ಜಹಗೀರು ಎಂಬಂತೆ ಡೌಲು ದೌಲತ್ತಿನಲ್ಲಿ ಮೆರೆಯುತ್ತಿದ್ದ ಸಚಿವರನೇಕರಿಗೆ ಮುಖ್ಯಮಂತ್ರಿಯ ಈ ನಿರ್ಧಾರ ಅಷ್ಟೆಲ್ಲ ಸುಲಭದಲ್ಲಿ ಜೀರ್ಣಿಸಿಕೊಳ್ಳಲಾಗದ ಆದರೆ ಜನಸಾಮಾನ್ಯರ ದೃಷ್ಟಿಯಿಂದ ಸ್ವಾಗತಾರ್ಹ ಕ್ರಮವೆನಿಸಿದೆ.

ಜಿಲ್ಲಾ ಸಚಿವರಾಗಿ ಆಯಾ ಜಿಲ್ಲೆಯನ್ನು ಪ್ರತಿನಿಧಿಸುವ ಸಚಿವರಲ್ಲೇ ಒಬ್ಬರು ನಿಯುಕ್ತರಾಗುವುದು ಉತ್ತಮ. ಉಸ್ತುವಾರಿ ಆಯಾ ಜಿಲ್ಲೆಯವರ ಕೈಯಲ್ಲೆ ಇದ್ದಲ್ಲಿ ಅವರಿಗೆ ಜಿಲ್ಲೆಯಲ್ಲಿ ನಡೆಯುತ್ತಿರುವ ಮತ್ತು ಕೈಗೆತ್ತಿಕೊಳ್ಳಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳ ಸಮೀಪ ಪರಿಚಯವಿರುತ್ತದೆ. ಅಧಿಕಾರಿಗಳ ಬೆನ್ನು ಹತ್ತಿ ಕೆಲಸ ಕಾರ್ಯಗಳನ್ನು ಮಾಡಿಸುತ್ತಾರೆ. ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಸಿಇಒ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಒಳಗೊಂಡು ನಿಯಮಿತವಾಗಿ ನಡೆಯುವ ಕೆಡಿಪಿ (ಕರ್ನಾಟಕ ಡೆವೆಲಪ್‌ಮೆಂಟ್ ಪ್ರೊಗ್ರಾಮ್ಸ್) ಸಭೆಯ ಮೂಲಕ ಕಾಮಗಾರಿಗಳ ಪರಿಶೀಲನೆ ಪರ್ಯಾಲೋಚನೆ ನಡೆಸುತ್ತಾರೆ. ಜಿಲ್ಲೆಯಲ್ಲಿ ತಮ್ಮ ಸ್ವಕ್ಷೇತ್ರದ ಆಚೆಗೂ ಅವರ ಅಧಿಕಾರಾವಧಿ ವಿಸ್ತರಿಸುವ ಕಾರಣವಾಗಿ ಎಲ್ಲ ವಿಧಾನ ಸಭಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ನಿರಾತಂಕವಾಗಿ ನಿರಂತರವಾಗಿ ನಡೆಯಲು ಅನುಕೂಲವಾಗುತ್ತದೆ... ಇತ್ಯಾದಿ ಇತ್ಯಾದಿ ಕಾರಣಗಳಿಗಾಗಿ ಆಯಾ ಜಿಲ್ಲೆಯ ಸಚಿವರಲ್ಲಿ ಒಬ್ಬರನ್ನು ಉಸ್ತುವಾರಿಯನ್ನಾಗಿ ಮಾಡುವ ಪರಿಪಾಠ ಪರಂಪರೆಯಂತೆ ನಡೆದುಕೊಂಡು ಬಂದಿತ್ತು. ಇದೀಗ ಬೊಮ್ಮಾಯಿ ಸರ್ಕಾರ ಸ್ಥಾಪಿತ ಪರಂಪರೆಗೆ ಒಂದು ಕೊನೆ ಹಾಡುವ ಯತ್ನ ನಡೆಸಿದೆ. ಸಿಎಂ ತೆಗೆದುಕೊಂಡಿರುವ ನಿರ್ಧಾರದ ಆಯಸ್ಸು ಎಷ್ಟೆಂದು ಊಹಿಸುವುದು ಕಷ್ಟ. ಏಕೆಂದರೆ ಇಡೀ ಸಂಪುಟವನ್ನು ಅವರು ಎದುರು ಹಾಕಿಕೊಂಡಿದ್ದಾರೆ. ಇದನ್ನು ಇಡೀ ಸಂಪುಟ ಸಿಎಂ ವಿರುದ್ಧ ಸೆಟೆದೆದ್ದಿದೆ ಎಂದೂ ವ್ಯಾಖ್ಯಾನಿಸಬಹುದು.







ಬೊಮ್ಮಾಯಿ ಅಧಿಕಾರ ವಹಿಸಿಕೊಂಡು ಹೆಚ್ಚೂಕಡಿಮೆ ಆರು ತಿಂಗಳಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರ ನೇಮಕ ತಡವಾಗುತ್ತಿದೆ ಎಂಬ ಕೂಗು ಕ್ರಮೇಣ ಜೋರು ಧ್ವನಿಯನ್ನು ಪಡೆದಿತ್ತು. ಜಿಲ್ಲಾ ಕೇಂದ್ರದಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರಧ್ವಜ ಹಾರಿಸುವ, ಕನ್ನಡ ರಾಜ್ಯೋತ್ಸವದ ದಿವಸ ನಾಡಧ್ವಜ ಹಾರಿಸುವ ಕೆಲಸವನ್ನು ಜಿಲ್ಲೆಯ ಸಚಿವರಲ್ಲಿ ಒಬ್ಬರಿಗೆ ಬೊಮ್ಮಾಯಿ ಸರ್ಕಾರ ನೀಡಿತ್ತು.ಕೆಲವು ಜಿಲ್ಲೆಗಳಲ್ಲಿ ಒಬ್ಬರೇ ಸಚಿವರಿದ್ದು ಅದನ್ನೇ ಜಿಲ್ಲಾ ಉಸ್ತುವಾರಿ ಎಂದು ಆ ಸಚಿವರ ಬೆಂಬಲಿಗರು ತಮಟೆ ಬಾರಿಸಿಕೊಂಡಿದ್ದೂ ಆಯಿತು. ಬಾವುಟ ಹಾರಿಸುವುದರಿಂದಾಚೆಗೆ ಅವರಿಗೆ ಬೇರೆ ಉದ್ಯೋಗ ಇರಲಿಲ್ಲ ಎಂದೇನೂ ಅಲ್ಲ. ರಾಜ್ಯವನ್ನು ಅಟ್ಟಾಡಿಸಿದ ಕೊರೋನಾ ಸಾಂಕ್ರಾಮಿಕದ ನಿಯಂತ್ರಣದ ಜವಾಬ್ದಾರಿಯನ್ನು ಆ ಸಚಿವರಿಗೆ ನೀಡಲಾಗಿತ್ತು. ಹೀಗಿದ್ದೂ ಅಭಿವೃದ್ಧಿ ಕಾರ್ಯ ಹಾಗೂ ಕಾನೂನು ಸುವ್ಯವಸ್ಥೆ ವಿಚಾರದಲ್ಲಿ ಡಿಸಿ, ಸಿಇಒ, ಎಸ್‌ಪಿಗಳ ಮೇಲೆ ನೇರ ದರ್ಬಾರು ನಡೆಸುವುದಕ್ಕೆ ಆಗದೆ ಅನೇಕ ಸಚಿವರು ಸಿಎಂ ಮುಂದೆ ತಮ್ಮ ಪ್ರತಿಭಟನೆಯನ್ನು ದಾಖಲು ಮಾಡಿದ್ದೂ ಉಂಟು. ಬೊಮ್ಮಾಯಿಯವರು ಸಚಿವ ಸಹೋದ್ಯೋಗಿಗಳು ಹೇಳಿದ್ದನ್ನೆಲ್ಲ ಕೇಳಿಸಿಕೊಂಡು ತಮಗೆ ಸರಿ ತೋಚಿದ್ದನ್ನು ಮಾಡಿದ್ದಾರೆ! ಬಲ್ಲ ಮಾಹಿತಿಗಳ ರೀತ್ಯ ಅವರು ಪಕ್ಷದ ಉನ್ನತ ಹಂತದಲ್ಲಿ ಸಮಾಲೋಚಿಸಿದ ನಂತರವೇ ಈ ತೀರ್ಮಾನಕ್ಕೆ ಬಂದಿದ್ದಾರೆ.

ಸಚಿವ ಸಂಪುಟದಲ್ಲಿ ಪವರ್‌ಫುಲ್ ಒಕ್ಕಲಿಗ ಸಚಿವ ಎಂದೇ ತಮ್ಮನ್ನು ಬಿಂಬಿಸಿಕೊಂಡಿರುವ ಕಂದಾಯ ಸಚಿವ ಆರ್. ಅಶೋಕ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿಯವರಿಬ್ಬರಿಗೂ ಉಸ್ತುವಾರಿ ಸಚಿವ ಸ್ಥಾನಕ್ಕೆ ಜಿಲ್ಲೆ ತೋರಿಸದ ಸಿಎಂ ಪಟ್ಟಿ ಆ ಇಬ್ಬರ ವಲಯದಲ್ಲಿ ಅಲ್ಲೋಲಕಲ್ಲೋಲಕ್ಕೆ ಕಾರಣವಾಗಿದೆ. ಬೆಂಗಳೂರು ನಗರವನ್ನು ತಮ್ಮ ಜಹಗೀರು ಎಂದು ತಿಳಿದುಕೊಂಡಿರುವ ಕೆಲವರು ರಾಜಕಾರಣಿಗಳು ಆಡಳಿತ ಪಕ್ಷದಲ್ಲಿರುವಂತೆ ಕಾಂಗ್ರೆಸ್, ಜೆಡಿಎಸ್‌ಗಳಲ್ಲೂ ಇದ್ದಾರೆ. ಅಂಥವರಲ್ಲಿ ಅಶೋಕ್ ಒಬ್ಬರು. ಅವರ ದರ್ಬಾರು ಅವರಿಗೆ ಅಶೋಕ ಸಾಮ್ರಾಟ ಎಂಬ ವ್ಯಂಗ್ಯನಾಮವನ್ನು ತಂದಿದೆ. ನಾವೆಲ್ಲ ಇತಿಹಾಸ ಪಠ್ಯದಲ್ಲಿ ಓದಿರುವ ಚಕ್ರವರ್ತಿ ಅಶೋಕ ಸಾಮ್ರಾಟನ ಐತಿಹ್ಯದಲ್ಲಿ ಆತ ಅಹಂಕಾರದ ಪ್ರತಿರೂಪವಾಗಿರುವುದರ ಪ್ರಸ್ತಾಪ ಎಲ್ಲೂ ಇಲ್ಲ. ಆದರೆ ಬೆಂಗಳೂರು ಪದ್ಮನಾಭ ನಗರದ ಅಶೋಕರನ್ನು ದೂರ ನಿಂತು ನೋಡುವವರಿಗೂ ಅವರ ಅಹಂಕಾರದ ಬಿಸಿ ರಾಚುತ್ತದೆ. ಈ ಸಾಮ್ರಾಟನ ಕಿರೀಟ ಬೊಮ್ಮಾಯಿ ತೀರ್ಮಾನದ ಕಾರಣವಾಗಿ ಕಿರಿಕಿರಿ ಎದುರಿಸುವಂತಾಗಿದೆ. ಇದೇ ಮಾತು ಮಾಧುಸ್ವಾಮಿ ವಿಚಾರದಲ್ಲೂ ಹೆಚ್ಚೂಕಡಿಮೆ ನಿಜ. "ಮಾಧುಸ್ವಾಮಿ ಸಚಿವರಾಗಿ ಮುಂದುವರಿದುದೇ ಹೌದಾದಲ್ಲಿ ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ತುಮಕೂರು ಜಿಲ್ಲೆಯಲ್ಲಿ ಒಂದು ಸ್ಥಾನವೂ ಬರೋಲ್ಲ" ಎಂದು ತುಮಕೂರು ಬಿಜೆಪಿ ಸಂಸದ ಜಿ.ಎಸ್. ಬಸವರಾಜು ಬಹಿರಂಗವಾಗಿ ಹೇಳುವಷ್ಟರ ಹಂತಕ್ಕೆ ಮಾಧುಸ್ವಾಮಿ ಜನಪ್ರಿಯತೆ ಅಟ್ಟವನ್ನೇರಿದೆ.

ಇವರಿಗೆ ವಹಿಸಲು ಜಿಲ್ಲೆಯೇ ಇರಲಿಲ್ಲವೇ...? ಹಾಗೇನೂ ಅಲ್ಲ. ಕೊಡಬಾರದು ಎಂಬ ಕಾರಣಕ್ಕಾಗಿಯೇ ಕೊಟ್ಟಿಲ್ಲ ಎನ್ನಲು ಕಾರಣವಿದೆ. ಮೂವರು ಸಚಿವರಿಗೆ ಎರಡೆರಡು ಜಿಲ್ಲಾ ಉಸ್ತುವಾರಿ ವಹಿಸಿ ಈ ಇಬ್ಬರಿಗೆ ಖಾಲಿ ಕೂರಲು ಹೇಳಿರುವುದನ್ನು ನೋಡಿದರೆ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವುಳ್ಳವರಿಗೆ ಏನನ್ನೂ ಹೇಳದಿದ್ದರೂ ಎಲ್ಲವುದೂ ಅರ್ಥ ಆಗುತ್ತದೆ. ಜಿಲ್ಲಾ ಸಚಿವರ ಪಟ್ಟಿಯನ್ನೊಮ್ಮೆ ನೋಡಿ ಮುಂದಕ್ಕೆ ಹೋಗೋಣ: ಗೋವಿಂದ ಕಾರಜೋಳ (ಬೆಳಗಾವಿ); ಕೆ.ಎಸ್.ಈಶ್ವರಪ್ಪ (ಚಿಕ್ಕಮಗಳೂರು); ಬಿ.ಶ್ರೀರಾಮುಲು (ಬಳ್ಳಾರಿ); ವಿ.ಸೋಮಣ್ಣ (ಚಾಮರಾಜ ನಗರ); ಉಮೇಶ್ ವಿ ಕತ್ತಿ(ವಿಜಯಪುರ); ಎಸ್.ಅಂಗಾರ (ಉಡುಪಿ); ಆರಗ ಜ್ಞಾನೇಂದ್ರ (ತುಮಕೂರು); ಸಿ.ಎನ್. ಅಶ್ವತ್ಥನಾರಾಯಣ (ರಾಮನಗರ); ಸಿ.ಸಿ.ಪಾಟೀಲ (ಬಾಗಲಕೋಟೆ); ಆನಂದ ಸಿಂಗ್ (ಕೊಪ್ಪಳ); ಕೋಟಾ ಶ್ರೀನಿವಾಸ ಪೂಜಾರಿ(ಉತ್ತರ ಕನ್ನಡ); ಪ್ರಭು ಚೌಹಾಣ್ (ಯಾದಗೀರ್); ಮರುಗೇಶ ಆರ್ ನಿರಾನಿ (ಕಲಬುರ್ಗಿ); ಎ. ಶಿವರಾಮ ಹೆಬ್ಬಾರ್ (ಹಾವೇರಿ); ಶಶಿಕಲಾ ಜೊಲ್ಲೆ (ವಿಜಯಪುರ); ಎಸ್.ಟಿ. ಸೋಮಶೇಖರ್ (ಮೈಸೂರು); ಬಿ.ಸಿ. ಪಾಟೀಲ (ಚಿತ್ರದುರ್ಗ ಮತ್ತು ಗದಗ); ಬಿ.ಎ. ಬಸವರಾಜ(ದಾವಣಗೆರೆ); ಕೆ.ಸುಧಾಕರ್ (ಬೆಂಗಳೂರು ಗ್ರಾಮಾಂತರ); ಕೆ.ಗೋಪಾಲಯ್ಯ (ಹಾಸನ ಮತ್ತು ಮಂಡ್ಯ); ಎಂಟಿಬಿ ನಾಗರಾಜು(ಚಿಕ್ಕಬಳ್ಳಾಪುರ);ಕೆ.ಸಿ. ನಾರಾಯಣ ಗೌಡ (ಶಿವಮೊಗ್ಗ); ಬಿ.ಸಿ. ನಾಗೇಶ್(ಕೊಡಗು);ವಿ.ಸುನಿಲ್ ಕುಮಾರ್ (ದಕ್ಷಿಣ ಕನ್ನಡ); ಹಾಲಪ್ಪ ಆಚಾರ್ (ಧಾರವಾಡ); ಶಂಕರ್ ಪಾಟೀಲ ಮುನೇನಕೊಪ್ಪ (ರಾಯಚೂರು ಮತ್ತು ಬೀದರ್); ಮುನಿರತ್ನ (ಕೋಲಾರ). ಬಹಳ ಮುಖ್ಯವಾದ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿಯಾಗಲು ಸ್ಥಳೀಯ ಶಾಸಕ ಸಚಿವರ ದಂಡು ತುದಿಗಾಲಲ್ಲಿ ನಿಂತಿತ್ತು. ಸೋಮಣ್ಣ, ಮುನಿರತ್ನ, ಅಶೋಕ, ಎಸ್.ಟಿ. ಸೋಮಶೇಖರ್, ಗೋಪಾಲಯ್ಯ, ಅಶ್ವತ್ಥನಾರಾಯಣ, ಬೈರತಿ ಬಸವರಾಜ, ಮುನಿರತ್ನ ಸೇರಿದಂತೆ ಹಲವರು ಕಣ್ಣಿಟ್ಟಿದ್ದರು, ಇವರಲ್ಲಿ ಕೆಲವರು ಲಾಬಿಯನ್ನೂ ಮಾಡಿದ್ದರು. ಆದರೆ ಬೊಮ್ಮಾಯಿ ಈ ಎಲ್ಲರ ಬೇಡಿಕೆ ಕೋರಿಕೆಯನ್ನೆಲ್ಲ ತಳ್ಳಿ ಹಾಕಿ ರಾಜಧಾನಿ ನಗರವನ್ನು ತಮ್ಮ ಕೈಯಲ್ಲೆ ಇರಿಸಿಕೊಂಡಿರುವುದನ್ನು ನೋಡಿದರೆ ಅವರು ಯಾರ ಮುಖಮೂತಿಯನ್ನೂ ನೋಡದೆ ತೀರ್ಮಾನಕ್ಕೆ ಬಂದಿದ್ದಾರೆ ಎನಿಸುತ್ತದೆ.









ಆರ್.ಅಶೋಕ್ ಮತ್ತು ಮಾಧುಸ್ವಾಮಿ ಅವರಿಗೆ ಉಸ್ತುವಾರಿ ವಹಿಸಲು ಜಿಲ್ಲೆ ಇರಲಿಲ್ಲ ಎಂದೇನೂ ಅಲ್ಲ. ಬಿ.ಸಿ. ಪಾಟೀಲರಿಗೆ ಚಿತ್ರದುರ್ಗ–ಗದಗ; ಕೆ.ಗೋಪಾಲಯ್ಯನವರಿಗೆ ಹಾಸನ–ಮಂಡ್ಯ; ಶಂಕರಪಾಟೀಲ ಮುನೇನಕೊಪ್ಪ ಅವರಿಗೆ ಬೀದರ್–ರಾಯಚೂರು ಹೀಗೆ ಎರಡೆರಡು ಜಿಲ್ಲೆಗಳನ್ನು ಕೊಟ್ಟಿರುವ ಬೊಮ್ಮಾಯಿ ಕ್ರಮದ ಹಿಂದೆ ಉದ್ದೇಶಪೂರ್ವಕವಾಗಿಯೆ ಅಶೋಕ, ಮಾಧುಸ್ವಾಮಿಯವರನ್ನು ಬರಿಗೈಲಿ ಸುಮ್ಮನೆ ಕೂರಿಸುವ ವಾಂಛೆ ಇರುವುದು ಸ್ಪಷ್ಟ. ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವ ಈ ಉದ್ದೇಶಕ್ಕೆ ಮುಖ್ಯಮಂತ್ರಿಯಲ್ಲಿ ಇರಬಹುದಾದ ಕಾರಣ ಏನೆಂಬುದು ಸ್ಪಷ್ಟವಾಗಿಲ್ಲ. ಉಸ್ತುವಾರಿ ವಂಚಿತ ಅಶೋಕ, ಮಾಧುಸ್ವಾಮಿಯವರಂತೆಯೆ ಸ್ವಂತ ಜಿಲ್ಲೆಯ ಸಾರ್ವಭೌಮತ್ವ ಕಳೆದುಕೊಂಡ ಬಹುತೇಕ ಎಲ್ಲ ಸಚಿವರೂ ಕೋಪ, ಅಸಮಾಧಾನದಲ್ಲಿ ಕೊತಕೊತ ಕುದಿಯಲಾರಂಭಿಸಿರುವುದು ಅನಿರೀಕ್ಷಿತ ಬೆಳವಣಿಗೆಯೇನಲ್ಲ. ಅವರಲ್ಲಿ ಕೆಲವು ಸಚಿವರು ತಮ್ಮತಮ್ಮ ಬೆಂಬಲಿಗರನ್ನು ಛೂ ಬಿಟ್ಟು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಖಾರವನ್ನೆಲ್ಲ ಕಾರಿಕೊಳ್ಳುವಂತೆ ಮಾಡಿದ್ದಾರೆ. ಆದರೆ ಇನ್ನೊಂದು ಮೂಲದ ಪ್ರಕಾರ, ಬೆಂಗಳೂರು ನಗರ ಉಸ್ತುವಾರಿ ಕೆಲಸದಲ್ಲಿ ಅಶೋಕರ ನೆರವು ಸಹಕಾರವನ್ನು ಸಿಎಂ ಪಡೆಯಲಿದ್ದಾರೆ!

ಜಿಲ್ಲಾ ಉಸ್ತುವಾರಿ ಸಚಿವರಾಗುವವರು ಉದ್ದೇಶ ಮರೆತು ವರ್ತಿಸುತ್ತಿದ್ದುದೇ ಈಗ ಬೊಮ್ಮಾಯಿ ತೆಗೆದುಕೊಂಡಿರುವ ನಿಲುವಿಗೆ ಕಾರಣ ಎನ್ನಲಾಗಿದೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಪಕ್ಷದ ಕೋರ್ ಕಮಿಟಿ ಜಿಲ್ಲೆಯ ಸಚಿವರಲ್ಲದವರನ್ನು ಉಸ್ತುವಾರಿಯನ್ನಾಗಿ ನೇಮಕ ಮಾಡಬೇಕೆಂಬ ಸಲಹೆಯನ್ನು ಮುಂದಿಟ್ಟಿತ್ತು. ಈಗ ಬೊಮ್ಮಾಯಿ ಆ ಸಲಹೆಯನ್ನು ಅನುಷ್ಠಾನಕ್ಕೆ ತಂದಿದ್ದಾರೆಂಬ ಸಮರ್ಥನೆ ಕೇಳಿಬಂದಿದೆ. ಉಸ್ತುವಾರಿ ಸಚಿವರಾದವರು ಸ್ವಜನ ಪಕ್ಷಪಾತ, ಜಾತಿ ರಾಜಕಾರಣ, ಪಕ್ಷದಲ್ಲಿ ಒಡಕು ಮೂಡಿಸಿ ಗುಂಪುಗಾರಿಕೆಗೆ ಉತ್ತೇಜನ ನೀಡುವುದು, ಸ್ವಕೀಯರಿಗೆ ಗುತ್ತಿಗೆ ಕೊಡಿಸುವುದರಲ್ಲಿ ಆಸಕ್ತಿ, ಜಾತಿ ಅಧಿಕಾರಿಗಳಿಗೆ ಮನ್ನಣೆ ಇತ್ಯಾದಿ ಇತ್ಯಾದಿ ಆರೋಪವನ್ನು ಎದುರಿಸುತ್ತಿರುವ ಸಮಯದಲ್ಲಿ ಈ ತೀರ್ಮಾನ ಬಂದಿದೆ. ಚುನಾವಣೆ ಹತ್ತಿರವಾಗುತ್ತಿರುವಂತೆ ಕೆಲವು ಬಿಜೆಪಿ ಸಚಿವರು ಮತ್ತೆ ಪಕ್ಷಾಂತರವೆಂಬ ಮರಕೋತಿ ಆಟ ಆಡುವ ಸಂಭವವಿದ್ದು ತಮ್ಮ ತಮ್ಮ ಜಿಲ್ಲೆಯಲ್ಲಿ ಅವರು ತಮ್ಮ ಗುಂಪನ್ನು ರಾಜಕೀಯವಾಗಿ ಬೆಳೆಸುವುದಕ್ಕೆ ನಿಯಂತ್ರಣ ಹೇರುವ ಒಂದು ಉಪಾಯವಾಗಿಯೂ ಈ ಕ್ರಮಕ್ಕೆ ಮುಖ್ಯಮಂತ್ರಿ ಬಂದಿದ್ದಾರೆಂಬ ಮತ್ತು ಈ ನಿಟ್ಟಿನಲ್ಲಿ ಪಕ್ಷದ ವರಿಷ್ಠ ಮಂಡಳಿ ನೀಡಿರುವ ಸಲಹೆಯನ್ನು ಅಮಲಿಗೆ ತಂದಿದ್ದಾರೆಂಬ ಮಾತಿದೆ. ಏನೇ ಇರಲಿ, ಇದು ಒಂದು ಒಳ್ಳೆಯ ಪ್ರಯೋಗ.




# ಲೋಕಾಯ
# ಸಂಸ್ಥೆ
# ಶೋಕೇ
# ಸರ್ಕಾ

● ವತಿಮ

**ಒಂದು** ಕಾಲದಲ್ಲಿ ಭ್ರಷ್ಟ ಅಧಿಕಾರಿಗಳ ಸಿಂಹ ಸ್ವಪ್ನದಂತಿದ್ದ ಕರ್ನಾಟಕ ಲೋಕಾಯುಕ್ತ ಈಗ ಹಲ್ಲು ಕಿತ್ತ ಹಾವಿನಂತಾಗಿದೆ. ಇದಕ್ಕೆ ಮೂಲ ಕಾರಣ ರಾಜಕಾರಣಿಗಳು. 2016 ರಲ್ಲಿ ಸಿದ್ದರಾಮಯ್ಯ ಸರ್ಕಾರ ಲೋಕಾಯುಕ್ತ ಅಧಿಕಾರ ಕಸಿದುಕೊಂಡು ಎಸಿಬಿ ಎನ್ನುವ ಸಂಸ್ಥೆಯನ್ನು ಹುಟ್ಟು ಹಾಕಿದರು. ಅಲ್ಲಿಗೆ ಅಧಿಕಾರದಲ್ಲಿರುವ ಪಕ್ಷದ ಸೂಚನೆ ಮೇರೆಗೆ ಎಸಿಬಿ ಕಾರ್ಯನಿರ್ವಹಿಸುತ್ತಿದೆ, ಆದರೆ ಲೋಕಾಯುಕ್ತ ಯಾರಿಗೂ ಬೇಡದ ಕೂಸಾಗಿಬಿಟ್ಟಿದೆ.ಯಾಕೆಂದರೆ ರಾಜಕಾರಣಿಗಳು ತಮ್ಮ ಸುರಕ್ಷಿತೆಗಾಗಿ ಮಾಡಿದ ಈ ವ್ಯವಸ್ಥೆಗೆ ಎಲ್ಲರೂ ಧ್ವನಿ ಎತ್ತಬೇಕು.

ಒಂದು ಕಾಲದಲ್ಲಿ ಲೋಕಾಯುಕ್ತ ಹೆಚ್ಚು ಧ್ವನಿ ಮಾಡಿತು ಇಡೀ ದೇಶದಲ್ಲೇ ಇತ್ತ ಕಣ್ಣಾಯಿಸುವಂತೆ ಭ್ರಷ್ಟರನ್ನು ಭೇಟೆಯಾಡಿದ ರೀತಿ ಇತ್ತಲ್ಲ ಅದು ಎಲ್ಲಡೆ ಗಮನಸೆಳೆಯುತು. ಇದ್ದರೆ ಇಂತ ಸಂಸ್ಥೆ ಇರಬೇಕು ಎನ್ನುವಷ್ಟರ ಮಟ್ಟಿಗೆ ಲೋಕಾಯುಕ್ತ ಸಂಸ್ಥೆ ಹೆಸರಾಯಿತು.

ಭ್ರಷ್ಟಾಚಾರವನ್ನು ಹೇಗೆ ನಿಯಂತ್ರಿಸಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರದಾದಿಯಿಂದ ಇತರರೆಲ್ಲರೂ ಮೀನಮೇಷ ಮಾಡುತ್ತಿದ್ದಾಗ ಕರ್ನಾಟಕ ಝಳಪಿಸಿದ ಅಸ್ತ್ರವೇ ಲೋಕಾಯುಕ್ತ. ಭ್ರಷ್ಟ ರಾಜಕಾರಣಿ ಮತ್ತು ಅಧಿಕಾರಿಗಳ ಅಪವಿತ್ರ ಮೈತ್ರಿಗೆ ಇದು ಸಿಂಹಸ್ವಪ್ನವಾಗಿ, ದೇಶಕ್ಕೊಂದು ಮಾದರಿಎಂಬ ಹೆಗ್ಗಳಿಕೆ ಗಳಿಸಿದೆ.



ಅದರಲ್ಲೂ ಸಂತೋಷ್ ಹೆಗಡೆ ಅವರು ಲೋಕಾಯುಕ್ತರಾಗಿದ್ದ ವೇಳೆ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಒಂದು ಕಾಲದ ಬಂಟರಾಗಿದ್ದ, ಬಳ್ಳಾರಿಯ ಗಣಿ ದೊರೆ ಎಂದು ಕರೆಯಲಾಗುತ್ತಿದ್ದ ಜನಾರ್ದನ ರೆಡ್ಡಿ ಅವರನ್ನೇ ಕೇಳಬೇಕು.ಇದರಿಂದಲೇ ಅವರ ರಾಜಕೀಯ ಜೀವನವೇ ಮೂರಾಬಟ್ಟೆ ಆಗಿದೆ. ಅವರು ಕಟ್ಟಿಕೊಂಡ ಸಾಮ್ರಾಜ್ಯ ಕುಸಿದಿದೆ. ಜೈಲು ವಾಸ ಅನುಭವಿಸಿದ್ದಾರೆ. ಅವರ ಮೇಲೆ ಹಾಕಲಾಗಿದ್ದ ಕೇಸುಗಳ ಕತ್ತಿ ಅವರ ಕತ್ತಿನ ಮೇಲೆ ತೂಗುತ್ತಿದೆ.

ಆದರೆ ಇದೆ ಲೋಕಾಯುಕ್ತ ಸಂಸ್ಥೆಯ ಕೆಳಗಡೆ 2015ರಲ್ಲಿ ಆದ ಆ ಘಟನೆ ನಿಜಕ್ಕೂ ಆತಂಕಕಾರಿಯಾಗಿಬಿಟ್ಟಿತ್ತು. ಭ್ರಷ್ಟಾಚಾರಕ್ಕೆ ರಾಮಬಾಣವೆಂದೇ ಹೆಸರಾದ ಲೋಕಾಯುಕ್ತವೇ ಭ್ರಷ್ಟಾಚಾರಕ್ಕೆ ಬಲಿಯಾಗಿಬಿಟ್ಟಿತ್ತು. ಕಳವಳಕಾರಿ ಅಂಶವೆಂದರೆ, ಭ್ರಷ್ಟಾಚಾರದ ಗೆದ್ದಲು ಕೆಳ ಮಟ್ಟದಲ್ಲಿ ಹಿಡಿಯದೆ ಮೇಲ್ಮಟ್ಟದಲ್ಲಿ ಆಗಿದೆ ಎಂಬ ದೂರಿನ ತನಿಖೆ ನಡೆದಿತ್ತು. ಕೇಂದ್ರ ಬಿಂದು ಮತ್ತೆ ಯಾರೂ ಅಲ್ಲ. ಸ್ವತಃ ಆಗಿನ ಲೋಕಾಯುಕ್ತರಾಗಿದ್ದ ವೈ.ಭಾಸ್ಕರ್ ರಾವ್ ಅವರ ಪುತ್ರ. ಹಣ ಪಡೆದು ಕೇಸುಗಳನ್ನು ನಿರ್ವಹಿಸಿದ ರೀತಿ ಇತ್ತಲ್ಲ ಅದು ಬಹಿರಂಗಗೊಂಡು ಲೋಕಾಯುಕ್ತರ ಮೇಲೆ ಅನುಮಾನಗಳು ವ್ಯಕ್ತವಾದವು. ಅವರ ರಾಜೀನಾಮೆಗೆ ಒತ್ತಡಗಳು ಹೆಚ್ಚಾದವು. ಆದರೆ ಅವರು ರಾಜೀನಾಮೆ ನೀಡಲಿಲ್ಲ.



ಲೋಕಾಯುಕ್ತದ ಒಳಗೆ ಪರಿಸ್ಥಿತಿ ಎಷ್ಟು ಹದಗೆಟ್ಟಿತ್ತು ಎಂದರೆ ಪ್ರಕರಣದ ತನಿಖೆ ಹೇಗೆ ಮಾಡಬೇಕು ಎನ್ನುವುದೂ ವಿವಾದಾಸ್ಪದವಾಗಿತ್ತು. ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ನಡುವೆ ಭಿನ್ನಾಭಿಪ್ರಾಯ ಇರುವುದು ಬೆಳಕಿಗೆ ಬಂದವು. ಒಬ್ಬ ಉಪಲೋಕಾಯುಕ್ತರು ಹೊರಡಿಸಿದ ಆಜ್ಞೆಯ ವಿರುದ್ಧ ಲೋಕಾಯುಕ್ತರು ಇನ್ನೊಂದು ಆದೇಶ ಹೊರಡಿಸಿದ್ದರು. ವಿಷಯವು ಮುಖ್ಯ ನ್ಯಾಯಾಲಯದ ಕಟ್ಟೆ ಏರಿತ್ತು. ಸಿಬಿಐ ತನಿಖೆಗೆ ಒಪ್ಪದ ಸರ್ಕಾರ ತನಿಖೆಗೆ ವಿಶೇಷ ತಂಡವನ್ನು ರಚಿಸಿದೆ. ಎಲ್ಲವೂ ಗೊಂದಲ. ಅಯೋಮಯವಾಗಿತ್ತು.

ಈ ಗೊಂದಲದ ಗೂಡಿನ ವಿವಿಧ ಆಯಾಮಗಳನ್ನು ಗಮನಿಸಿದರೆ ಮನಸ್ಸಿಗೆ ರೇಜಿಗೆಯಾಗುತ್ತದೆ. ಒಂದು ವೇಳೆ ಆರೋಪಕ್ಕೆ ಒಳಗಾದವರು ನಿರ್ದೋಷಿಗಳು ಎಂದು ಪಾರಾದರೂ, ಲೋಕಾಯುಕ್ತ ಸಂಸ್ಥೆ ಕಳೆದುಕೊಂಡ ವಿಶ್ವಾಸವನ್ನು ತಿರುಗಿ ಗಳಿಸಲು ಸಾಧ್ಯವಿಲ್ಲ. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಂದೀತೆ? ಭ್ರಷ್ಟಾಚಾರದ ತಡೆಗೆ ಕಟ್ಟಿದ ಗೋಡೆಯೇ ಶಿಥಿಲವಾದುದರಿಂದ ಭ್ರಷ್ಟಾಚಾರಿಗಳು ಇನ್ನು ತಮ್ಮ ಕಾಯಕವನ್ನು ಯಾರ ಹೆದರಿಕೆ ಬೆದರಿಕೆಯೂ ಇಲ್ಲದೇ ಪುನರಾರಂಭಿಸಲು ವೇದಿಕೆ ಸಿದ್ಧವಾದಂತಿದೆ. ಇದೊಂದು ಇತ್ತೀಚಿನ ದಿನಗಳಲ್ಲಿ ಕಂಡು ಬಂದ ಸಾರ್ವಜನಿಕ ಜೀವನದ ದುರಂತವೆನ್ನದೇ ವಿಧಿಯಿಲ್ಲ.



ಸರ್ಕಾರಕ್ಕೆ ಇದೊಂದು ಅವಕಾಶ ದೊರಕಿತಂತಾಗಿತ್ತು. ಆಗಿನ ಸಿಎಂ ಸಿದ್ದರಾಮಯ್ಯ ಇದೇ ಅವಕಾಶವನ್ನು ಉಪಯೋಗಿಸಿಕೊಂಡು ಲೋಕಾಯುಕ್ತವನ್ನು ನೆಪಕ್ಕೆಮಾತ್ರ ಎನ್ನುವಂತೆ ಅಧಿಕಾರವನ್ನು ಮೊಟಕುಗೊಳಿಸಿ ಎಸಿಬಿ ಸಂಸ್ಥೆಯನ್ನು ಹುಟ್ಟು ಹಾಕಿದರು. ಅಲ್ಲಿಗೆ ಲೋಕಾಯುಕ್ತ ನೆಪಕ್ಕೆಮಾತ್ರ ಇದ್ದಂತಾಗಿತ್ತು. ಆಗ ಪ್ರತಿಪಕ್ಷದಲ್ಲಿದ್ದ ಬಿಜೆಪಿ ವಿರೋಧ ವ್ಯಕ್ತಪಡಿಸಿ ಎಸಿಬಿ ರದ್ದುಗೊಳಿಸಿ ಲೋಕಾಯುಕ್ತ ಬಲಕ್ಕೆ ಪ್ರತಿಪಾದಿಸಿತ್ತು. ಆದರೆ ಅಧಿಕಾರಕ್ಕೆ ಬಂದು ಮೂರು ವರ್ಷವಾಗುತ್ತಾ ಬಂದರೂ ಆ ಬಗ್ಗೆ ಚಕಾರ ಎತ್ತುತ್ತಿಲ್ಲ. ಈ ಮಧ್ಯೆ, ಎಸಿಬಿ ರಚನೆ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳು ಹೈಕೋರ್ಟ್‌ನಲ್ಲಿ ಬಾಕಿ ಇವೆ. ಪಾರದರ್ಶಕ ಆಡಳಿತಕ್ಕೆಒತ್ತು ಕೊಡುತ್ತೇವೆ ಎಂದು ಬೀದಿಯಲ್ಲಿ ಹೇಳಿಕೊಳ್ಳುತ್ತಿರುವ ಸಿಎಂ ಬಸವರಾಜ್ ಬೊಮ್ಮಾಯಿ ಯಾಕೆ ಲೋಕಾಯುಕ್ತಕ್ಕೆ ಅಧಿಕಾರ ನೀಡಬಾರದು? ಊಹಂ ಅದು ಸಾಧ್ಯವಿಲ್ಲ ಅದಕ್ಕೆ ಅವರ ಕಿಮ್ಮತ್ತು ಇಲ್ಲ.

ಕರ್ನಾಟಕದಲ್ಲಿನ ಲೋಕಾಯುಕ್ತದ ರೂವಾರಿ ರಾಜ್ಯದ ಮೊದಲ ಕಾಂಗ್ರೆಸ್ಸೇತರ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ .ಕರ್ನಾಟಕ ಲೋಕಾಯುಕ್ತದ ಮೂರು ದಶಕಗಳ ಕಾಲಘಟ್ಟವನ್ನು ಹೀಗೆ ವಿಂಗಡಿಸಬಹುದು: ಮೊದಲನೆಯ ಹದಿನೈದು ವರ್ಷಗಳು ಅಜ್ಞಾತ ಪರ್ವ. ಪದವಿ ನಿರ್ವಹಿಸಿದ ಮೂವರು ಲೋಕಾಯುಕ್ತರದು ಮರೆಯ ಕಾಯಿಯಂತಿನ ಅಸ್ತಿತ್ವ. ಅವರ ಬಗೆಗೂ ಆ ಹುದ್ದೆಯ ಬಗೆಗೂ ಜನರಿಗೆ ಯಾವ ತರಹದ ಅರಿವೂ ಇರಲಿಲ್ಲ.

ಎರಡನೆಯ ಹತ್ತು ವರ್ಷ (2001–2010) ಸುವರ್ಣಯುಗ. ಜವಾಬ್ದಾರಿ ನಿರ್ವಹಿಸಿದ ಇಬ್ಬರೂ ಲೋಕಾಯುಕ್ತರು– ವೆಂಕಟಾಚಲ ಮತ್ತು ಸಂತೋಷ ಹೆಗ್ಡೆ ಅವರ ಕ್ರಿಯಾಶೀಲತೆಯಿಂದ ಲೋಕಾಯುಕ್ತದ ಉಪಯುಕ್ತತೆ ಮನೆಮಾತಾಗಿ ದೇಶದ ತುಂಬೆಲ್ಲ ಅದರ ಕಂಪು ಹರಡಿ, ಇದೊಂದು ಮಾದರಿ ವ್ಯವಸ್ಥೆ ಎಂಬ ಹೆಗ್ಗಳಿಕೆ ರಾಜ್ಯದ ಪಾಲಾಯಿತು. ಅವರು ಅಧಿಕಾರಸ್ಥ ಭ್ರಷ್ಟ ರಾಜಕಾರಣಿಗಳು ಮತ್ತು ಅಧಿಕಾರಿಗಳ ವಿರುದ್ಧ ಬಹಿರಂಗ ಸಮರಕ್ಕಿಳಿದು ಅವರಿಗೆ ಚಳಿ ತರಿಸಿದರು.

ಇಬ್ಬರ ಉದ್ದೇಶ ಒಂದೇ ಆಗಿದ್ದರೂ, ಕಾರ್ಯವೈಖರಿ ಮಾತ್ರ ಭಿನ್ನ. ವೆಂಕಟಾಚಲ ಅವರು ಬಹು ಗಡಸು. ಹೆಗ್ಡೆ ಅವರು ಮೃದು. ವೆಂಕಟಾಚಲ ಅವರ ಕಾಲದಲ್ಲಿ ದಾಳಿ ಮತ್ತು ಕಚೇರಿ ಪರಿಶೀಲನೆಗೆ ಪ್ರಾಶಸ್ತ್ಯ. ಹೆಗ್ಡೆ ಅವರ ಕಣ್ಣು ರಾಜಕಾರಣಿಗಳ ಮೇಲೆ. ವೆಂಕಟಾಚಲ ಅವರ ನೇಮಕವಾದದ್ದು ಎಸ್.ಎ
ನೇತೃತ್ವದ ಕಾಂಗ್ರೆಸ್ ಸರ್ಕಾರದ ಕಾಲದಲ್ಲಿ. ಮೇಲ್ನೋಟ
ಜಾತಿ ರಾಜಕಾರಣ ಮಾಡಿದ್ದಾರೆ ಎಂದು ಮನಸ್ಸಿನಲ್ಲಿ ಇ
ಸಂಶಯವನ್ನು ವೆಂಕಟಾಚಲ ಬೇಗನೇ ಹೊಡೆದು ಹಾಕಿ

ವಿವಿಧ ಕಚೇರಿಗಳಿಗೆ ಭೇಟಿ ಇತ್ತು, ಜನರಿಗೆ ಸೌಲಭ್ಯ
ಕಲ್ಪಿಸುವಲ್ಲಿ ಆಗುವ ವಿಳಂಬಕ್ಕೆ ಚಾಟಿ ಏಟು ಕೊಟ್ಟು ಕೆ
ಕಚೇರಿಗಳ ಕಾರ್ಯವೈಖರಿಯಲ್ಲಿ ಒಂದು ತರಹದ ಚು
ತಂದರು. ಕಾನೂನು ಪ್ರಕಾರ ಲೋಕಾಯುಕ್ತರಿಗಿಂತಲೂ
ಉಪಲೋಕಾಯುಕ್ತರಿಗೆ ಜಾಸ್ತಿ ಅಧಿಕಾರ ಇರುವುದರಿಂದ
ಉಪಲೋಕಾಯುಕ್ತರು ನೇಮಕವಾಗದಿದ್ದ ಆ ಕಾಲದಲ್ಲಿ,
ಉಪಲೋಕಾಯುಕ್ತರಿಗಿರುವ ಅಧಿಕಾರವನ್ನೂ ತಾವು ಚಲಾಯಿಸಲು
ಹಿಂಜರಿಯಲಿಲ್ಲ.

ನಂತರ ಬಂದ ಸಂತೋಷ ಹೆಗ್ಡೆ ಅದಕ್ಕೊಂದು ಹೊಸ ಆಯಾಮವ
ಕೊಡುವುದರಲ್ಲಿ ಯಶಸ್ವಿಯಾದರು. ಅವರು ಮಾಡಿದ ಅತ್ಯುತ್ತಮ ಕೆಲಸ
ಭೂಮಿ ಡಿನೋಟಿಫಿಕೇಶನ್ ಮತ್ತು ಅಕ್ರಮ ಗಣಿ ವ್ಯವಹಾರವನ್ನು
ಬಯಲಿಗೆಳೆದು ಕಡಿವಾಣ ಹಾಕಿದ್ದು. ಅದರಲ್ಲಿಯೂ ಗಣಿಗಳ ಆಗರವಾದ
ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿದ್ದ ಅವ್ಯವಹಾರಗಳನ್ನು ಬಯಲಿಗೆ ಎಳೆದು
ಈ ಕಪ್ಪುಹಣದ ಕಬಂಧಬಾಹುಗಳಿಂದ ರಾಜ್ಯದ ರಾಜಕೀಯವನ್ನು ಪಾ
ಮಾಡಿದ್ದು. ಲೋಕಾಯುಕ್ತದ ತನಿಖಾ ವರದಿಯಿಂದ ಎಷ್ಟು ಜನರ ಮೇ
ಕೇಸಾಗಿದೆ? ಯಡಿಯೂರಪ್ಪ, ಜನಾರ್ದನ ರೆಡ್ಡಿ ಮತ್ತು ಶಾಸಕ ಸಮೂಹ
ಜೈಲಿನ ಕಂಬಿ ಎಣಿಸಿದ್ದು ಮತ್ತು ಕೇಸುಗಳ ಕುಣಿಕೆಯಿಂದ ಹೊರಬರಲಾ
ಪರಿತಪಿಸುತ್ತಿರುವುದು ಇತ್ತೀಚಿನ ಇತಿಹಾಸವಾದುದರಿಂದ ಅದನ್ನು
ಪುನರುಚ್ಚರಿಸುವ ಅವಶ್ಯಕತೆ ಇಲ್ಲ.

ಸಂತೋಷ ಹೆಗ್ಡೆ ಅವರ ಅವಧಿ ಮುಗಿದ ನಂತರ ನಡೆಯುತ್ತಿರುವುದು
ಅಧಃಪತನದ ಪರ್ವ. ಸೂಕ್ತ ವ್ಯಕ್ತಿ ಸಿಗುತ್ತಿಲ್ಲವೆಂಬ ಕಾರಣದಿಂದ ಆಗಿನ
ಸರ್ಕಾರ ಲೋಕಾಯುಕ್ತ ಹುದ್ದೆಯನ್ನು ತುಂಬದೇ ಖಾಲಿ ಉಳಿಸಿತ್ತು. ಸೂ
ವ್ಯಕ್ತಿ ಸಿಗಲಿಲ್ಲವೆಂಬುದು ನೆವ ಮಾತ್ರ. ಹೆಗ್ಡೆ ಅವರು ಕೊಟ್ಟ ತನಿಖಾ ವರ
ಮೇಲೆ ಕ್ರಮ ಕೈಗೊಳ್ಳಬೇಕಾದ ಮಹತ್ವದ ಸಮಯದಲ್ಲಿ ಲೋಕಾಯುಕ್ತ
ಹುದ್ದೆಯನ್ನು ತುಂಬದಿರುವುದರಲ್ಲಿ ಬಿಜೆಪಿ ರಾಜಕೀಯ ಮಾಡಿದೆ ಎಂಬ
ಸಂಶಯವೂ ಬರದೇ ಇರಲಿಲ್ಲ.

ನಂತರ ಅಂತೂ ಇಂತೂ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀ
2011ರ ಜುಲೈನಲ್ಲಿ ಪದಗ್ರಹಣ ಮಾಡಿದರೂ, ಅವರು ತಿಂಗಳೂ ಈ
ಹುದ್ದೆಯಲ್ಲಿ ಉಳಿಯಲಿಲ್ಲ. ಬೆಂಗಳೂರಿನಲ್ಲಿ ಅವರಿರುವ ಮನೆ ಖರೀದಿ



# ಯುಕ್ತ ಎನ್ನುವ ಯನ್ನು ಸ್‌ನಲ್ಲಿಟ್ಟ ರಗಳು

ಹಾಕಿಕೊಳ್ಳದಂತೆ ಅದಕ್ಕೆ ಅಧಿಕಾರ ಕೊಡದಂತೆ ನೋಡಿಕೊಳ್ಳುವ ಪರಿಪಾಠದಲ್ಲಿದ್ದಾರೆ. ಅದಕ್ಕಾಗಿಯೇ ಅದನ್ನು ದೂರದಲ್ಲಿಯೇ ಇಟ್ಟು ಎಸಿಬಿ ಎನ್ನುವ ಸರ್ಕಾರ ಸೂಚನೆ ಪ್ರಕಾರ ನಡೆದುಕೊಳ್ಳುವ ಸಂಸ್ಥೆಯನ್ನು ಹುಟ್ಟು ಹಾಕಿದ್ದು. ಆದರೆ ಈ ಐದು ವರ್ಷದಲ್ಲಿ ಪಿ.ವಿಶ್ವನಾಥ್ ಶೆಟ್ಟಿ ಅವರು ಅಧಿಕಾರ ನಡೆಸಿದ್ದು ಈಗ ನಿವೃತ್ತಿ ಹೊಂದುತ್ತಿದ್ದಾರೆ ಅವರು ಸರ್ಕಾರವನ್ನು ಅಧಿಕಾರ ಕೊಡಿ ಅಂತ ಕೇಳುವುದಿಲ್ಲ ಎನ್ನುವುದನ್ನು ತಮ್ಮ ಮೌನ ಅಕ್ರೋಶವನ್ನು ಹೊರಹಾಕಿದ್ದಾರೆ ..ಆದರೆ ಸರ್ಕಾರಕ್ಕೆ ಇಂತ ಅಕ್ರೋಶಗಳಿಗೆ ಮಣೆ ಹಾಕುವುದಿಲ್ಲ ಎನ್ನುವುದು ಗೊತ್ತು ಆದರೆ ಲೋಕಾಯುಕ್ತರ ಅವಧಿ ಮುಗಿದಿದ್ದರೂ ಕೂಡ ಇನ್ನೂ ಲೋಕಾಯುಕ್ತರನ್ನು ನೇಮಕ ಮಾಡದೆ ಇರುವ ದೋರಣೆ ಇದೆಯಲ್ಲ ಅದು ನಿಜಕ್ಕೂ ಸರ್ಕಾರದ ಬೇಜವಾಬ್ದಾರಿತನಕ್ಕೆ ಇದೊಂದು ನಿದರ್ಶನ ಎನ್ನುವಂತಿದೆ.

ಲೋಕಾಯುಕ್ತ ಅಂಗಾಂಗ ಕಡಿತ: ಆಡಳಿತದಲ್ಲಿ ಜನರಿಗೆ ಆಗುತ್ತಿದ್ದ ಅನ್ಯಾಯ ಸರಿಪಡಿಸಲು ಹಾಗೂ ಭ್ರಷ್ಟಾಚಾರ ತಡೆಯಲು ರಾಜ್ಯದಲ್ಲಿ ಲೋಕಾಯುಕ್ತ ಸಂಸ್ಥೆ ಸ್ಥಾಪಿಸಲಾಯಿತು. ತದನಂತರ ಲೋಕಾಯುಕ್ತ ಸಂಸ್ಥೆ ತನ್ನದೇ ಆದ ಜವಾಬ್ದಾರಿಗಳನ್ನು ನಿರ್ವಹಿಸಿಕೊಂಡು ಬಂತು. ಆದರೆ, ಬಲಿಷ್ಠ ಲೋಕಾಯುಕ್ತ ಸಂಸ್ಥೆ ಅಸ್ತಿತ್ವದಲ್ಲಿದ್ದರೆ ಆಡಳಿತ ವರ್ಗಕ್ಕೂ ವಿರೋಧ ಪಕ್ಷದ ರಾಜಕಾರಣಿಗಳಿಗೆ ನೆಮ್ಮದಿ ಇರಲ್ಲ. ಹೀಗಾಗಿ ಅದನ್ನು ಸಂಪೂರ್ಣ ನಿಷ್ಕ್ರಿಯಗೊಳಿಸುವ ಕಾರ್ಯ ಮಾಡುತ್ತಿದೆ. ಲೋಕಾಯುಕ್ತ ಸಂಸ್ಥೆಯನ್ನು ಮುಚ್ಚುವ ಧೈರ್ಯವೂ ತೋರುತ್ತಿಲ್ಲ. ಅದರ ಒಂದೊಂದು ಅಂಗವನ್ನು ಕಡಿದು ನಿಷ್ಕ್ರಿಯಗೊಳಿಸುತ್ತಿದ್ದಾರೆ .

2009 ರಿಂದ 2011ರ ವರೆಗೂ ಗಣಿ ಅಕ್ರಮದ ಬಗ್ಗೆ ಹಂತಹಂತವಾಗಿ ಸರಣಿ ವರದಿ ನೀಡಲಾಗಿತ್ತು. ಆಗ ಬಿಜೆಪಿ ಸರ್ಕಾರ ಆಡಳಿತದಲ್ಲಿತ್ತು. ಗಣಿ ವರದಿ ಜಾರಿಗೆ ತರಬೇಕು ಎಂದು ಲೋಕಾಯುಕ್ತ ಸಂಸ್ಥೆಯ ವರದಿಯನ್ನು ಮುಂದಿಟ್ಟುಕೊಂಡು ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಬಳ್ಳಾರಿ ವರೆಗೂ ಪಾದಯಾತ್ರೆ ಮಾಡಿದರು. ಗಣಿ ಅಕ್ರಮದಲ್ಲಿ ಬಿಜೆಪಿ ನಾಯಕರು ಇರುವುದರಿಂದ ಅದನ್ನು ಜಾರಿಗೆ ತರುತ್ತಿಲ್ಲ ಎಂದು ಜನರ ಮುಂದೆ ಸಿದ್ದರಾಮಯ್ಯ ಹೇಳಿಕೊಂಡರು. ಅದಾದ ಬಳಿಕ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಸಿದ್ದರಾಮಯ್ಯ ಅವರೇ ಸಿಎಂ ಆದರು.ಗಣಿ ವರದಿಯನ್ನು ಸಿದ್ದರಾಮಯ್ಯ ಜಾರಿಗೆ ತರದೇ ಅವರೂ ಮಣ್ಣು ಮಾಡಿದರು .ಅಲ್ಲದೆ ಎಸಿಬಿ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರು.

ಲೋಕಾಯುಕ್ತ ಸಂಸ್ಥೆಗೆ ಎರಡು ಅಧಿಕಾರ ಇತ್ತು. ಭ್ರಷ್ಟಾಚಾರದ ವಿರುದ್ಧ ತನಿಖೆ ನಡೆಸುವ ಲೋಕಾಯುಕ್ತ ಪೊಲೀಸ್ ಘಟಕ ( ಭ್ರಷ್ಟಾಚಾರ ನಿಗ್ರಹ ದಳ) ಇತ್ತು. ಯಾರ ಮುಲಾಜಿಗೂ ಒಳಗಾಗದೇ ಶಾಸಕರು, ಮಂತ್ರಿಗಳ ಅಕ್ರಮಗಳ ವಿರುದ್ಧ ತನಿಖೆ ನಡೆಸಲಾಗುತ್ತಿತ್ತು. ಲೋಕಾಯುಕ್ತ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿ ಲೋಕಾಯುಕ್ತ ಸಂಸ್ಥೆಯ ಭ್ರಷ್ಟಾಚಾರ ನಿಗ್ರಹ ದಳವನ್ನು ಪ್ರತ್ಯೇಕ ಮಾಡಿ ಎಸಿಬಿ ರಚನೆ ಮಾಡಿದರು. ಎಸಿಬಿ ಸರ್ಕಾರ, ಗೃಹ ಸಚಿವರ ಕೈಕೆಳಗೆ ಕೆಲಸ ಮಾಡುವ ಸಂಸ್ಥೆ. ಅದು ರಚನೆಯಾದ ಬಳಿಕ ಎಷ್ಟು ಮಂದಿ ಶಾಸಕರು, ಮಂತ್ರಿಗಳ ಭ್ರಷ್ಟಾಚಾರದ ಬಗ್ಗೆ ಕೇಸು ದಾಖಲಿಸಿ ತನಿಖೆ ನಡೆಸಿದೆ ?

ಲೋಕಾಯುಕ್ತ ಬಲಿಷ್ಠವಾದ್ರೆ ರಾಜಕಾರಣಿಗಳಿಗೆ ಕಷ್ಟ: ಅದೇ ಲೋಕಾಯುಕ್ತ ಪೊಲೀಸ್ ಘಟಕ ಲಂಚ ಪ್ರಕರಣಗಳಲ್ಲಿ ಶಾಸಕರು, ಮಂತ್ರಿಗಳನ್ನು ಬಂಧಿಸಿ ನ್ಯಾಯಾಂಗ ತನಿಖೆಗೆ ಒಳಪಡಿಸಿದೆ. ಎಸಿಬಿ ಈವರೆಗೂ ಎಷ್ಟು ಮಂತ್ರಿಗಳ ಶಾಸಕರ ವಿರುದ್ಧ ಕೇಸು ದಾಖಲಿಸಿದೆ. ಗಣಿ ಅಕ್ರಮಕ್ಕೆ ಸಂಬಂಧಿಸಿದಂತೆ ಮೂರು ಪಕ್ಷಗಳ ಮೂರು ಮುಖ್ಯಮಂತ್ರಿಗಳ ವಿರುದ್ಧ ವರದಿ ನೀಡಿದ್ದೆ. ಏಳು ಮಂತ್ರಿಗಳು ಅಕ್ರಮದಲ್ಲಿ ಭಾಗಿಯಾಗಿರುವ ಬಗ್ಗೆ ದಾಖಲೆಗಳ ಸಮೇತ ವರದಿ ನೀಡಿದ್ದೆ. ಅನೇಕ ಶಾಸಕರ ಪಾತ್ರದ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ವರದಿಯನ್ನು ಯಾವ ಪಕ್ಷದವರೂ ಜಾರಿಗೆ ತರಲಿಲ್ಲ. ಲೋಕಾಯುಕ್ತ ಸಂಸ್ಥೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳಿ ಲೋಕಾಯುಕ್ತ ಪೊಲೀಸ್ ಘಟಕ ರದ್ದು ಮಾಡಿ ಎಸಿಬಿ ರಚನೆ ಮಾಡಿ ಜನರಿಗೆ ಮಂಕು ಬೂದಿ ಎರಚಿದರು. ಲೋಕಾಯುಕ್ತ ಸಂಸ್ಥೆ ಬಡ ಜನರ ಪರ ಕೆಲಸ ಮಾಡುವ ಸಂಸ್ಥೆ. ಶ್ರೀಮಂತರು ಹೇಗೂ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ.

ಬಗ್ಗೆ ಕೇಳಿ ಬಂದ ಅಪಶಬ್ದಗಳಿಂದ ಮನನೊಂದ ಪಾಟೀಲರು ಪದತ್ಯಾಗ ಮಾಡಿದರು. ನಂತರ ಲೋಕಾಯುಕ್ತರಾದ ವೈ.ಭಾಸ್ಕರ ರಾವ್ ಅವರ ನೇಮಕ 2013ರಲ್ಲಿ ಆಗುವ ತನಕ, ಲೋಕಾಯುಕ್ತ ಹುದ್ದೆ ಖಾಲಿಯಾಗಿಯೇ ಇತ್ತು.

ಲೋಕಾಯುಕ್ತವು ಮೊದಲಿನಂತೆ ಕಾರ್ಯಶೀಲವಾಗುವುದೆಂದು ಆಶಿಸಿದ್ದವರಿಗೆ ಆಗಿದ್ದು ಆಘಾತ. ಲೋಕಾಯುಕ್ತವು ಭ್ರಷ್ಟಾಚಾರದ ಕೂಪವಾಗಿತ್ತು ಲೋಕಾಯುಕ್ತರ ಪುತ್ರನ ವಿರುದ್ಧ ಕೇಳಿ ಬಂದಿರುವ ಆರೋಪ ಹಾಗೂ ಮಗನ ಹಿತರಕ್ಷಿಸಲು ಪರದಾಡಿದರು. ಪ್ರಖ್ಯಾತಿಯ ಶೃಂಗದಿಂದ ಅಪಖ್ಯಾತಿಯ ಕೂಪಕ್ಕೆ ಲೋಕಾಯುಕ್ತ ವ್ಯವಸ್ಥೆ ಬಿದ್ದಿದ್ದಾದರೂ ಹೇಗೆ ಎನ್ನುವುದು ಇಲ್ಲಿ ಉದ್ಭವವಾಗುವ ಮುಖ್ಯ ಪ್ರಶ್ನೆ. ಅದಕ್ಕೆ ಹಲವಾರು ಕಾರಣಗಳನ್ನು ಕೊಡಬಹುದು. ಇದರಲ್ಲಿ ಪ್ರಮುಖವಾದದ್ದು ಸರ್ಕಾರದ ಸೂತ್ರ ಹಿಡಿದಿರುವ ರಾಜಕೀಯ ನಾಯಕರು ಮತ್ತು ಅಧಿಕಾರಶಾಹಿಗೆ ಲೋಕಾಯುಕ್ತದ ಜೊತೆಗೆ ಎಂದೂ ಮಧುರ ಸಂಬಂಧ ಇರಲಿಲ್ಲ. ಲೋಕಾಯುಕ್ತವನ್ನು ಇಲ್ಲಿನ ವ್ಯವಸ್ಥೆಯ ಅವಿಭಾಜ್ಯ ಅಂಗ ಮತ್ತು ಒಂದು ಮುಖ್ಯ ಹೊಣೆ ನಿರ್ವಹಿಸಲು ಕಾನೂನಿನ ಮೂಲಕ ಜನ್ಮ ತಾಳಿದ ಸಂಸ್ಥೆ ಎಂದು ಭಾವಿಸದೆ, ತಮ್ಮ ನಿರಂಕುಶ ಪ್ರಭುತ್ವಕ್ಕೆ ಅಡ್ಡಗಾಲು ಹಾಕಲು ಬಂದ ಹೊರಗಿನ ಸಂಸ್ಥೆ ಎಂಬ ಅಪನಂಬಿಕೆ ಅವರಲ್ಲಿ ಮನೆ ಮಾಡಿತ್ತು. ಆಡಳಿತ ಸೂತ್ರ ಹಿಡಿದ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿಯಲ್ಲಿ ಯಾವ ರಾಜಕೀಯ ಪಕ್ಷವೂ ಈ ಅಪನಂಬಿಕೆಯ ಭಾವನೆಯಿಂದ ಹೊರತಾಗಿರಲಿಲ್ಲ. ಅವರಲ್ಲಿ ಮಡುಗಟ್ಟಿದ್ದ ಅವಜ್ಞೆ, ಅಸಹನೆಗಳು ಕಾಲಕಾಲಕ್ಕೆ ವ್ಯಕ್ತವಾಗುತ್ತಲೇ ಬಂದಿವೆ.

ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ಕೊಡುವ ವಿಷಯದಲ್ಲಿ ಇದು ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಲೋಕಾಯುಕ್ತ ಕಾನೂನು ಜಾರಿಯಾಗುವ ಮುನ್ನವೇ ಸದ್ದು ಗದ್ದಲವಿಲ್ಲದೇ ಕಾನೂನು ತಿದ್ದುಪಡಿಯ ಮೂಲಕ, ಲೋಕಾಯುಕ್ತ ಪರಿಧಿಯಿಂದ ಆಡಳಿತದಲ್ಲಿನ ಕೆನೆಪದರದ ವರ್ಗವನ್ನು ಹೊರ ತರಲಾಯಿತು. ಪರಿಣಾಮಕಾರಿ ಅನುಷ್ಠಾನಕ್ಕೆ ಲೋಕಾಯುಕ್ತ ಸೂಚಿಸಿದ ಆಡಳಿತಾತ್ಮಕ ವ್ಯವಸ್ಥೆ, ಸೂಕ್ತ ಕಾನೂನು ತಿದ್ದುಪಡಿ ಸಲಹೆಗಳಿಗೆ ಸರ್ಕಾರ ಕಿವಿಗೊಡಲೇ ಇಲ್ಲ.

ಕಾನೂನಿನ ಪ್ರಕಾರ ಲೋಕಾಯುಕ್ತರಿಗೆ ಲಿಖಿತ ದೂರು ಬರುವ ತನಕ ವಿಚಾರಣೆ ಪ್ರಾರಂಭಿಸಲು ಅಧಿಕಾರವಿಲ್ಲ. ಈ ಅಧಿಕಾರ ಇರುವುದು ಉಪಲೋಕಾಯುಕ್ತರಿಗೆ ಮಾತ್ರ. ಇದರಿಂದ ಉಂಟಾಗುವ ತೊಡಕನ್ನು ಪರಿಹರಿಸಲು ತಮಗೂ ಸ್ವತಃ ಕ್ರಮ ಕೈಗೊಳ್ಳುವ ಅಧಿಕಾರ ಕೊಡಬೇಕೆಂದು ವೆಂಕಟಾಚಲ ಮತ್ತು ಸಂತೋಷ ಹೆಗ್ಡೆ ಅವರು ಪದೇ ಪದೇ ಮಾಡಿದ ಮನವಿಗೆ ಸರ್ಕಾರ ಕೊನೆ ತನಕವೂ ಕ್ಯಾರೇ ಅನ್ನಲಿಲ್ಲ.

ಲೋಕಾಯುಕ್ತದ ದಾಳಿಗಳಲ್ಲಿ ಸಿಕ್ಕಿಬಿದ್ದವರ ಮೇಲೆ ಮುಂದಿನ ಕ್ರಮ ಕೈಗೊಳ್ಳುವಲ್ಲಿ ತೋರಿಸುತ್ತಿದ್ದ ಅನಾಸಕ್ತಿ ಊಹಿಸಲು ಅಸಾಧ್ಯ. ಇದರ ಬದಲಾಗಿ, ದಾಳಿಯಲ್ಲಿ ಸಿಕ್ಕಿಬಿದ್ದ ಅಧಿಕಾರಿಗಳಿಗೆ ಬಡ್ತಿ ಕೊಟ್ಟು ಅತಿ ಮುಖ್ಯ ಹುದ್ದೆಗಳಿಗೆ ನಿಯೋಜಿಸಲಾದ ನಿದರ್ಶನಗಳಿಗೂ ಕಡಿಮೆ ಏನಿಲ್ಲ. ಲೋಕಾಯುಕ್ತ ದಾಳಿಗೆ ಬೆದರದಿರಿ, ಸರ್ಕಾರ ನಿಮ್ಮ ಬೆಂಬಲಕ್ಕಿದೆ ಎಂದು ಭ್ರಷ್ಟ ಅಧಿಕಾರಿಗಳಿಗೆ ಸಂದೇಶ ನೀಡುವುದು ಬೇಕಿತ್ತೆ?

ಬಹುಶಃ ರಾಜಕೀಯ ಪಕ್ಷಗಳು ಕಾನೂನು ಮಾಡಿದಾಗ ಒಂದು ರೀತಿ ಅದನ್ನು ಅಲಂಕಾರಿಕ ವಸ್ತುವಿನಂತೆ ಡ್ರಾಯಿಂಗ್ ರೂಮಿನಲ್ಲಿ ಇಡುವಂತಾಯಿತು. ಇದನ್ನು ಅರಿಯದ ಆಗಿನ ಲೋಕಾಯುಕ್ತರಾಗಿದ್ದ ವೆಂಕಟಚಲ ಮತ್ತು ಸಂತೋಷ್ ಹೆಗ್ಡೆ ಅವರು ಒಂದು ರೀತಿ ಚೈತನ್ಯ ರೂಪ ನಿಡಿದ್ದು ಆದರೆ ಸರ್ಕಾರ ಮಾಡಿದ್ದ ಆ ನಕಾಶೆ ಪ್ರಕಾರ ಲೋಕಾಯುಕ್ತವು ಒಳಗಿನಿಂದ ಗೆದ್ದಲು ತಿನ್ನುವಂತೆ ಆಗಿದ್ದು, ಲೋಕಾಯುಕ್ತರ ನೇಮಕದಲ್ಲಿ ಅತಿಯಾದ ವಿಳಂಬದ ವಿಷಯದಲ್ಲಿ ಸರ್ಕಾರ ತನ್ನ ಜವಾಬ್ದಾರಿಯನ್ನು ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ.

ಹೀಗೆ ಲೋಕಾಯುಕ್ತವನ್ನು ರಾಜಕಾರಣಿಗಳೇ ತಮ್ಮ ಮೈಮೇಲೆ



## ಸಿದ್ದರಾಮಯ್ಯ ಅವರಿಂದಲೇ ಲೋಕಾ ದುರ್ಬಲ



ಲೋಕಾಯುಕ್ತ ಗಣಿ ವರದಿ ಮುಂದಿಟ್ಟುಕೊಂಡು ಪಾದಯಾತ್ರೆ ಮಾಡಿ ಅಧಿಕಾರ ಹಿಡಿದ ಸಿದ್ದರಾಮಯ್ಯ ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸಿದರು ಎಂದು ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಗಡೆ ತಿಳಿಸಿದರು ಕೆಂಧೂಳಿ ಜೊತೆ ದೂರವಾಣಿಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕರಾಗಿದ್ದ ಯಡಿಯೂರಪ್ಪ, ನಾನು ಅಧಿಕಾರಕ್ಕೆ ಬಂದರೆ 24 ತಾಸಿನಲ್ಲಿ ಎಸಿಬಿಯನ್ನು ಬರ್ಕಾಸ್ತು ಮಾಡಿ ಲೋಕಾಯುಕ್ತ ಸಂಸ್ಥೆಯನ್ನು ಬಲಿಷ್ಠಗೊಳಿಸುತ್ತೇನೆ ಎಂದು ವಚನ ನೀಡಿದ್ದರು. 24 ತಾಸು ಮುಗಿಯಿತು, ಎರಡು ವರ್ಷಗಳು ಕಳೆಯಿತು. ಎಸಿಬಿ ರದ್ದಾಗಲಿಲ್ಲ. ಲೋಕಾಯುಕ್ತ ಬಲಿಷ್ಠವಾಗಲಿಲ್ಲ. ಕೇಳಿದರೆ, ನಾನು ತಪ್ಪು ಹೇಳಿಕೆ ನೀಡಿದ್ದೆ. ಎಸಿಬಿ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿ ನುಣುಚಿಕೊಂಡರು. ಬಡವರ ಪರ ಕೆಲಸ ಮಾಡುವ ಲೋಕಾಯುಕ್ತ ಸಂಸ್ಥೆ ಬಲಿಷ್ಠವಾಗುವುದು ಇವರು ಯಾರಿಗೂ ಇಷ್ಟವಿಲ್ಲ ಎಂದು ಕಿಡಿ ಕಾರಿದರು. ನ್ಯಾ. ವಿಶ್ವನಾಥ ಶೆಟ್ಟಿ ನಿರ್ಗಮನ : ನ್ಯಾ. ಪಿ. ವಿಶ್ವನಾಥಶೆಟ್ಟಿ ಅವರ ಅವಧಿ ಮುಗಿಯುತ್ತಿದೆ ಎಂದು ಸರ್ಕಾರಕ್ಕೆ ಗೊತ್ತಿಲ್ಲವೇ? ಲೋಕಾಯುಕ್ತರನ್ನು ನೇಮಕ ಮಾಡುವುದು ಕೇವಲ ಮುಖ್ಯಮಂತ್ರಿಗಳು ಮಾತ್ರವಲ್ಲ, ವಿರೋಧ ಪಕ್ಷದ ನಾಯಕರ ಜವಾಬ್ದಾರಿ ಕೂಡ ಹೌದು. ಲೋಕಾಯುಕ್ತರ ಅವಧಿ ಮುಗಿಯುವ ಮೂರು ತಿಂಗಳ ಮೊದಲೇ ಇದರ ಬಗ್ಗೆ ಪ್ರಸ್ತಾಪಿಸಿ ಅರ್ಹರನ್ನು ನೇಮಕ ಮಾಡುವ ಪ್ರಕ್ರಿಯೆಗೆ ಚಾಲನೆ ಕೊಡಬೇಕಿತ್ತು. ಆದರೆ, ಇವರಿಗೆ ಯಾರಿಗೂ ಲೋಕಾಯುಕ್ತ ಸಂಸ್ಥೆ ಬೇಕಿಲ್ಲ. ಅದನ್ನು ಮುಚ್ಚುವ ಧೈರ್ಯವೂ ಅವರಿಗೆ ಇಲ್ಲ. ಜನರು ಲೋಕಾಯುಕ್ತ ಸಂಸ್ಥೆ ಮೇಲೆ ಇಟ್ಟಿರುವ ನಂಬಿಕೆಯಿಂದ ಅದು ಉಳಿದುಕೊಂಡಿದೆ. ಆಡಳಿತ ಪಕ್ಷದವರಿಗಾಗಲೀ, ವಿರೋಧ ಪಕ್ಷದವರಿಗಾಗಲೀ ಯಾರಿಗೂ ಕಾಳಜಿ ಇಲ್ಲ ಎಂದು ಬೇಸರ ತೋಡಿಕೊಂಡರು. ಲೋಕಾಯುಕ್ತ ಸಂಸ್ಥೆ ಶ್ರೀಮಂತರಿಗೆ ಬೇಕಾಗಿಲ್ಲ. ಅವರ ಕೆಲಸ ಹೇಗೂ ಅವರು ಮಾಡಿಕೊಳ್ಳುತ್ತಾರೆ. ನೊಂದು ಬರುವ ಬಡವರಿಗೆ ನ್ಯಾಯ ಸಿಗಲು ಲೋಕಾಯುಕ್ತ ಸಂಸ್ಥೆ ಬೇಕು. ಬಲಿಷ್ಠವಾಗಿರುವ ಲೋಕಾಯುಕ್ತ ಸಂಸ್ಥೆ ಬೇಕು. ಹೀಗಾಗಿಯೇ ಬೆಂಗಳೂರಿಗೆ ಸೀಮಿತವಾಗಿದ್ದ ಲೋಕಾಯುಕ್ತ ಸಂಸ್ಥೆ ಜಿಲ್ಲೆಗಳಲ್ಲಿ ಕಚೇರಿ ಆರಂಭಿಸಿತ್ತು. ಲೋಕಾಯುಕ್ತ ಸಂಸ್ಥೆಯನ್ನು ಬಲಿಷ್ಠಗೊಳಿಸುವ ಆಸಕ್ತಿ ಯಾವ ನಾಯಕನಿಗೂ ಇಲ್ಲ. ಹೀಗಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ಲೋಕಾಯುಕ್ತ ಸಂಸ್ಥೆಯನ್ನು ಬಳಸಿಕೊಂಡು ರಾಜಕಾರಣಕ್ಕೆ ಸೀಮಿತಗೊಳಿಸಿಕೊಳ್ಳುತ್ತಿರುವುದು ನೋಡಿದರೆ ನನಗೆ ಬೇಸರವಾಗುತ್ತಿದೆ ಎಂದು ನೋವು ತೋಡಿಕೊಂಡರು.

# ಬೆಂಗಳೂರು ಹೊರವಲಯದಲ್ಲಿ ಶುರುವಾಗಿದೆ ಭೂಮಾಫಿಯಾ–ಮರ್ಡರ್ !!

● ಪರಶಿವ ಧನಗೂರು

ಬೆಂಗಳೂರು ಹೊರವಲಯದ ಆನೇಕಲ್ ನಾಗರೀಕರನ್ನು ಬೆಚ್ಚಿ ಬೀಳಿಸಿದ್ದ ರಾಜಶೇಖರ್ ರೆಡ್ಡಿ ಎಂಬ ಆಂಧ್ರಪ್ರದೇಶದ ಚಿತ್ತೂರು ಮೂಲದ ರಿಯಲ್ ಎಸ್ಟೇಟ್ ಬ್ರೋಕರ್ ಮರ್ಡರ್ ಮಿಸ್ಟರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಯುವಕರನ್ನು ಬಂಧಿಸಿರುವ ಆನೇಕಲ್ ಪೊಲೀಸರು ಭೂಮಾಫಿಯಾ ಕೈವಾಡವನ್ನು ಬಯಲಿಗೆಳೆದಿದ್ದಾರೆ! ಆನೇಕಲ್ ತಾಲ್ಲೂಕಿನ ತಮ್ಮನಾಯಕನಹಳ್ಳಿಯ ಮೀಸೆ ಜಯರಾಂ ಮತ್ತು ಆತನ ಮಗ ಶಶಿಕುಮಾರ್ ಒಂದೂ ಕಾಲೂ ಕೋಟಿಗೆ ಸುಫಾರಿ ನೀಡಿ ಕೊಲೆ ಮಾಡಿಸಿರುವುದು ತನಿಖೆಯಿಂದ ಬಯಲಾಗಿದೆ! ಬೆಂಗಳೂರಿನ ಬಿ.ಟಿ.ಎಂ ಲೇಔಟಿನ ಸುಧಾಕರ್ ರೆಡ್ಡಿ ಹೆಸರಿನಲ್ಲಿ ಇದ್ದ, ಕೋಟ್ಯಂತರ ರೂಪಾಯಿ ಬೆಲೆಬಾಳುವ 32ಗುಂಟೆ ಜಮೀನನ್ನು, ತಮ್ಮನಾಯಕನಹಳ್ಳಿ ಮೀಸೆ ಜಯರಾಂ ಅಗ್ರಿಮೆಂಟ್ ಹಾಕಿಕೊಂಡಿದ್ದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ, ತನಗೇ ರಿಜಿಸ್ಟ್ರೇಷನ್ ಮಾಡಿಕೊಡುವಂತೆ, ಮೃತ ಸುಧಾಕರ್ ರೆಡ್ಡಿ ಹೆಂಡತಿ ಪದ್ಮ ಮತ್ತು ಮಕ್ಕಳಲ್ಲಿ ಒತ್ತಾಯಿಸುತ್ತಿದ್ದನಂತೇ! ಇದೇ ಸಮಯದಲ್ಲಿ ಆಂದ್ರ ಮೂಲದ ರಿಯಲ್ ಎಸ್ಟೇಟ್ ಬ್ರೋಕರ್ ರಾಜಶೇಖರ ರೆಡ್ಡಿ ಮಧ್ಯೆ ಪ್ರವೇಶಿಸಿ ಪದ್ಮ ಮತ್ತು ಮಕ್ಕಳ ಪರವಾಗಿನಿಂತು ಮೀಸೆ ಜಯರಾಂಗೆ ಸೆಡ್ಡು ಹೊಡೆದಿದ್ದನಂತೆ. ಹಾಗೆಯೆ ಆನೇಕಲ್ ಸುತ್ತ ಮುತ್ತವಿದ್ದ ಉಳಿದ ಸುಧಾಕರ್ ರೆಡ್ಡಿ ಜಮೀನುಗಳಿಗೂ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು , ಬೇಲಿ ಸುತ್ತಿಗುಳುಂ ಮಾಡಲು ರೆಡಿ ಇದ್ದ ಮೀಸೆ ಜಯರಾಂ ಮತ್ತು ಕಾಣದ ಕೈಗಳಿಗೆ ಈಗ ಕೊಲೆಯಾಗಿರುವ ರಾಜಶೇಖರ್ ರೆಡ್ಡಿ ಅಡ್ಡಿಯಾಗಿದ್ದನೆಂಬ ಕಾರಣಕ್ಕೆ, ಈ ಸುಫಾರಿ ಕೊಲೆ ನಡೆದಿದೆಯಂತೆ. ಇದು ಸದ್ಯಕ್ಕೆ ಆನೇಕಲ್ ಪೊಲೀಸರು ಹೇಳುತ್ತಿರುವ ಮೊದಲ ಸುತ್ತಿನ ತನಿಖೆಯ ವರದಿ. ಆದರೆ ಆನೇಕಲ್ ಪಟ್ಟಣದಲ್ಲಿ ನಡೆದ ಈ ಸುಫಾರಿ ಕೊಲೆಯ ಹಿಂದೆ ಇನ್ನೂ ಹಲವಾರು ಕಾಣದ ಕೈಗಳಿರುವುದು ಪೊಲೀಸರಿಗೂ ವಾಸನೆ ಹತ್ತಿದೆ. ಅವರನ್ನೂ ಬೆಲೆಗೆ ಕೆಡವಲು ಆನೇಕಲ್ ಪೊಲೀಸ್ ಇನ್ಸ್ಪೆಕ್ಟರ್ ಮಹಾನಂದ್ ಮತ್ತು ತಂಡ ಕಾರ್ಯಾಚರಣೆಗಿಳಿದಿದೆ.







### ಸುಫಾರಿ ಕೊಲೆ ಹಿಂದೆ ಬಣ್ಣದ ಜಗತ್ತಿನ ನಂಟು!

ಈ ಸುಫಾರಿ ಕೊಲೆಯ ಹಿಂದೆ ಬಣ್ಣದ ಜಗತ್ತಿನ ಜನರ ಹೆಸರುಗಳು, ಕರಿಕೋಟಿನ ಕೈವಾಡಗಳೂ ತಳುಕುಹಾಕಿಕೊಂಡು ಹರಿದಾಡುತ್ತಿರುವುದು, ಅಂತವರನ್ನು ಈ ಸುಫಾರಿ ಕೊಲೆ ಪ್ರಕರಣದಿಂದ ಬಚಾವು ಮಾಡಲು ಸ್ಥಳೀಯ ರಾಜಕೀಯ ಪುಡಾರಿಗಳು, ಪುರಸಭಾ ಸದಸ್ಯರು ಫೀಲ್ಡಿಗಿಳಿದಿರುವುದು ಹಲವಾರು ಅನುಮಾನಗಳನ್ನು ಹುಟ್ಟುಹಾಕಿವೆ. ಹಾಗೆಯೆ ಈ ಕೊಲೆಯನ್ನು ಒಂದೂ ಕಾಲು ಕೋಟಿ ಹಣಕ್ಕೆ ಸುಫಾರಿ ಪಡೆದಿರುವ ಕೊಲೆಗಾರರನ್ನು ನೋಡುತಿದ್ದರೆ, ಅವರ ಹಿನ್ನೆಲೆಯನ್ನು ಕೆದಕಿದಾಗ ಈ







ಕೊಲೆಗಾರರಿಗೆ ಮತ್ಯಾರೋ ಬಾಸ್ ಗಳು ಇರುವ ಸಾಧ್ಯತೆಯೂ ಇದೆ! ಆ ವಿಚಾರ ಕೂಡ ಪೊಲೀಸ್ ಅಧಿಕಾರಿಗಳ ಉನ್ನತ ಮಟ್ಟದ ತನಿಖೆಯಿಂದಷ್ಟೆ ಬಯಲಾಗ ಬೇಕಿದೆ. ಏಕೆಂದರೆ ಈಗ ಆನೇಕಲ್ ಕೇವಲ ಒಂದು ಬೆಂಗಳೂರು ಗ್ರಾಮಾಂತರದ ತಾಲೂಕು ಕೇಂದ್ರವಾಗಿ ಮಾತ್ರ ಉಳಿದಿಲ್ಲ. ಈಗದು ದೊಡ್ಡ ಭೂ ದಂಧೆಯ ಕೇಂದ್ರವಾಗಿ, ಭೂಮಾಫಿಯಾ ನಡೆಸುವವರ ಕಾರಸ್ಥಾನವಾಗಿ ಮಾರ್ಪಾಡಾಗಿದೆ. ಈ ಕ್ರೂರ ವ್ಯವಸ್ಥೆಯೊಳಗೆ ಈಗ ರೌಡಿಗಳು, ರಾಜಕಾರಣಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು, ಪೋಲೀಸರು, ಸಂಘಟನೆಗಳ ಮುಖಂಡರು ಇದ್ದಾರೆ.

ಇತ್ತೀಚಿಗೆ ಬೆಂಗಳೂರಿನ ಗ್ರಾಮಾಂತರ ಪ್ರದೇಶವಾದ ಆನೇಕಲ್ ಸುತ್ತ ಮುತ್ತಲಿನ ಭೂಮಿಗೆ ಬಂಗಾರದ ಬೆಲೆ ಬಂದಿರುವುದರಿಂದ ಇಲ್ಲಿ ಇಂತಹ ಸುಫಾರಿ ಕೊಲೆಗಳು, ಭೂ ವಿವಾಧದ ಪ್ರಕರಣಗಳು ವರದಿಯಾಗುತ್ತಿವೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿಗೆ ಹೊಂದಿಕೊಂಡಿರುವ ಗಡಿಭಾಗದ ಊರಾದ ಆನೇಕಲ್ ತಾಲ್ಲೂಕಿನ ಸುತ್ತ ಮುತ್ತ ಹೊಸ ಲೇಔಟ್ ಬಡಾವಣೆಗಳು, ವಿಲ್ಲಾ ಗಳು, ಅಪಾರ್ಟ್ಮೆಂಟ್ಗಳು ತಲೆ ಎತ್ತುತ್ತಿರುವುದರಿಂದ ಬೇರೆ ರಾಜ್ಯಗಳಿಂದ ಹಣ ಹೂಡುವ ಬಿಲ್ಡರ್ ಗಳು, ರಾಜಕಾರಣಿಗಳು ಇಲ್ಲಿ ಬಂದು ಭೂಮಿ ಖರೀದಿಸುತ್ತಿರುವುದರಿಂದ, ಭೂಮಿಯ ಬೆಲೆ ಗಗನಕ್ಕೇರುತ್ತಿದೆ. ಇಲ್ಲಿ ತಲೆ ಎತ್ತಿರುವ ರಿಯಲ್ ಎಸ್ಟೇಟ್ ಮಾಫಿಯಾ ಕಾರಣದಿಂದ, ಬೆಂಗಳೂರಿನ ಹಲವಾರು ಭೂಗತ ಜಗತ್ತಿನ ರೌಡಿಗಳು ಇಲ್ಲಿ ಬಂದು ತಮ್ಮ ಇಲ್ಲೀಗಲ್ ದಂಧೆಗಳನ್ನು ಶುರುಹಚ್ಚಿಕೊಂಡಿದ್ದಾರೆ. ಅಕ್ರಮ ಬಡಾವಣೆಗಳಿಗೆ ಪಾಲುದಾರರಾಗುತ್ತಿರುವ ರೌಡಿಗಳು ಇಲ್ಲೀಗಲ್ ಕಲ್ಲು ಗಣಿಗಾರಿಕೆ ಕ್ರಷರ್ ಗಳು, ಫಿಲ್ಟರ್ ಮರಳು ಮಾಫಿಯಾ ಜಾಲದ ಜೊತೆ ಕೈಜೋಡಿಸಿ ದಂಧೆ ಮಾಡುತ್ತಿರುವ ಮಾಹಿತಿಗಳಿವೆ! ಬೆಂಗಳೂರು, ತಮಿಳು ನಾಡು, ಹೊಸೂರು,ಥಳಿ, ಕ್ರಿಷ್ಣ ಗಿರಿ, ಡೆಂಕಣಿಕೋಟೆಯ ಸುತ್ತ ಮುತ್ತಲಿನ ಕೆಲವು ಕುಖ್ಯಾತ ರೌಡಿಗಳು ಆನೇಕಲ್ ಅನ್ನು ತಮ್ಮ ಅಡಗುದಾಣಗಳಾಗಿ ಮಾಡಿಕೊಂಡು, ಕೊಲೆ ಮಾಡಿಸಿದ ನಂತರ ಇಲ್ಲಿನ ರೆಸಾರ್ಟ್ಗಳು, ಲಾಡ್ಜ್ ಗಳಲ್ಲಿ ಹುಡುಗರನ್ನಿಟ್ಟು, ಪೊಲೀಸರ ಕಣ್ ತಪ್ಪಿಸಿ ನಿರೀಕ್ಷಣಾ ಜಾಮೀನು ಪಡೆಯುತ್ತಾರಂತೇ! ತಮಿಳುನಾಡಿನಲ್ಲಿ ಕೊಲೆಮಾಡಿದರೇ ಆನೇಕಲ್ ಒಳಗೆ ನುಸುಳಿ ಪೊಲೀಸರಿಂದ ತಲೆಮರೆಸಿಕೊಳ್ಳುವ ರೌಡಿಗಳು, ಆನೇಕಲ್ ಸುತ್ತಮುತ್ತ ಕೊಲೆ ಮಾಡಿದರೆ ಮೂರು ಕಿಲೋಮೀಟರುಗಳ ಗಡಿ ದಾಟಿ ತಮಿಳುನಾಡಿನ ಹಳ್ಳಿಗಳಲ್ಲಿ ಬಚ್ಚಿಟ್ಟುಕೊಳ್ಳುವುದು ಇಲ್ಲಿ ಸರ್ವೇ ಸಾಮಾನ್ಯ ವಿಚಾರ!

### ರೌಡಿಸಂ ಶೋಕಿಗೆ ಬಿದ್ದ ಯುವಕರು

ಇತ್ತೀಚೆಗಂತೂ ಗಾಂಜಾ ನಶೆಯ ಚಟಕ್ಕೆ ಬಿದ್ದಿರುವ ಕೆಲವು ನಿರುದ್ಯೋಗಿ ಆನೇಕಲ್ ವ್ಯಾಪ್ತಿಯ ಮೀಸೆ ಚಿಗುರದ ಯುವಕರು ರೌಡಿಸಂ ಶೋಕಿಗೆ ಬಿದ್ದು ಕೊಲೆ, ಸುಲಿಗೆ, ದರೋಡೆ ಪ್ರಕರಣದಲ್ಲಿ ಸಿಕ್ಕು ಬೆಂಗಳೂರಿನ ಕೇಂದ್ರ ಕಾರಾಗೃಹ ಪರಪ್ಪನ ಅಗ್ರಹಾರದಲ್ಲಿ ಮುದ್ದೆ ಮುರಿಯುತ್ತಿದ್ದಾರೆ. ತಮಿಳು ನಾಡಿನ ಕಾಡುಗಳಿಂದ ಗಡಿಯ ಮೂಲಕ ಬೆಂಗಳೂರು ಪ್ರವೇಶಿಸುವ ಗಾಂಜಾಗೆ ಬೆಂಗಳೂರಿನಲ್ಲಿ ಬಾರಿ ಬೇಡಿಕೆ. ಆನೇಕಲ್ಲಿನಲ್ಲೂ ಹಲವಾರು ಗಾಂಜಾ ಪೆಡ್ಲರ್ ಗಳಿದ್ದಾರೆ. ಈ ಹಿಂದೆ ದೇವರಾಜ ಎಂಬ ಗಾಂಜಾ ಪೆಡ್ಲರ್ ಒಬ್ಬನ ಕೊಲೆಯಾಗಿ ಆತನ ಕೊಲೆಗೆ ಸುನಿಲ್– ವಿನೂತ್ ಎಂಬ ರೌಡಿಶೀಟರ್ ಗಳ ರಿವೇಂಜ್ ಕಿಲ್ಲಿಂಗ್ ಗಳೂ ಆಗೀ, ಆನೇಕಲ್ ಈಗ ಗಾಂಜಾ ಹುಡುಗರ ಅಂಡರ್ ವರ್ಲ್ಡ್ ತೆಕ್ಕೆಗೆ ಬಿದ್ದು ತನ್ನ ಚಾರಿತ್ರ್ಯವನ್ನು ಕಳೆದು ಕೊಳ್ಳುವ ಹಂತಕ್ಕೆ ಹೋಗುತ್ತಿದೆ. ಒಂದು ಕಾಲಕ್ಕೆ ಹೋರಾಟಗಾರ ತವರು ನೆಲವಾಗಿದ್ದ ಆನೇಕಲ್ ಮೀಸಲು ಕ್ಷೇತ್ರದಲ್ಲಿ ಬಿ. ಗೋಪಾಲ್ , ಜಿಗಣಿ ಶಂಕರ್, ಫಟಾಫಟ್ ನಾಗರಾಜ್ ರಂತಹ ಚಳವಳಿಗಾರರು, ದಲಿತ ಹೋರಾಟಗಾರರು ಹುಟ್ಟಿಕೊಂಡು ಯುವಕರ ಬದುಕಿಗೊಂದು ಭರವಸೆಯ ಬೆಳಕಿನ ಜ್ಯೋತಿ ಹೊತ್ತಿಸಿದ್ದರು. ಈಗಲೂ ವಕೀಲರಾದ ಆನಂದ್ ಚಕ್ರವರ್ತಿ ಮತ್ತು ಸಂಗಡಿಗರು ದಾರಿ ತಪ್ಪುತ್ತಿರುವ ಆನೇಕಲ್ ಯುವಕರನ್ನು ಸರಿದಾರಿಗೆ ತರುವ ಚಿಂತನ–ಮಂಥನ ಕಾರ್ಯಾಗಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೂ ಆನೇಕಲ್ ನ ಕೆಲವು ಪುಂಡರ, ಸಮಾಜ ಘಾತುಕ ಮನಸ್ಸಿನ ರೌಡಿ ಚಟುವಟಿಕೆಯ ವ್ಯಕ್ತಿಗಳಿಂದ ಕ್ರಿಮಿನಲ್‌ಗಳ ತಾಣವಾಗಿ, ಗಾಂಜಾ ವ್ಯಸನಿಗಳ ಅಡ್ಡೆಯಾಗಿ ಪರಿವರ್ತಿತವಾಗುತ್ತಿರುವ ಆನೇಕಲ್ ಕ್ಷೇತ್ರವನ್ನು ಪೊಲೀಸರು ಮತ್ತು ಸಾಮಾಜಿಕ ಕಳಕಳಿಯುಳ್ಳ ಸಂಘಟನೆ ಗಳಷ್ಟೇ ಸರಿದಾರಿಗೆ ತರಲು ಸಾಧ್ಯ. ಏಕೆಂದರೆ ಇತ್ತೀಚಿಗೆ ಆನೇಕಲ್ ನಲ್ಲಿ ರೌಡಿಗಳ ಗ್ಯಾಂಗ್ ವಾರ್ ನಂತಹ ಸಣ್ಣ ಪುಟ್ಟ ಹೊಡೆದಾಟಗಳೂ ವರದಿಯಾಗುತ್ತಿವೆ, ಈ ಹಿಂದೆ ಡ್ಯಾನ್ಸರ್ ಒಬ್ಬನ ಕೊಲೆಯ ವಿಷಯಕ್ಕೆ ಆನೇಕಲ್ ಹೊತ್ತಿ ಉರಿದಿತ್ತು. ತುಂಬಾ ಹಿಂದೆ ಹಳೆಯ ದ್ವೇಷಕ್ಕೆ, ಜಮೀನು ವಿವಾದಕ್ಕೆ ಜೋಡಿ ಕೊಲೆಗಳೂ ಆಗಿ ಜನ ಬೆಚ್ಚಿ ಬಿದ್ದಿದ್ದರು. ಆನೇಕಲ್ ಎಂ.ಎಲ್.ಎ. ಆಗಲು ಹೊರಟಿದ್ದ ಬಿಜೆಪಿ ಯ ಕಿತ್ತಗಾನಹಳ್ಳಿ ವಾಸು ಎಂಬಾತನ ಭೀಕರ ಹತ್ಯೆಯಾಗಿ, ಹೊಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಣದ ಮೆರವಣಿಗೆಯೇ ನಡೆದಿತ್ತು!



ರಾಜಶೇಖರ ರೆಡ್ಡಿ



ಆನೇಕಲ್ ಇನ್ಸ್‌ಪೆಕ್ಟರ್ ಮಹಾನಂದ



ಮೀಸೆ ಜಯರಾಮ್

### ರಾಜಕೀಯ ಹತ್ಯೆಗಳು

ರಾಜಕೀಯ ಹತ್ಯೆಗಳು, ಕೋಮು ದ್ವೇಷದ ಗಲಭೆ– ಕೊಲೆಗಳು, ಸಂಘಟನೆಯ ಮುಖಂಡರ ಸುಫಾರಿ ಕೊಲೆಗಳ ಜೊತೆಗೆ ಇತ್ತೀಚಿಗೆ ಈ ರಾಜಶೇಖರ ರೆಡ್ಡಿಯ ಸುಫಾರಿ ಕೊಲೆಯೂ ಸೇರಿಕೊಂಡು ಆನೇಕಲ್ ಚರಿತ್ರೆಗೆ ಮತ್ತೊಂದು ಕಳಂಕ ಮೆತ್ತಿಕೊಂಡಿದೆ. ಕೇಂದ್ರ ಸರ್ಕಾರದ ಮಂತ್ರಿ ಆನೇಕಲ್ ನಾರಾಯಣಸ್ವಾಮಿ ಮನೆ ಮುಂದೆಯೇ ನಡೆದಿದ್ದ ಆಂಧ್ರದ ಚಿತ್ತೂರು ಮೂಲದ ರಾಜಶೇಖರ್ ರೆಡ್ಡಿ ಬ್ರೂಟಲ್ ಮರ್ಡರ್ ನಿಂದ ಇಡೀ ಆನೇಕಲ್ ಬೆಚ್ಚಿ ಬಿದ್ದಿತ್ತು. ಮೊದಲಿಗೆ ಗುಂಡುಹಾರಿಸಿ ಕೊಲ್ಲಲಾಗಿದೆಯೆಂಬ ವದಂತಿ ಹಬ್ಬಿತ್ತು. ಹಲ್ಲೆ ಅಷ್ಟು ರಣ ಬೀಕರವಾಗಿತ್ತು. ಸುಫಾರಿ ಕಿಲ್ಲರ್ ಗಳು ರಾಜಶೇಖರ್ ರೆಡ್ಡಿಯ 3311 ನಂಬರಿನ ಸ್ವಿಫ್ಟ್ ಕಾರನ್ನು ಅಡ್ಡಗಟ್ಟಿ ಮಚ್ಚು ಲಾಂಗುಗಳಿಂದ ಕತ್ತರಿಸಿ ಕೊಂದು ಯಾವ ಸುಳಿವನ್ನೂ ಬಿಡದೆ ಪರಾರಿಯಾಗಿದ್ದರು. ಆಗ ಈ ನಿಗೂಢ ಕೊಲೆಯ ಬೆನ್ನು ಹತ್ತಿದ ಆನೇಕಲ್ ಡಿವೈಎಸ್ಪಿ ಮಲ್ಲೇಶ್ ಮತ್ತು ಆನೇಕಲ್ ಇನ್ಸ್ಪೆಕ್ಟರ್ ಮಹಾನಂದ್ ರವರ ತಂಡ ಎಸ್ಪಿ ವಂಶಿಕ್ರಷ್ಣರ ಮಾರ್ಗದರ್ಶನದಲ್ಲಿ ಹಗಲು ರಾತ್ರಿ ನಿದ್ದೆಗೆಟ್ಟು ತಮ್ಮ ಚಾಣಾಕ್ಷ ಪೊಲೀಸಿಂಗ್ ಮತ್ತು ಕರ್ತವ್ಯ ನಿಷ್ಠೆಯಿಂದ ಎಲ್ಲಾ ಕೊಲೆಗಾರರನ್ನು ಬಂಧಿಸಿ, ಭೂ ಮಾಫಿಯಾಕಾರಣಕ್ಕೆ ನಡೆದ ಸುಫಾರಿ ಕೊಲೆಯ ರಹಸ್ಯ ವನ್ನು ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕೊಲೆಗೆ ಜಮೀನು ವಿವಾದವೇ ಕಾರಣವೆಂಬುದು ಮೇಲ್ನೋಟಕ್ಕೆ ಗೋಚರಿಸುತ್ತಿದ್ದರೂ, ಇದೊಂದು ಭೂ ಮಾಫಿಯಾದ ಪ್ರಕರಣದಂತೆಯೇ ಒಳಗೆ ವಾಸನೆ ಬರುತ್ತಿದೆ. ಏಕೆಂದರೆ ಕೊಲೆಗೆ ಸುಫಾರಿ ನೀಡಿರುವ ಆನೇಕಲ್‌ನ ತಮ್ಮ ನಾಯಕನ ಹಳ್ಳಿಯ ಮೀಸೆ ಜಯರಾಂ ಜಮೀನುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಠಿಸುವುದರಲ್ಲಿ ನಿಸ್ಸೀಮ ಎಂಬುದು ಗೊತ್ತಾಗಿದೆ. ಇದೇ ತರಹ ಹಲವು ಭೂ ಮಾಫಿಯಾದ ಭೂಗಳ್ಳರಿಗೆ ಬಡವರ ಜಮೀನಿನ, ಸತ್ತುಹೋಗಿರುವವರ ಜಮೀನಿನ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಡುತ್ತಿದ್ದನೆಂಬ ಗುಮಾನಿ ಇದೆ. ಆ ದಿಕ್ಕಿನಲ್ಲಿಯೂ ತನಿಖೆ ನಡೆಸಬೇಕಿದೆ.

### ಜಮೀನುಗಳಿಗೆ ಬೇಲಿ ಸುತ್ತಿ ಗುಳುಂ

ಈ ಮೀಸೆ ಜಯರಾಂ ಹೀಗೆ ಎಷ್ಟು ಜನ ಅಮಾಯಕರ ಜಮೀನುಗಳಿಗೆ ಬೇಲಿ ಸುತ್ತಿ ಗುಳುಂ ಮಾಡಲು ಪ್ಲಾನ್ ಮಾಡಿ, ಯಾವ್ಯಾವ ಸರ್ವೇ ನಂಬರ್ ಗಳಿಗೆ ನಕಲಿ ದಾಖಲೆ ನಕಲಿ ಅಗ್ರಿಮೆಂಟ್ಗಳನ್ನು ಈ ಮೀಸೆ ಜಯರಾಂ ತಯಾರಿಸಿದ್ದಾನೆಂಬುದು ಬಯಲಿಗೆ ಬರಬೇಕು. ಈತನ ಈ ಕ್ರಿಮಿನಲ್ ಚಟುವಟಿಕೆಗಳಲ್ಲಿ ಯಾರು ಪಾಲುದಾರರು ಎಂಬುದು ಪತ್ತೆಯಾಗಬೇಕು. ಏಕೆಂದರೆ ಈಗ ಕೊಲೆಯಾಗಿರುವ ಆಂದ್ರ ಮೂಲದ ರಿಯಲ್ ಎಸ್ಟೇಟ್ ಬ್ರೋಕರ್ ರಾಜಶೇಖರ್ ರೆಡ್ಡಿ, ಸುಧಾಕರ್ ರೆಡ್ಡಿ ಎಂಬ ವ್ಯಕ್ತಿಯ ಜಮೀನುಗಳಿಗೆ ಕಾವಲುಗಾರನಾಗಿ ಕೆಲಸಮಾಡುತ್ತಿದ್ದ. ಮೃತ ಸುಧಾಕರ್ ರೆಡ್ಡಿ ಹೆಂಡತಿ ಪದ್ಮ ಮತ್ತು ಮೂವರು ಹೆಣ್ಣು ಮಕ್ಕಳ ಬೆನ್ನಿಗೆ ನಿಂತು ಅವರ ತಂದೆ ಸುಧಾಕರ್ ರೆಡ್ಡಿಯ ಅತ್ತಿಬೆಲೆ, ಮರಸೂರು, ಇಂಡ್ಲಬೆಲೆ ಬಳಿಯ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದ . ಇದೇ ಜಮೀನುಗಳಿಗಾಗಿ ಕೊಲೆಗೆ ಸುಫಾರಿ ನೀಡಿದ್ದ ಮೀಸೆ ಜಯರಾಂ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ತನಗೆ ಮಾರಾಟ ಮಾಡುವಂತೆ ಪದ್ಮ ಮತ್ತು ಮೂವರು ಹೆಣ್ಣು ಮಕ್ಕಳಿಗೆ ಹೆದರಿಸುತಿದ್ದನಂತೆ! ಇದಕ್ಕೆ ಅಡ್ಡಗಾಲಾಗಿದ್ದ ಆಂಧ್ರದ ರಾಜಶೇಖರ ರೆಡ್ಡಿಯನ್ನು ಮುಗಿಸಿದರೆ ಸುಧಾಕರ್ ರೆಡ್ಡಿಯ ಎಲ್ಲಾ ಜಮೀನುಗಳೂ ನಮಗೇ ಸಿಗಬಹುದೆಂಬ ದುರಾಸೆಯಿಂದ ಈ ಮೀಸೆ ಜಯರಾಂ ಮತ್ತು ಮಗ ಶಶಿಕುಮಾರ್ ಹಾಗೂ ಸುಫಾರಿ ಪರದೆಯ ಹಿಂದಿರುವ ಇನ್ನೂ ಹಲವು ಜನರು ಆರು ಜನ ಆನೇಕಲ್ ಹುಡುಗರಿಗೆ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳಿಗೆ ಸುಫಾರಿ ನೀಡಿ ಕೊಲೆ ಮಾಡಲು ಹೇಳಿದ್ದರಂತೆ! ಆನೇಕಲ್ ನಲ್ಲಿ ಕೊಲೆಮಾಡಿದರೇ ತಮ್ಮ ಮೇಲೆ ಅನುಮಾನ ಬರುತ್ತದೆಂದು ಕಾರಣದಿಂದ ಆನೇಕಲ್ ಹೊರತುಪಡಿಸಿ ಬೇರೆ ಯಾವುದಾದರೂ ಜಾಗದಲ್ಲಿ, ಸಾಧ್ಯವಾದರೇ ಬೆಂಗಳೂರು ಸಿಟಿಯಲ್ಲಿ ಅಟ್ಯಾಕ್ ಮಾಡಿ ಕೊಲೆ ಮಾಡುವಂತೆ ನಿರ್ದೇಶನ ನೀಡಿ ಸುಫಾರಿ ಒಪ್ಪಿಸಿದ್ದರಂತೆ! ನಾಲ್ಕು ಲಕ್ಷ ಅಡ್ವಾನ್ಸ್ ಹಣ ಪಡೆದಿದ್ದ ಪ್ರತಾಪ್, ಒಂಟೆ ಆನಂದ, ಸಂದೀಪ್,

# ಕರ್ನಾಟಕದ ಏಕೈಕ ಪ್ರಾಚೀನ ದೇವಾಲಯ ಕುಕನೂರು ನವಲಿಂಗೇಶ್ವರ



## ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಕುಕನೂರು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಪ್ರಾಚೀನ ಗ್ರಾಮಗಳಲ್ಲೊಂದು. ಈ ಗ್ರಾಮವು ರಾಷ್ಟ್ರಕೂಟ ಅರಸರ ಕಾಲದಿಂದಲೂ ಧಾರ್ಮಿಕ, ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕವಾಗಿ ಪ್ರಸಿದ್ಧಿಯನ್ನು ಪಡೆದ ಸ್ಥಳ. ದಾಖಲೆಗಳನ್ವಯ ಇದೊಂದು ಪ್ರಾಚೀನ ಪಟ್ಟಣವೇ ಆಗಿದ್ದಿತು. ಕ್ರಿ.ಶ. 11–12ನೆಯ ಶತಮಾನದ ಹೊತ್ತಿಗೇ ನಲವತ್ತೆಂಟು ಕೇರಿಗಳನ್ನು ಒಳಗೊಂಡ ಪಟ್ಟಣವಾಗಿದ್ದಿತು. ಅಲ್ಲದೆ ಕುಕನೂರು ಒಂದು ಸಾವಿರ ಮಹಾಜನರನ್ನು ಒಳಗೊಂಡಿದ್ದ ಮಹಾಗ್ರಹಾರವೂ, ಪ್ರಾಚೀನ ಕಾಲದ ವಿದ್ಯಾಕೇಂದ್ರವೂ ಆಗಿದ್ದುದು ಶಾಸನಗಳಿಂದ ತಿಳಿಯುವುದು. ಇಲ್ಲಿರುವ ದೇವಾಲಯಗಳೋ ಅನೇಕ. ಈ ದೇವಾಲಯಗಳ ಪ್ರಾಚೀನತೆ ವಾಸ್ತುಶಿಲ್ಪದ ಹಿನ್ನೆಲೆಯಲ್ಲಿ ರಾಷ್ಟ್ರಕೂಟರ ಕಾಲಕ್ಕೆ ಹೋಗುತ್ತದೆ. ಚಾರಿತ್ರಿಕವಲ್ಲದೆ ಇಲ್ಲಿ ಇತ್ತೀಚೆಗೆ ಮನೆಗಳ ಅಡಿಪಾಯ ತೋಡುವಾಗ ಕಂಡುಬಂದ ಇಟ್ಟಿಗೆ, ಮಡಕೆ ಮೊದಲಾದ ಅವಶೇಷಗಳು ಮೌರ್ಯ–ಶಾತವಾಹನರ ಕಾಲದಷ್ಟೇ ಹಿಂದಕ್ಕೆ ಹೋಗುತ್ತವೆ. ಮೌರ್ಯ–ಶಾತವಾಹನ ಕಾಲವೆಂದರೆ ಅದು ಹೆಚ್ಚಾಗಿ ವ್ಯಾಪಾರ–ವಹಿವಾಟಿನ ಕಾಲ. ಅಲ್ಲದೆ ನಾಣ್ಯಗಳ ಚಲಾವಣೆ, ವ್ಯಾಪಾರಿ ಮಾರ್ಗಗಳು ನಿರ್ಮಾಣಗೊಂಡ ಅವಧಿಯೆನ್ನಬಹುದು. ಉತ್ತರ–ದಕ್ಷಿಣ ಸಂಸ್ಕೃತಿಗಳು ಮೇಳೈಸಿಕೊಂಡ ಕಾಲವೂ ಆಗಿದೆ.

ಈ ಗ್ರಾಮದ ದೇವಾಲಯಗಳಲ್ಲಿ ಕಲ್ಲೇಶ್ವರ ಮತ್ತು ನವಲಿಂಗೇಶ್ವರ ದೇವಾಲಯಗಳು ಪ್ರಾಚೀನವಾಗಿವೆ. ಇವು ರಾಷ್ಟ್ರಕೂಟ ಕಾಲದ ನಿರ್ಮಿತಿಗಳು. ಇವುಗಳಿಗೆ ಬಳಸಿದ ಶಿಲೆ ಕೆಂಪು ಮರಳುಗಲ್ಲು. ಕಲ್ಲೇಶ್ವರ ದೇವಾಲಯದ ಬಗೆಗೆ ಹೇಳುವುದಾದರೆ ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನು ಒಳಗೊಂಡ ಸುಂದರ ದೇಗುಲ. ಶಾಸನದಲ್ಲಿ ಇದನ್ನು ಮೂಲಸ್ಥಾನದ ದೇವರು ಎಂದೇ ಕರೆದಿದೆ. ಇದರಲ್ಲಿ ಇಪ್ಪತ್ತು ವರ್ಷಗಳ ಹಿಂದೆ ಎರಡು ಸುಂದರ ಸೂಕ್ಷ್ಮ ಕೆತ್ತನೆಯ ಎರಡು ದ್ವಾರಪಾಲಕ ಶಿಲ್ಪಗಳಿದ್ದವು. ಆದರೆ ಇಂದು ಎಡಬದಿಯ ದ್ವಾರಪಾಲಕ ಶಿಲ್ಪ ನಿಧಿಗಳ್ಳರ ದುರಾಸೆಯಿಂದ ಭಗ್ನಗೊಂಡು ಪುಡಿಪುಡಿಯಾಗಿ ಬಿದ್ದಿದೆ. ಈ ದೇವಾಲಯಕ್ಕೆ ಕಲ್ಯಾಣ ಚಾಲುಕ್ಯರಲ್ಲದೆ ಕಲಚೂರಿಗಳು ಮತ್ತು ದೇವಗಿರಿ ಯಾದವ ಅರಸರು ದಾನದತ್ತಿಗಳನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಇಲ್ಲಿನ ಶಾಸನದಲ್ಲಿ ಕುಕನೂರು ಧಾರ್ಮಿಕ ಕ್ಷೇತ್ರ ಮಾತ್ರವಲ್ಲದೆ ಆಡಳಿತ ಕೇಂದ್ರವೂ ಆಗಿತ್ತು. ಅದು ಕುಕನೂರು–30ರ ಕೇಂದ್ರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಕ್ರಿ.ಶ.1178ರ ಶಾಸನದಲ್ಲಿ ಕುಕನೂರಿನ ಖ್ಯಾತಿಯನ್ನು ಬಣ್ಣಿಸಿದೆ. ಅದರಲ್ಲಿ ಹೇಳುವಂತೆ ಭಾರತದಲ್ಲಿ ಕುಂತಳ ದೇಶವಿತ್ತು. ದೇಶಗಳಲ್ಲಿ ಕುಂತಳ ದೇಶವೇ ಮಿಗಿಲು. ಇದು ಕಾಂಚೀ ದೇಶಕ್ಕಿಂತ ಚೆಲುವಿನಿಂದ ಕೂಡಿದೆ. ಈ ಕುಂತಳ ದೇಶಕ್ಕೆ ತಿಲಕಪ್ರಾಯವಾಗಿ ಬೆಳ್ವೊಲವು ವಿರಾಜಿಸುತ್ತಿತ್ತು. ಈ ಬೆಳ್ವೊಲದಲ್ಲಿ ಕುಕ್ಕನೂರು ಶೋಭಿಸುತ್ತಿತ್ತು. ಇದು ಬ್ರಹ್ಮಲೋಕಕ್ಕೆ ದೊರೆಯಾಗಿತ್ತೆಂದೂ ವರ್ಣಿಸಲಾಗಿದೆ.

ಕುಕನೂರಿನ ಪ್ರಸಿದ್ಧ, ಪ್ರಾಚೀನ ಮತ್ತು ಅತ್ಯಂತ ಅಪರೂಪದ ದೇವಾಲಯವೆಂದರೆ ಅದು ನವಲಿಂಗೇಶ್ವರ ದೇಗುಲವಾಗಿದೆ. ಅದರ ಹೆಸರೇ ಹೇಳುವಂತೆ ಒಂಭತ್ತು ಗರ್ಭಗೃಹಗಳನ್ನು ಹೊಂದಿದ ಪ್ರಾಚೀನ ದೇವಾಲಯ. ಇದು ಗ್ರಾಮದ ಮಧ್ಯದಲ್ಲಿರುವ ದೇವಾಲಯ. ಆದರೆ ಈ ದೇವಾಲಯ ಇಂದು ಶಿಥಿಲಗೊಂಡು ಮೂಲೆಗುಂಪಾಗಿರುವುದು ಶೋಚನೀಯ ಸಂಗತಿ. ಒಂಭತ್ತು ಗರ್ಭಗೃಹಗಳು, ನಾಲ್ಕು ಸಭಾಮಂಟಪಗಳನ್ನು ಒಳಗೊಂಡ ವಿಸ್ತಾರವಾದ ದೇವಾಲಯವಿದು. ಎಲ್ಲ ಗರ್ಭಗೃಹಗಳಿಗೂ ಅಂತರಾಳಗಳಿವೆ. ಹಾಗೆಯೇ ಮುಖ್ಯವಾಗಿ ಮೂರು ನಂದಿಯ ಶಿಲ್ಪಗಳನ್ನೂ ಶಿವಲಿಂಗಗಳಿಗೆ ಎದುರಾಗಿ ಸ್ಥಾಪಿಸಿದ್ದಾರೆ. ಮುಖ್ಯ ಗರ್ಭಗೃಹದ ಎಡಬದಿಯಲ್ಲಿ ಸಾಲಾಗಿ ಮೂರು ಗರ್ಭಗೃಹಗಳು, ಬಲಬದಿಯ ಸಾಲಿನಲ್ಲಿ ಎರಡು, ಎದುರಿಗೆ ಒಂದು ಮತ್ತು ಬಲಭಾಗದಲ್ಲಿ ಎರಡು–ಹೀಗೆ ಒಟ್ಟು ಒಂಭತ್ತು ಗರ್ಭಗೃಹಗಳನ್ನು ಒಂದೇ ತಳವಿನ್ಯಾಸದಲ್ಲಿ ನಿರ್ಮಿಸಿದ ಅಂದಿನವರ ಪ್ರೌಢಿಮೆ ಅಸದಳವಾದದ್ದು. ಶಾಸನದಲ್ಲಿ ಈ ದೇವಾಲಯವನ್ನು ನವಲಿಂಗಾಧೀಶ್ವರ ಸೋಮೇಶ್ವರ, ನವಲಿಂಗ ಮಹಿಮಾಲಿಂಗಿತಮಪ್ಪ ಸೋಮೇಶ್ವರ ದೇವರೆಂದು ಕರೆಯಲಾಗಿದೆ. ಒಂಭತ್ತು ಗರ್ಭಗೃಹಗಳಲ್ಲಿ ಕೆಲವು ಶಿಥಿಲಗೊಳ್ಳುತ್ತಿದ್ದು, ದೇವಾಲಯದ ಜೀರ್ಣೋದ್ಧಾರ ಕಾರ್ಯ ಅತ್ಯಂತ ಜರೂರಾಗಿ ಆಗಬೇಕಿದೆ. ದ್ರಾವಿಡ ಶೈಲಿಯ ಈ ಶಿಖರಗಳು ಸಾವಿರಾರು ವರ್ಷಗಳ ನಂತರವೂ ಉಳಿದಿರುವುದು, ಅದಕ್ಕೆ ಬಳಸಿರುವ ಕಲ್ಲಿನಿಂದ ಎಂಬುದಂತೂ ಸ್ಪಷ್ಟ. ಒಂಭತ್ತು ಗರ್ಭಗೃಹಗಳಿರುವ ಈ ದೇವಾಲಯವನ್ನು ಶಾಸನಗಳು ನವಲಿಂಗೇಶ್ವರನೆಂದು ಕರೆದರೆ, ಸ್ಥಳೀಯರ ಬಾಯಲ್ಲಿ ಇಂದು ಪ್ರಚಲಿತಗೊಂಡಿರುವುದು ಒಂಭತ್ತೇಶ್ವರ ದೇವಾಲಯವೆಂದೇ. ಒಂಭತ್ತು ಈಶ್ವರ ಲಿಂಗಗಳಿರುವುದನ್ನು ಇದು ನೆನಪಿಸುತ್ತದೆ. ಕಲ್ಯಾಣ ಚಾಲುಕ್ಯ ಮತ್ತು ಕಲ್ಯಾಣ ಕಲಚುರಿಗಳ ಕಾಲಕ್ಕೆ ದಾನದತ್ತಿಗಳನ್ನು ನೀಡಿದ ಅನೇಕ ಶಾಸನಗಳು ಇಲ್ಲಿವೆ. ಈ ದೇವಾಲಯ ರಾಷ್ಟ್ರಕೂಟರ ಕಾಲದ ನಿರ್ಮಿತಿಯಾದರೂ ನಂತರ ಕಾಲದಲ್ಲಿ ಅನೇಕ ಸೇರ್ಪಡೆಗಳಾಗಿವೆ. ಇದಕ್ಕೆ ಕ್ರಿ.ಶ. 1005ರಲ್ಲಿ ಇರಿವಬೆಡಂಗ ಸತ್ಯಾಶ್ರಯನ ಕಾಲದಲ್ಲಿ ಈಶ್ವರಸೆಟ್ಟಿಯು ಇಲ್ಲಿನ ಎರಡು ದೇಗುಲಗಳಿಗೆ ಕಳಸಗಳನ್ನು ಇಟ್ಟು ಮುಖಸಾಲೆಯನ್ನು ಮಾಡಿಸಿದ್ದನು. ಹಾಗೆಯೇ ಜಗದೇಕಮಲ್ಲನು ಸಭಾಮಂಟಪವೊಂದನ್ನು ನಿರ್ಮಿಸುತ್ತಾನೆ. ಅಂದರೆ ಕಾಲಕಾಲಕ್ಕೆ ನವಲಿಂಗೇಶ್ವರ ದೇವಾಲಯವು ವಿಸ್ತಾರಗೊಳ್ಳುತ್ತಾ ಬಂದುದನ್ನು ಕಾಣುತ್ತೇವೆ. ಈ ದೇಗುಲದ ಮಧ್ಯಭಾಗದಲ್ಲಿ ಉತ್ತರಾಭಿಮುಖವಾಗಿರುವ ಗರ್ಭಗೃಹದ ಮುಂಬದಿಯ ಅಂತರಾಳದಲ್ಲಿ ಮಕರತೋರಣವಿದೆ. ಇದು ರಾಷ್ಟ್ರಕೂಟರ ಕಾಲದ ಅತ್ಯಂತ ಸುಂದರ ಕೆತ್ತನೆಯಾಗಿದೆ. ಇದು ಇಂದು ಭಗ್ನಾವಸ್ಥೆಯಲ್ಲಿರುವುದು ದುರದೃಷ್ಟಕರ ಸಂಗತಿ. ಕ್ರಿ.ಶ. 1178ರ ಶಾಸನದಲ್ಲಿ ನವಲಿಂಗೇಶ್ವರ ದೇವಾಲಯದ ಜೊತೆಗೆ ಶಕ್ತಿದೇವತೆಗಳಾದ ಅಂಬಿಕೆ, ಪುರಾಣಿದೇವಿ, ಚಾಮುಂಡಿ, ಮಹಾಮಾಯೆ, ತಡಗಾದಂಬಿಕೆ, ವಸಂತ, ಕಾಲ್ಯಂಬೆ, ಶಾಂತಿ ಮತ್ತು ಗುಪ್ತ ಚಾಮುಂಡಿದೇವಿಯರು ಇಲ್ಲಿ ನೆಲೆಗೊಂಡಿದ್ದಾರೆಂದು ಬಣ್ಣಿಸಿದೆ. ಅವರಲ್ಲಿ ಹಿರಿಯಳು ಜೇಷ್ಠಾದೇವಿಯೆಂದೂ ಹೇಳಲಾಗಿದೆ. ಈ ಜೇಷ್ಠಾದೇವಿಯೇ ಇಂದಿನ ಮಹಾಮಾಯೆ ದೇಗುಲ. ಕಲಚೂರಿ ಸಂಕಮದೇವನ ಮಹಾಪ್ರಧಾನ ಧಂನುಗಿ ದಂಡನಾಯಕ ಮೊದಲಾದವರು ಕಾಳಿಕಾಜೇಷ್ಠೆಗೆ, ಜಗದ್ವರಿಷ್ಠೆಗೆ ಮಹಾಪೂಜೆಯನ್ನು ಮಾಡಿ ದಾನದತ್ತಿಗಳನ್ನು ನೀಡಿದ್ದನು. ಈ ದೇವಾಲಯದ ಎಡಭಾಗದಲ್ಲಿ ಬಿಂಧುಮಾಧವ, ಮುಂಬದಿಯಲ್ಲಿ ಮುಂದಿನ ಮಲ್ಲಿಕಾರ್ಜುನ, ಹಿಂದಿನ ಮಲ್ಲಿಕಾರ್ಜುನ ದೇಗುಲಗಳಿವೆ. ಈ ಎಲ್ಲ ದೇವಾಲಯಗಳನ್ನೂ ಒಳಗೊಂಡಂತೆ ಪ್ರಾಕಾರ ಗೋಡೆ ಮತ್ತು ಮಹಾದ್ವಾರಗಳನ್ನು ವಿಜಯನಗರ ಕಾಲದ ಹೊತ್ತಿಗೆ ನಿರ್ಮಿಸಿದ್ದುದು ಅಲ್ಲಿನ ವಾಸ್ತುಲಕ್ಷಣಗಳಿಂದ ಗುರುತಿಸಬಹುದು. ಕುಕನೂರಿನ ಮಹಾ ಅಗ್ರಹಾರದಲ್ಲಿ ತರ್ಕ, ವ್ಯಾಕರಣ, ಪುರಾಣ, ಕಾವ್ಯ, ನಾಟಕ, ಭರತ ವಾತ್ಸಾಯನಾದಿ ವಿದ್ಯಾಸಾರಾಸಾರ ವಿಚಾರ ಚತುರಾನನರ್ ಇದ್ದರು ಎಂದು ತಾಮ್ರಶಾಸನವೊಂದು ಹೇಳಿದೆ. ಇಂತಹ ಪ್ರಸಿದ್ಧ ಅಗ್ರಹಾರವು ಎರಡು ಬಾರಿ ನಷ್ಟವಾಗಿ ಹೋಗಿತ್ತೆಂದು ತಿಳಿಯುತ್ತದೆ. ಕ್ರಿ.ಶ. 1379ರಲ್ಲಿ ವಿಜಯನಗರ ಅರಸ ಎರಡನೇ ಹರಿಹರರಾಯನು ಕುಕನೂರನ್ನು ಜೀರ್ಣೋದ್ಧಾರ ಮಾಡಿದನೆಂದೂ, ಹಾಗೆಯೇ ಕ್ರಿ.ಶ. 1561ರಲ್ಲಿ ಮತ್ತೊಮ್ಮೆ ಕುಕನೂರಿನ ಮಹಾಮಾಯೆ ದೇವಾಲಯದ ಮಹಾದ್ವಾರದ ಬಾಗಿಲನ್ನು ಸುಟ್ಟುಹಾಕಲಾಗಿತ್ತೆಂದೂ, ಅದನ್ನು ದೇಸಾಯಿಗೌಡನು ಜೀರ್ಣೋದ್ಧಾರ ಮಾಡಿಸಿದನೆಂಬ ಸಂಗತಿಯೂ ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಇದರಿಂದ ಧಾರ್ಮಿಕವಾಗಿ ಕುಕನೂರು ಎಷ್ಟೊಂದು ಮಹತ್ವದ ಸ್ಥಳವಾಗಿತ್ತೆಂಬುದನ್ನು ಗಮನಿಸಬಹುದಾಗಿದೆ.

---

ಆಟೋ ಸೀನಾ, ಕಾರ್ತಿಕ್, ಗಣೇಶ್ ಎಂಬುವರು ಆಂಧ್ರ ಮೂಲದ ಚಿತ್ತೂರಿನವನಾದ ಬೆಂಗಳೂರಿನ ಬಿ.ಟಿ.ಎಂ. ಲೇಔಟ್ ನ ಸುಧಾಕರ್ ರೆಡ್ಡಿಯ ಮನೆಯಲ್ಲಿಯೇ ವಾಸವಿದ್ದ ರಾಜಶೇಖರ ರೆಡ್ಡಿಯನ್ನು ದೇವನಹಳ್ಳಿ ಏರ್ ಪೋರ್ಟ್ ಬಳಿ ಹಿಂಬಾಲಿಸಿ ಕೊಲ್ಲಲು ಆಗದೆ ವಾಪಸ್ಸಾಗಿದ್ದಾರೆ. ಚಿಕ್ಕ ಬಳ್ಳಾಪುರದಲ್ಲೂ ಒಮ್ಮೆ ಟ್ರೈ ಮಾಡಿ ಸುಮ್ಮನಾಗಿದ್ದಾರೆ. ಮತ್ತೊಮ್ಮೆ ಬೆಂಗಳೂರಿನ ಬಿಟಿಎಂ ಲೇಔಟ್ ನಲ್ಲಿ ಕೊಲ್ಲುವ ಸಂಚು ರೂಪಿಸಿ ಸಾಧ್ಯವಾಗದೇ ಕೈ ಚೆಲ್ಲಿದ್ದಾರೆ. ಕೊನೆಗೆ ಆಕಸ್ಮಿಕವಾಗಿ ಆನೇಕಲ್ ನಲ್ಲಿಯೇ ಕೇಂದ್ರ ಮಂತ್ರಿ ನಾರಾಯಣ ಸ್ವಾಮಿ ಮನೆ ಮುಂದೆಯೇ ಕಾರಿನಲ್ಲಿ ಹೊರಟಿದ್ದ ರಾಜಶೇಖರ್ ರೆಡ್ಡಿಯನ್ನು ಅಡ್ಡಹಾಕಿದ ದುಷ್ಕರ್ಮಿ ಸುಫಾರಿ ಕೊಲೆಗಡುಕರ ತಂಡ ಹತ್ಯೆ ಮಾಡಿ ಪರಾರಿಯಾಗಿತ್ತು. ಯಾವ ಸುಳಿವೂ ಬಿಡದೇ ವಾರಗಟ್ಟಲೆ ತಮಿಳುನಾಡಿನ ಗಡಿದಾಟಿ ಹೋಗಿ ತಲೆಮರೆಸಿಕೊಂಡಿದ್ದ ಕೊಲೆಪಾತಕರನ್ನು ಹಿಡಿಯಲು ಆನೇಕಲ್ ಇನ್ಸ್ಪೆಕ್ಟರ್ ಮಹಾನಂದ್ ಬನ್ನೇರುಘಟ್ಟ ಠಾಣೆಯ ಸಬ್ ಇನ್ಸ್ಪೆಕ್ಟರ್ ಅಂಜನ್ ಕುಮಾರ್, ಸಬ್ ಇನ್ಸ್ಪೆಕ್ಟರ್ ಚೇತನ್ ಕುಮಾರ್ ಮತ್ತು ಮಹೇಶ್, ನಾಗರಾಜ್, ಶಂಕರ್, ವಿನಯ್, ಹನುಮಂತರಾಜು, ಸತೀಶ್, ಕೃಷ್ಣ ಮೂರ್ತಿ ಮುಂತಾದ ಎಲ್ಲಾ ಠಾಣೆಗಳ ಟಫ್ ಪೊಲೀಸ್ ತಂಡ ಕಟ್ಟಿಕೊಂಡು ಕೊರೋನಾ ಮೂರನೆ ಅಲೆಯ ಜ್ವರವಿದ್ದರೂ ಲೆಕ್ಕಿಸದೇ ನಾನಾ ಕಡೆ ಹಗಲು ರಾತ್ರಿ ನಿದ್ದೆಗೆಟ್ಟು ತಲೆಕೆಡಿಸಿಕೊಂಡು ಕಾರ್ಯಾಚರಣೆ ನಡೆಸಿ ಸುಫಾರಿ ಕೊಲೆಗಡುಕರ ತಂಡವನ್ನು ಬಂಧಿಸಿ ಆನೇಕಲ್ ಜನರಲ್ಲಿದ್ದ ಆತಂಕವನ್ನು ಸ್ವಲ್ಪ ದೂರ ಮಾಡಿದ್ದಾರೆ. ಆದರೂ ಈ ಆನೇಕಲ್ ವ್ಯಾಪ್ತಿಯಲ್ಲಿ ಮೀಸೆ ಮೂಡದ ಯುವಕರು ಹೀಗೆ ಮಚ್ಚುಹಿಡಿದು ಹಣಕ್ಕಾಗಿ ಸುಫಾರಿ ಕೋಲೆಗಳಿಗೆ, ಹಫ್ತಾ ವಸೂಲಿಗೆ, ಕಿಡ್ನಾಪ್ ರಿವೇಂಜ್ ಕಿಲ್ಲಿಂಗ್ ಗೆ, ಕಂಡಕಂಡವರ ಭೂಮಿಗೆ ಬೇಲಿ ಸುತ್ತುವುದಕ್ಕೆ ಇಳಿದಿರುವುದು ಕಾನೂನು ಪಾಲನೆ ಮಾಡಬೇಕಾದ ಪೊಲೀಸರಲ್ಲೇ ಆತಂಕ ಹುಟ್ಟಿಸಿದೆ!






ಸುಫಾರಿ ಸಸ್ಪೆನ್ಸ್ ಮರ್ಡರ್ ಮಿಸ್ಟರಿಗೆ ಆನೇಕಲ್ಲಿನಲ್ಲಿ ಅಂತಹ ಕರಾಳವಾದ ಖತರ್ನಾಕ್ ಇತಿಹಾಸವಿದೆ! ಬೆಂಗಳೂರಿನ ಜೈಲಿನಲ್ಲೇ ಕುಳಿತು ಇಲ್ಲಿ ಇಸ್ಪೀಟ್ ರೈಡ್, ಹಫ್ತಾ ವಸೂಲಿ, ಕಿಡ್ನಾಪ್, ನಡೆಸುತ್ತಾ ಆನೇಕಲ್ ಜನರ ನಿದ್ರೆಗೆಡಿಸಿದ್ದ ರೌಡಿ ಬೊಮ್ಮಂಡಳ್ಳಿ ಪ್ರಸನ್ನ ಕೊಲೆಯಾದ ನಂತರ ಸ್ವಲ್ಪ ದಿನ ತಣ್ಣಗಿದ್ದ ಆನೇಕಲ್ ಈಗ ಬೆಂಗಳೂರಿನ ಭೂಗತ ಜಗತ್ತಿನ ರೌಡಿಗಳ ನಂಟಿನೊಂದಿಗೆ ಮತ್ತೆ ಗಾಂಜಾ ಮನು ಅಲಿಯಾಸ್ ಮನೋಜ್ ಕುಮಾರ್ ಎಂಬ ಹೊಸ ರೌಡಿಯ ಹೆಸರಲ್ಲಿ ಚಿಗಿತುಕೊಂಡಿದೆ. ಇಲ್ಲಿನ ಕೆಲವು ರಾಜಕಾರಣಿಗಳು ಕೂಡ ಯುವಕರಿಗೆ ಸರಿಯಾದ ಉದ್ಯೋಗ ಒದಗಿಸುವ ಯಾವುದೇ ಪ್ರಾಜೆಕ್ಟ್–ಫ್ಯಾಕ್ಟರಿ ಮಾಡದೇ ತಮ್ಮ ಚುನಾವಣಾ ಪ್ರಚಾರದ ಅಖಾಡಕ್ಕೆ, ಲಿಟಿಗೇಷನ್ ಜಮೀನುಗಳಿಗೆ ಬೇಲಿ ಸುತ್ತಲು ಬಳಸಿಕೊಂಡು ಫೀಲ್ಡ್ ನ ರುಚಿ ಹತ್ತಿಸಿದ್ದಾರೆ.

## ಬಡವರ ಮಕ್ಕಳು ಬೀದಿ ಪಾಲು

ಇಷ್ಟೆಲ್ಲಾ ಅಕ್ರಮ ಚಟುವಟಿಕೆಗಳಿಗೆ ಗೂಡಾಗುತ್ತಿರುವ ಗಾಂಜಾ ಸಪ್ಲೈ ನಾಡಾಗುತ್ತಿರುವ ಆನೇಕಲ್ ಅನ್ನು ಉದ್ದಾರ ಮಾಡಲು ಇಲ್ಲಿನ ರಾಜಕಾರಣಿಗಳು ಪ್ರಯತ್ನಿಸಬಹುದಿತ್ತು. ಇಂದು ಹಾದಿ ತಪ್ಪಿ ಉದ್ಯೋಗವಿಲ್ಲದೆ, ನಿರುದ್ಯೋಗಿಗಳಾಗಿ ರೌಡಿ ಚಟುವಟಿಕೆಯಲ್ಲಿ ಮುಳುಗಿರುವ ಆರ್ಥಿಕವಾಗಿ ಹಿಂದುಳಿದ ಬಡವರ ಮಕ್ಕಳಿಗಾಗಿ ಇಲ್ಲಿನ ರಾಜಕಾರಣಿಗಳು ಕೆಲಸ ಒದಗಿಸುವ ವೃತ್ತಿಪರ ಕೋರ್ಸ್‌ಗಳ ಕಾಲೇಜುಗಳನ್ನು ತರಬಹುದಿತ್ತು. ತಂದಿಲ್ಲ. ಹೊಟ್ಟೆಗೆ ಊಟಹಾಕುವ ಶಿಕ್ಷಣ ವ್ಯವಸ್ಥೆ ಇಲ್ಲಿಲ್ಲ. ಪುಢಾರಿಗಳ ಹಿಂದೆ ಅಲೆದು ಲೈಫು ಹಾಳುಮಾಡಿಕೊಳ್ಳುತ್ತಿರುವ, ಸಾರ್ಟ್ ಕಟ್ ನಲ್ಲಿ ಸೆಟ್ಲ್ ಆಗಲು ರೌಡಿಸಂನಲ್ಲಿ ಪರಿಹಾರ ಹುಡುಕುತ್ತಿರುವ ಯುವಕರನ್ನು ನೋಡಿದರೆ ಅಯ್ಯೋ ಪಾಪ ಅನಿಸುತ್ತೆ. ಬೆಲೆಗಗನಕ್ಕೇರುತ್ತಿವೆ. ಜನರ ಲೈಫ್ ಸ್ಟೈಲ್ ಬದಲಾಗಿದೆ. ದಿನವೊಂದಕ್ಕೆ ಒಬ್ಬ ಯುವಕನಿಗೆ 200ರೂಪಾಯಿಯಾದರೂ ಖರ್ಚಿಗೆ ಬೇಕೆಂಬಂತಾಗಿದೆ. ಇಲ್ಲಿ ನಾಲ್ಕು ಇಂಡಸ್ಟ್ರಿಯಲ್ ಏರಿಯಾಗಳಿದ್ದರೂ ಸ್ಥಳೀಯ ಕನ್ನಡಿಗರಿಗೆ ಉದ್ಯೋಗ ನೀಡುತ್ತಿಲ್ಲ . ಜಿಗಣಿ ,ಅತ್ತಿಬೆಲೆ, ಎಲೆಕ್ಟ್ರಾನಿಕ್ ಸಿಟಿ, ಭೂಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾದ ಯಾವುದೇ ಕಾರ್ಖಾನೆಗೆ ಎಡತಾಕಿದರೂ ಆನೇಕಲ್ ಹುಡುಗರಿಗೆ ನೋ ಜಾಬ್ ! ಕಾರಣವನ್ನ ಸ್ಥಳೀಯ ಕನ್ನಡ ಸಂಘಟನೆ ಮುಖಂಡರನ್ನೇ ಕೇಳಬೇಕು. ಊರಿಗೊಬ್ಬ ರಾಜ್ಯಾಧ್ಯಕ್ಷ, ಚಳುವಳಿಗಳ ತವರು ಅನ್ನಿಸಿಕೊಂಡ ಆನೇಕಲ್ಲಿನ ಯುವಕರು ಉದ್ಯೋಗವಿಲ್ಲದೆ ಬೀದಿಪಾಲಾಗಿದ್ದಾರೆ. ಅಲಯನ್ಸ್ ಕಾಲೇಜು ಸುತ್ತಲೂ ನಡೆಯು ಗಾಂಜಾ ವ್ಯಾಪಾರಕ್ಕೆ ಕುಮ್ಮಕ್ಕು ಕೊಡುತ್ತಿದ್ದ ಈಗ ಬೇರೆ ಠಾಣೆಗೆ ವರ್ಗಾ ಆಗಿರುವ ಪೊಲೀಸ್ ಒಬ್ಬ ಆನೇಕಲ್ ನ ಹಲವು ಯುವಕರು ಅಡ್ಡದಾರಿ ಹಿಡಿಯಲು ಕಾರಣವೆಂಬ ಮಾಹಿತಿ ಇದೆ. ಇಂತೆಲ್ಲ ಕಾರಣಗಳಿಂದ ಅಂಡರ್ ವರ್ಲ್ಡ್ ಹಾದಿಹಿಡಿದಿರುವ ಹಲವಾರು ಯುವಕರ ಗುಂಪುಗಳನ್ನು ರಿಯಲ್ ಎಸ್ಟೇಟ್ ಕಾಸು, ಗಾಂಜಾವ್ಯಾಪಾರ , ಇಸ್ಪೀಟ್ ಆಟ, ಕಾಂಪೌಂಡ್ ಹಾಕುವ ಕಾಯಕ ಅವರನ್ನು ಕೈಬೀಸಿ ಕರೆದು ಹಾದಿತಪ್ಪಿಸಿವೆ. ಇಲ್ಲಿ ಈಗ ಎದ್ದು ನಿಂತಿರುವ ಅಪರಾಧ ಜಗತ್ತನ್ನು ತಡೆಯುವ ಉಮೇದಿ ಯಾವ ಪೊಲೀಸರಿಗೂ ಉಳಿದಿಲ್ಲ. ಏಕೆಂದರೆ ಹೆಸರಿಗೇ ಔಟ್ ಸ್ಕರ್ಟ್ ಗಳಾದರೂ ಒಂದೊಂದು ಠಾಣೆಯ ಇನ್ಸ್ಪೆಕ್ಟರ್ ಪಟ್ಟವೂ 30ರಿಂದ 40ಲಕ್ಷಕ್ಕೆ ಹರಾಜಿಗಿದೆಯೆಂಬ ಗಾಳಿಮಾತಿದೆ. ಪಾಪ ಪ್ರಾಮಾಣಿಕ ಪೊಲೀಸಿಂಗ್ ಅನ್ನು ನಾವು ಎಲ್ಲಿಂದ ನಿರೀಕ್ಷಿಸುವುದು. ಒಂದು ವರ್ಷದಲ್ಲಿ ಸಮಾಜವನ್ನು ಶುದ್ಧೀಕರಿಸುತ್ತಾರೋ.. 'ಯತಾರಾಜತಥಾಪ್ರಜಾ' ಅನ್ನೋ ರೀತಿ ರಾಜಕಾರಣಿಗಳ ಕೈಗೊಂಬೆಗಳಾಗಿ ದುಡಿಯುತ್ತಾರೋ.. ಒಟ್ಟಿನಲ್ಲಿ ನಮ್ಮ ಪೊಲೀಸರು ಭೂಮಾಫಿಯಾ ಜೊತೆ ಕೈಜೋಡಿಸದಿದ್ದರಷ್ಟೇ ಸಾಕು. ಏಕೇಂದರೇ ಹೆಣ್ಣು. ಹೊನ್ನು ಮಣ್ಣು ಎಲ್ಲಾ ರಕ್ತಪಾತಗಳಿಗೂ ಮುನ್ನುಡಿ.





# ಪಂಜಾಬ್ ಚುನಾವಣೆಯಲ್ಲಿ ಕುಟುಂಬಗಳೇ ಭಾಗಿ

● ಎಂ.ಡಿ.ದಿನೇಶ್ ಕುಮಾರ್





ಪಂಜಾಬ್‌ನಲ್ಲಿ ಮುಂದಿನ ತಿಂಗಳು ವಿಧಾನಸಭೆ ಚುನಾವಣೆ ನಡೆಯಲಿದೆ. ಈ ನಡುವೆ ಭರ್ಜರಿಯಾಗಿ ಎಲ್ಲಾ ಪಕ್ಷಗಳು ಚುನಾವಣಾ ಪ್ರಚಾರವನ್ನು ನಡೆಸುತ್ತಿದೆ. ಕಾಂಗ್ರೆಸ್, ಬಿಜೆಪಿ, ಅಕಾಲಿದಳ ಸೇರಿದಂತೆ ಪಂಜಾಬ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್ ತೊರೆದು ತನ್ನದೇ ಆದ ಪಕ್ಷ ಪಂಜಾಬ್ ಲೋಕ ಕಾಂಗ್ರೆಸ್ ರಚನೆ ಮಾಡಿದ ಕ್ಯಾಪ್ಟನ್ ಅಮರಿಂದರ್ ಸಿಂಗ್ ಕೂಡಾ ಪ್ರಚಾರವನ್ನು ನಡೆಸುತ್ತಿದ್ದಾರೆ. ಈ ನಡುವೆ ಕೆಲವು ಪಕ್ಷಗಳ ಅಭ್ಯರ್ಥಿಗಳ ಪರವಾಗಿ ಇಡೀ ಕುಟುಂಬವೇ ಚುನಾವಣಾ ಕಣಕ್ಕೆ ಇಳಿದಿದೆ.

ಅಮರಿಂದರ್ ಸಿಂಗ್ ರಾಜಾ ವಾರಿಂಗ್ ಅವರು ಪಂಜಾಬ್‌ನ ಮುಕ್ತಸರ್ ಜಿಲ್ಲೆಯ ಗಿಡ್ಡರ್‌ಬಾಹಾ ವಿಧಾನಸಭೆ ಕ್ಷೇತ್ರದಿಂದ ಸತತ ಮೂರನೇ ಬಾರಿಗೆ ಸ್ಪರ್ಧಿಸುತ್ತಿದ್ದಾರೆ. ಅಮರಿಂದರ್ ಸಿಂಗ್ ರಾಜಾ ವಾರಿಂಗ್ ಈ ಹಿಂದೆ 2012 ಮತ್ತು 2017 ರಲ್ಲಿ ಈ ಸ್ಥಾನದಿಂದ ಆಯ್ಕೆಯಾಗಿದ್ದರು. ಫೆಬ್ರವರಿ 20 ರಂದು ನಡೆಯಲಿರುವ ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಕಣದಲ್ಲಿರುವ ಹಲವಾರು ಇತರ ಸ್ಪರ್ಧಿಗಳ ಕುಟುಂಬ ಸದಸ್ಯರು ಮುಂಬರುವ ಚುನಾವಣೆಗಳಿಗೆ ಬೆಂಬಲವನ್ನು ಪಡೆಯಲು ಮನೆ-ಮನೆಗೆ ಹೋಗುತ್ತಿದ್ದಾರೆ.

ಕೊರೊನಾ ವೈರಸ್ ಸೋಂಕು ಕಾರಣದಿಂದಾಗಿ ಭಾರತದ ಚುನಾವಣಾ ಆಯೋಗವು ದೊಡ್ಡ ಸಭೆಗಳು ಮತ್ತು ರ್‍ಯಾಲಿಗಳನ್ನು ನಿಷೇಧ ಮಾಡಿದೆ. ಈ ನಿಟ್ಟಿನಲ್ಲಿ ಅಭ್ಯರ್ಥಿಗಳ ಕುಟುಂಬದ ಸದಸ್ಯರು ತಮ್ಮ ಕುಟುಂಬದಿಂದ ಸ್ಪರ್ಧಿಸುವವರಿಗೆ ಮತ ಚಲಾಯಿಸಿ ಎಂದು ಮನವಿ ಮಾಡಲು ಮತದಾರರನ್ನು ವೈಯಕ್ತಿಕವಾಗಿ ಭೇಟಿ ಮಾಡುತ್ತಿದ್ದಾರೆ.



"ಕಳೆದ 10 ವರ್ಷಗಳಲ್ಲಿ ನಡೆದ "ಅಭೂತಪೂರ್ವ" ಅಭಿವೃದ್ಧಿ ಕಾರ್ಯಗಳಿಗಾಗಿ ಗಿಡ್ಡರ್‌ಬಹಾದ ಮತದಾರರು ತಮ್ಮ ತಂದೆಗೆ ಮತ ಚಲಾಯಿಸುತ್ತಾರೆ ಮತ್ತು ಅವರನ್ನು ಮತ್ತೆ ವಿಜಯಶಾಲಿಯಾಗಿಸುತ್ತಾರೆ," ಎಂದು ಏಕೊಮ್ ವಾರಿಂಗ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇನ್ನು ಈ ಹದಿನೈದು ವರ್ಷ ವಯಸ್ಸಿನ ಏಕೊಮ್ ವಾರಿಂಗ್ ತನ್ನ ತಂದೆಯ ಪರವಾಗಿ ಪ್ರಚರ ಮಾಡುವ ಸಂದರ್ಭದಲ್ಲಿ ಹೊಲಗಳಿಗೆ ನೀರನ್ನು ನೀಡಿದ ಅಮರಿಂದರ್ ಸಿಂಗ್ ರಾಜಾ ವಾರಿಂಗ್‌ರನ್ನು ಹಳ್ಳಿಯ ವೃದ್ಧರೊಬ್ಬರು ಹೊಗಳಿದ್ದಾರೆ. ಕೆಲವು ದಿನಗಳ ಹಿಂದೆ ಏಕೊಮ್ ವಾರಿಂಗ್ ತನ್ನ ತಂದೆಯ ಚುನಾವಣಾ ಕಚೇರಿಯನ್ನು ಗಿಡ್ಡರ್‌ಬಾಹಾದಲ್ಲಿ ಉದ್ಘಾಟಿಸಿದರು. ಕಳೆದ ಸೆಪ್ಟೆಂಬರ್‌ನಲ್ಲಿ ಚರಣ್‌ಜೀತ್ ಸಿಂಗ್ ಚನ್ನಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಅಮರಿಂದರ್ ಸಿಂಗ್ ರಾಜಾ ವಾರಿಂಗ್ ಸಾರಿಗೆ ಸಚಿವರಾದರು.

## ಪತಿಯ ಪರವಾಗಿ ಪತ್ನಿಯ ಪ್ರಚಾರ

ಕಾಂಗ್ರೆಸ್ ಅಭ್ಯರ್ಥಿ ದಲ್ವೀರ್ ಸಿಂಗ್ ಗೋಲ್ಡಿ ಪತ್ನಿ ಸಿಮ್ರತ್ ಕೌರ್ ಖಂಗುರಾ ಕೂಡ ತಮ್ಮ ಪತಿಯ ವಿಧಾನಸಭಾ ಕ್ಷೇತ್ರದಲ್ಲಿ ಪ್ರಚಾರದಲ್ಲಿ ತೊಡಗಿದ್ದಾರೆ. ಹಾಲಿ ಶಾಸಕರಾಗಿರುವ ಗೋಲ್ಡಿ ಮತ್ತೆ ಧುರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಆಮ್ ಆದ್ಮಿ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಭಗವಂತ್ ಮಾನ್‌ರನ್ನು ಎದುರಿಸಲಿದ್ದಾರೆ. ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವೀಧರರಾಗಿರುವ 39 ವರ್ಷ ಪ್ರಾಯದ ಸಿಮ್ರತ್ ಕೌರ್ ಖಂಗುರಾ ಕ್ಷೇತ್ರದ ಪ್ರತಿ ಮನೆಗೆ ಭೇಟಿ ನೀಡುತ್ತಿದ್ದಾರೆ. "ಮತದಾರರಿಂದ ಉತ್ತಮ ಪ್ರತಿಕ್ರಿಯೆಯನ್ನು ಇದೆ," ಎಂದು ಕೂಡಾ ಹೇಳಿದ್ದಾರೆ. ಬೆಳಗ್ಗೆ 7:30ಕ್ಕೆ ಪ್ರಚಾರ ಆರಂಭಿಸಿದ ಖಂಗೂರ ಸಂಜೆಯ ವೇಳೆಗೆ ಮನೆಗೆ ಮರಳುತ್ತಾರೆ. "ನಾನು ಜನರನ್ನು ಭೇಟಿ ಮಾಡುವುದು ಮೊದಲ ಬಾರಿಗೆ ಅಥವಾ ಎರಡನೆಯ ಬಾರಿಗೆ ಅಲ್ಲ. ನಾನು ಆಗಾಗ್ಗೆ ಅವರ ಬಳಿಗೆ ಹೋಗುತ್ತೇನೆ ಮತ್ತು ನನಗೆ ಆತ್ಮೀಯ ಸ್ವಾಗತ ಸಿಗುತ್ತದೆ," ಎಂದು ಹೇಳುತ್ತಾರೆ.

## ಎಎಪಿ ನಾಯಕ ಭಗವಂತ್ ಮಾನ್

ಎಎಪಿ ನಾಯಕ ಭಗವಂತ್ ಮಾನ್ ತನ್ನ ಪತಿಯ ವಿರುದ್ಧ ಅಭ್ಯರ್ಥಿ ಎಂಬ ಬಗ್ಗೆ ಮಾತನಾಡಿದ ಕಾಂಗ್ರೆಸ್ ಅಭ್ಯರ್ಥಿ ದಲ್ವೀರ್ ಸಿಂಗ್ ಗೋಲ್ಡಿ ಪತ್ನಿ ಸಿಮ್ರತ್ ಕೌರ್ ಖಂಗುರಾ, ಭಗವಂತ್ ಮಾನ್‌ರನ್ನು ನಾನು ಇಲ್ಲೆಲ್ಲಿಯೂ ನೋಡೇ ಇಲ್ಲ ಎಂದಿದ್ದಾರೆ. ಸಂಗ್ರೂರ್ ಲೋಕಸಭಾ ಕ್ಷೇತ್ರದಿಂದ ಎರಡು ಬಾರಿ ಸಂಸದರಾಗಿರುವ ಭಗವಂತ್ ಮನ್ 2014 ಮತ್ತು 2019 ರಲ್ಲಿ ಲೋಕಸಭೆ ಚುನಾವಣೆಯ ಸಮಯದಲ್ಲಿ ಕೇವಲ ಎರಡು ಬಾರಿ ಮಾತ್ರ ಧುರಿ ಕ್ಷೇತ್ರಕ್ಕೆ ಭೇಟಿ ನೀಡಿದ್ದರು. ಸಿಖ್ ಸಮುದಾಯದ ಪ್ರಾಬಲ್ಯ ಇರುವ ಪಂಜಾಬ್‌ನಲ್ಲಿ ಬಲಾಢ್ಯರಿಗೆ ಮಣೆ ಹಾಕಲು ಬಿಜೆಪಿ ನಿರ್ಧರಿಸಿದೆ. ಫೆಬ್ರವರಿ 20ರಂದು ರಾಜ್ಯ ವಿಧಾನಸಭೆ ಚುನಾವಣೆ ನಡೆಯಲಿದ್ದು, ಅರ್ಧಕ್ಕಿಂತಲೂ ಹೆಚ್ಚಿನ ಅಭ್ಯರ್ಥಿಗಳನ್ನು ಸಿಖ್ ಸಮುದಾಯದಿಂದಲೇ ಆರಿಸಿ ಕಣಕ್ಕಿಳಿಸಲು ಬಿಜೆಪಿ ಹಾಗೂ ಅದರ ಮಿತ್ರಪಕ್ಷಗಳು ನಿರ್ಧರಿಸಿವೆ. ಮಾಜಿ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ನೇತೃತ್ವದ ಪಂಜಾಬ್ ಲೋಕ ಕಾಂಗ್ರೆಸ್ ಮತ್ತು ಶಿರೋಮಣಿ ಅಕಾಲಿ ದಳ(ಸಂಯುಕ್ತ) ಮೈತ್ರಿ ಸಾಧಿಸಿರುವ ಬಿಜೆಪಿ, ಸಮುದಾಯದ ಪ್ರಾಬಲ್ಯ ಆಧರಿಸಿ ಟಿಕೆಟ್ ಹಂಚಿಕೆ ಮಾಡುವ ರಣತಂತ್ರಕ್ಕೆ ಮೊರೆ ಹೋಗಿದೆ. ಈ ಕುರಿತು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ಪ್ರಧಾನ ಕಾರ್ಯದರ್ಶಿ ತರುಣ್ ಛುಗ್, "ರಾಜ್ಯ ವಿಧಾನಸಭೆಯ 117 ಸ್ಥಾನಗಳ ಪೈಕಿ ಅರ್ಧಕ್ಕಿಂತಲೂ ಹೆಚ್ಚು ಸ್ಥಾನಗಳನ್ನು ಸಿಖ್ ಸಮುದಾಯಕ್ಕೆ ನೀಡಲಾಗುವುದು. ಅದರಲ್ಲೂ ವಿಶೇಷವಾಗಿ ಕೃಷಿಕರು ಮತ್ತು ಒಬಿಸಿಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಖಚಿತ. ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆ ಬಗ್ಗೆಯೂ ಮೈತ್ರಿಕೂಟ ಸಮಾಲೋಚನೆ ನಡೆಸಿದೆ," ಎಂದು ತಿಳಿಸಿದರು. ಮೂರು ಪಕ್ಷಗಳ ಮೈತ್ರಿಕೂಟದಲ್ಲಿ ಬಿಜೆಪಿ ಹಿರಿಯಣ್ಣನಾಗಿದ್ದು, 66 ಸ್ಥಾನ ಉಳಿಸಿಕೊಳ್ಳಬಹುದು ಎಂದು ಹೇಳಲಾಗುತ್ತಿದೆ.

ಅಮರಿಂದರ್ ಸಿಂಗ್ ನೇತೃತ್ವದ ನೂತನ ಪಕ್ಷ ಪಂಜಾಬ್ ಲೋಕ ಕಾಂಗ್ರೆಸ್‌ಗೆ 37 ಮತ್ತು ಶಿರೋಮಣಿ ಅಕಾಲಿ ದಳ (ಸಂಯುಕ್ತ) ಪಕ್ಷಕ್ಕೆ 14 ಸ್ಥಾನ ಹಂಚಿಕೆಯಾಗಬಹುದು ಎಂದು ಮೂಲಗಳು ತಿಳಿಸಿವೆ. ಬಿಜೆಪಿ ತನಗೆ ದಕ್ಕುವ 65 ಸ್ಥಾನಗಳ ಪೈಕಿ 33–35 ಕ್ಷೇತ್ರಗಳಲ್ಲಿಸಿಖ್ ಸಮುದಾಯದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಮೈತ್ರಿಕೂಟದ ಮೂರು ಪಕ್ಷಗಳಿಂದ ಒಟ್ಟು 70ಕ್ಕೂ ಹೆಚ್ಚು ಸಿಖ್ ಹುರಿಯಾಳುಗಳು ಸ್ಪರ್ಧೆಗಿಳಿಯುವ ಸಾಧ್ಯತೆ ಇದೆ. ಬಿಜೆಪಿ ಈಗಾಗಲೇ 34 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದು, ಇದರಲ್ಲಿ 13 ರೈತಾಪಿ ಸಮುದಾಯ ಮತ್ತು 9 ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಗಳಿದ್ದಾರೆ.

## ಕಾಂಗ್ರೆಸ್ ಮುಖಂಡರಿಗೆ ಟಿಎಂಸಿ ಗಾಳ ಹಾಕಿದ್ದರಿಂದ ಮೈತ್ರಿ ನಿರಾಕರಣೆ:

ಚಿದು ತೃಣಮೂಲ ಕಾಂಗ್ರೆಸ್ ತಮ್ಮ ಪಕ್ಷದ ಮುಖಂಡರನ್ನು ಸೆಳೆದುಕೊಂಡಿದ್ದರಿಂದಲೇ ಆ ಪಕ್ಷದ ಜತೆ ಗೋವಾದಲ್ಲಿ ಚುನಾವಣೆ ಮೈತ್ರಿ ಮಾಡಿಕೊಂಡಿಲ್ಲಎಂದು ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಭಾನುವಾರ ಸ್ಪಷ್ಟಪಡಿಸಿದ್ದಾರೆ. "ಟಿಎಂಸಿಯು ಗೋವಾದಲ್ಲಿವಿಧಾನಸಭೆ ಚುನಾವಣೆ ಮೈತ್ರಿ ಪ್ರಸ್ತಾಪ ಇರಿಸಿದ್ದು ನಿಜ. ಆದರೆ ಅದಕ್ಕೂ ಮೊದಲು ಮತ್ತು ಪ್ರಸ್ತಾಪ ಇಟ್ಟ ನಂತರ ಸಹ ಕಾಂಗ್ರೆಸ್ ಮುಖಂಡರನ್ನೇ ಆ ಪಕ್ಷ ಸೆಳೆದುಕೊಂಡಿದೆ. ಹೀಗಾಗಿಯೇ ನಾವು ಮೈತ್ರಿ ಪ್ರಸ್ತಾಪ ತಿರಸ್ಕರಿಸಿದೆವು," ಎಂದು ಸುದ್ದಿಗಾರರಿಗೆ ತಿಳಿಸಿದರು. "ಗೋವಾದಲ್ಲಿಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಮೈತ್ರಿ ಪ್ರಸ್ತಾಪ ತಿರಸ್ಕರಿಸಿದ ಪಿ.ಚಿದಂಬರಂ ನೇರ ಹೊಣೆ," ಎಂದು ಟಿಎಂಸಿ ಮುಖಂಡ ಅಭಿಷೇಕ್ ಬ್ಯಾನರ್ಜಿ ಆರೋಪಿಸಿದ್ದರು. ಚಿದಂಬರಂ ಅವರು ಗೋವಾ ವಿಧಾನಸಭೆ ಚುನಾವಣೆ ಉಸ್ತುವಾರಿಯಾಗಿದ್ದಾರೆ.

# ಶೀಘ್ರದಲ್ಲೇ ಮತ್ತೆ ಪಕ್ಷಾಂತರ ಪರ್ವ?

● 5ನೇ ಪುಟದಿಂದ...

ಬೊಮ್ಮಾಯಿ ಮೇಲೆ ಒತ್ತಡ ಹೇರುವುದು ಅದು ಸಫಲವಾಗದೇ ಇದ್ದಲ್ಲಿ ಹೈಕಮಾಂಡ್ ಮೇಲೆಯೇ ಒತ್ತಡ ಹೇರಲು ನಿರ್ಧರಿಸಿದ್ದಾರೆ. ಒಂದು ಪಕ್ಷ ಸಂಪುಟ ವಿಸ್ತರಣೆ ವಿಳಂಬವಾದರೆ ಕೆಲ ಶಾಸಕರ ಗುಂಪು ಕಟ್ಟಿಕೊಂಡು ದೆಹಲಿ ದೊರೆಗಳ ಮುಂದೆ ಪರೇಡ್ ಮಾಡಲು ಸಹ ಸಜ್ಜಾಗಿದ್ದಾರೆ.

ಸಾಹುಕಾರನ ನೆರವು ಕೇಳಿದ್ರಾ ಹೊಸ ದೋಸ್ತಿಗಳು: ಇದರ ಜೊತೆ ಇದೀಗ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹಾಗು ರೇಣುಕಾಚಾರ್ಯ ಶಾಸಕ ರಮೇಶ್ ಜಾರಕಿಹೊಳಿ ಜೊತೆ ಮಾತುಕತೆ ನಡೆಸಿದ್ದು, ಸಂಪುಟ ಪುನಾರಚನೆಗೆ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರಲು ಮುಂದಾಗಿದ್ದಾರೆ. ಮಾಜಿ ಸಿಎಂ ಯಡಿಯೂರಪ್ಪ ಮೂಲಕ ಬೊಮ್ಮಾಯಿ ಮೇಲೆ ಒತ್ತಡ ಹಾಕಿಸಬೇಕು ಎಂದು ನಿರ್ಧರಿಸಿದ್ದು, ಅದಕ್ಕಾಗಿ ಬೆಳಗಾವಿ ಸಾಹುಕಾರ ಸದ್ಯದಲ್ಲೇ ಯಡಿಯೂರಪ್ಪ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ ಎಂದುಖಚಿತ ಮೂಲಗಳು ತಿಳಿಸಿವೆ.

## ರೀ ಎಂಟ್ರಿಗೆ ಸಾಹುಕಾರ ಯತ್ನ

ಸಚಿವ ಸ್ಥಾನ ಕಳೆದುಕೊಂಡಿರುವ ರಮೇಶ್ ಜಾರಕಿಹೊಳಿ ಮರಳಿ ಸಂಪುಟ ಸೇರಲು ಸರ್ಕಸ್ ನಡೆಸುತ್ತಿದ್ದಾರೆ. ತಮ್ಮ ವಿರುದ್ಧದ ಪ್ರಕರಣದಲ್ಲಿ ತನಿಖೆ ಬಹುತೇಕ ಪೂರ್ಣಗೊಂಡಿದ್ದು, ಅದರಂದ ಆದಷ್ಟು ಬೇಗ ಪಾರಾಗುವ ವಿಶ್ವಾಸದಲ್ಲಿದ್ದಾರೆ.ಹಾಗಾಗಿ ಸಂಪುಟಕ್ಕೆ ಸೇರಿಸಿಕೊಳ್ಳು ವಂತೆ ಯಡಿಯೂರಪ್ಪ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೇಲೆ ಒತ್ತಡ ಹಾಕಿಸುತ್ತಿದ್ದಾರೆ.ಈಗಾಗಲೇ ಕೆಲವು ಬಾರಿ ಸಿಎಂ ಜೊತೆ ಈ ಸಂಬಂಧ ಮಾತುಕತೆಯನ್ನೂ ನಡೆಸಿದ್ದಾರೆ.

ಒಂದು ಕಡೆ ಸಂಘ ಪರಿವಾರ, ಮತ್ತೊಂದು ಕಡೆ ಪಕ್ಷದ ರಾಜ್ಯ ಘಟಕದ ಶಿಫಾರಸು, ಮತ್ತೊಂದೆ ಆಕಾಂಕ್ಷಿಗಳು ಸಿಎಂ ಬೊಮ್ಮಾಯಿ ಮೇಲೆ ಒತ್ತಡ ಹೇರುತ್ತಿದ್ದಾರೆ. ಕೋವಿಡ್ ಕಾರಣ ನೀಡಿದ್ದ ವರಿಷ್ಠರ ನಂತರ ಧನುರ್ಮಾಸ ಎಂದಿದ್ದರು. ಸಂಕ್ರಾಂತಿಗೆ ಸಂಪುಟ ವಿಸ್ತರಣೆ ಎನ್ನುವ ನಿಲುವಿಗೆ ಮುಖ್ಯಮಂತ್ರಿಗಳು ಬಂದಿದ್ದರು.

ಆದರೆ ಇದೀಗ ಸಂಕ್ರಾಂತಿಯೂ ಮುಗಿದಿದ್ದು, ಸಂಪುಟ ವಿಸ್ತರಣೆಗೆ ಮಾತ್ರ ಇನ್ನೂ ಮುಹೂರ್ತ ಕೂಡಿಬಂದಿಲ್ಲ. ಇದೀಗ ಉತ್ತರ ಪ್ರದೇಶ ಸೇರಿದಂತೆ ಪಂಚರಾಜ್ಯಗಳ ಚುನಾವಣೆ ಘೋಷಣೆಯಾಗಿದ್ದು, ಬಿಜೆಪಿ ಹೈಕಮಾಂಡ್ ನಾಯಕರು ಉತ್ತರ ಪ್ರದೇಶ ಚುನಾವಣೆಯನ್ನೇ ಕೇಂದ್ರೀಕರಿಸಿಕೊಂಡು ತಂತ್ರಗಾರಿಕೆ ರೂಪಿಸುತ್ತಿದ್ದಾರೆ. ಸದ್ಯ ಕರ್ನಾಟಕ ರಾಜಕೀಯ, ಸಂಪುಟ ವಿಸ್ತರಣೆಯಂತಹ ವಿಷಯಗಳ ಕುರಿತು ತಲೆಕೆಡಿಸಿಕೊಳ್ಳುವುದು ಕಷ್ಟ. ಹಾಗಾಗಿ ಪಂಚ ರಾಜ್ಯಗಳ ಚುನಾವಣೆ ಹಾಗು ರಾಜ್ಯ ಮುಂಗಡ ಬಜೆಟ್ ಮಂಡನೆ ನಂತರವೇ ರಾಜ್ಯ ಸರ್ಕಾರದ ಸಂಪುಟ ವಿಸ್ತರಣೆಗೆ ಮುಹೂರ್ತ ಕೂಡಿಬರಲಿದೆ ಎನ್ನುವ ಮಾತುಗಳು ಪಕ್ಷದ ವಲಯದಲ್ಲಿ ಕೇಳಿಬರುತ್ತಿವೆ.



## ಸಂಪುಟಕ್ಕೆ ಭರ್ಜರಿ ಸರ್ಜರಿ

ಒಂದು ವೇಳೆ ಶಾಸಕರ ಒತ್ತಡಕ್ಕೆ ಮಣಿದು ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರ್ ರಚನೆಗೆ ವರಿಷ್ಠರು ಮುಂದಾದರೆ ನಾಲ್ಕು ಅವಧಿಯಿಂದ ಸಚಿವರಾಗಿ ಕೆಲಸ ಮಾಡುತ್ತಿರುವವರಿಗೆ ಕೋಕ್ ನೀಡುವುದರ ಜೊತೆಗೆ ಬಿಜೆಪಿಗೆ ವಲಸೆ ಬಂದು ಸಚಿವರಾದವರಿಗೂ ಬಿಜೆಪಿ ಈ ಬಾರಿ ಲೈಟ್ ಆಗಿ ಶಾಕ್ ನೀಡಲಿದೆ. ಯಾಕೆಂದರೆ ವಲಸಿಗರು ಮತ್ತೆ ಕಾಂಗ್ರೆಸ್ ಕದ ತಟ್ಟುವ ಸಾಧ್ಯತೆಯನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ. ಹೀಗಾಗಿ ವಲಸಿಗರು ಮತ್ತೆ ಕಾಂಗ್ರೆಸ್‌ಗೆ ಹೋಗುವುದಿದ್ದರೆ ಈಗಲೇ ಹೋಗಲು ನಾವು ಪಕ್ಷ ಬಲಗೊಳಿಸುತ್ತೇವೆ ಎಂಬ ನಿರ್ಧಾರಕ್ಕೆ ಬಿಜೆಪಿ ಹೈಕಮಾಂಡ್ ಬಂದಿದೆ.

## ಸಂಪುಟದಲ್ಲಿ ಯಾರಿಗೆ ಕೋಕ್?:

ಇದೇ ತಿಂಗಳ ಕೊನೆಯಲ್ಲಿ ನಡೆಯುವ ಸಂಪುಟ ಪುನರ್ ರಚನೆಯಲ್ಲಿ ಹಿರಿಯ ಸಚಿವರಾದ ಕೆ.ಎಸ್.ಈಶ್ವರಪ್ಪ, ಮುರುಗೇಶ್ ನಿರಾಣಿ, ಸಿ.ಸಿ.ಪಾಟೀಲ್, ಪ್ರಭುಚೌಹಾಣ್ ಅವರನ್ನು ಕೈಬಿಡುವ ಸಾಧ್ಯತೆ ಇದೆ. ಇವರ ಅನುಭವಗಳನ್ನು ಪಕ್ಷಕ್ಕೆ ಬಳಸಿಕೊಳ್ಳಲು ಈಗಾಗಲೇ ರಣತಂತ್ರ ರೂಪಿಸಲಾಗುತ್ತಿದೆ.

## ಹೊಸಬರಿಗೆ ಚಾನ್ಸ್?:

ಬಿಜೆಪಿಯಲ್ಲಿ ಈಗಾಗಲೇ ಸದ್ದಿಲ್ಲದೆ ಗದ್ದಲ ಎಬ್ಬಿಸಲು ಸಜ್ಜಾಗಿರುವ ವಿಜಯಪುರ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್, ಮಾಜಿ ಸಚಿವ ರಮೇಶ್ ಜಾರಕಿಹೊಳಿ, ಎಂ.ಪಿ.ರೇಣುಕಾಚಾರ್ಯ, ದತ್ತಾತ್ರೇಯ ಪಾಟೀಲ್ ರೇವೂರು, ಕುಡಚಿ ಶಾಸಕ ಪಿ. ರಾಜೀವ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರನ್ನು ಈ ಬಾರಿ ಸಂಪುಟಕ್ಕೆ ಸೇರಿಸಿಕೊಳ್ಳುವ ಬಗ್ಗೆ ವ್ಯಾಪಕವಾದ ಚರ್ಚೆ ನಡೆಯುತ್ತಿದೆ.

ವಿಜಯೇಂದ್ರ ಅವರಿಗೆ ಉನ್ನತ ಹುದ್ದೆ ನೀಡಲಾಗಿಲ್ಲ ಎಂಬ ಒಂದೇ ಕಾರಣಕ್ಕೆ ಈಗ ಹಲವು ಸಮಸ್ಯೆಗಳು ಸೃಷ್ಟಿಯಾಗಿವೆ. ಜೊತೆಗೆ ಯಡಿಯೂರಪ್ಪನವರನ್ನು ಪಕ್ಷದ ನಾಯಕರೇ ಮೂಲೆಗುಂಪು ಮಾಡುತ್ತಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿರುವ ಬೆನ್ನಲ್ಲಿ ವಿಜಯೇಂದ್ರ ಸಂಪುಟ ಸೇರ್ಪಡೆ ಸುದ್ದಿಯೂ ಹೊರಬಿದ್ದಿದೆ. ಹೀಗಾಗಿ ಬಿಜೆಪಿಯ ಈ ಸರ್ಕಾರದಲ್ಲಿ ಎಲ್ಲವೂ ಗೊಂದಲಮಯವಾಗಿವೆ. ಜೊತೆಗೆ ಈಗ ಸಂಪುಟ ಪುನರ್ ರಚನೆ ಕೂಡ ಗೊಂದಲ ಗೂಡೇ ಆಗಲಿದ್ದು, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಗೆ ಇದು 'ಅತ್ತ ಧರಿ, ಇತ್ತ ಪುಲಿ' ಎನ್ನುವಂತಾಗಿದೆ.

# ಆತ್ಮ ಗೌರವ ಎಂಬ ಅನಿವಾರ್ಯತೆಗಾಗಿ...

ಸ್ಥಿತಿಬಿಂಬ
ಡಾ.ಶಿವಕುಮಾರ್ ಕಂಪ್ಲಿ



ಅಂಬೇಡ್ಕರ್ ಭಾರತೀಯ ಚರಿತ್ರೆಯ ಯುಗ ನಿರ್ಮಾಪಕ. ಅಪೂರ್ವ ಸಾಧಕ.ಅವರ ಕಾಡುವ ಕದಡುವ ಚಿಂತನೆಗಳು ಹೇಗೆ ನಮ್ಮೊಳಗೆ ಸುತ್ತುತ್ತವೆ?ಎಂಬುದನ್ನ ನಮಗೆ ನಾವೇ ವಿವರಿಸಿಕೊಳ್ಳುವ ಅಗತ್ಯವಿದೆ.ಈ ವಿವರವನ್ನ 1)ಬಯಲರೂಪ 2) ಪಠ್ಯ ರೂಪ 3) ಮನೋರೂಪ ಎಂದು ಬಿಡಿ ಬಿಡಿಯಾಗಿ ವಿವರಿಸಿಕೊಳ್ಳಬಹುದು.

1)ಬಯಲುರೂಪ: ಅಂಬೇಡ್ಕರರ ಬದುಕು ಮತ್ತು ಚಿಂತನೆಗಳು ಈ ಹೊತ್ತಿಗೆ ಎಚ್ಚರಿಕೆಯಂತೆಯೂ ಭವಿಷ್ಯಕ್ಕೆ ಮಾರ್ಗ ಸೂಚಿಯಂತೆಯೂ ಕಾಣಬಲ್ಲವು.ಅಂಬೇಡ್ಕರ ಎಂಬ ಬಯಲು ಪಠ್ಯದ ಶಿಲ್ಪ ಒಂದು ಕೈಯಲ್ಲಿ ಪುಸ್ತಕ ಹಿಡಿದು ಮತ್ತೊಂದು ಕೈಯ ತೋರು ಬೆರಳನ್ನ ಸಂಸತ್ ಭವನದ ಕಡೆ ತೋರುವ ಮೂರ್ತಿ. ಈ ಮೂರ್ತಿ ಭಾರತದ ಪ್ರಜಾತಂತ್ರ ವ್ಯವಸ್ಥೆಯನ್ನ ಅದನ್ನ ಬಲಗೊಳಿಸುವ ಜ್ಞಾನದ ಬೆಳಕನ್ನ ತೋರುವ ಸಂಕೇತದಂತಿದೆ.ಇದೇ ಮೂರ್ತಿಯು ನಗರಗಳ ಆಯಕಟ್ಟಿನಲ್ಲಿ ಬಂದು ನಿಂತ ಬಗೆಯು ಈಗೀಗ ಸಾಂಸ್ಕೃತಿಕ ಚಹರೆಗಿಂತ ರಾಜಕೀಯ ಚಹರೆಯನ್ನ ಪಡೆದುಕೊಂಡಂತೆ ಕಾಣುತ್ತದೆ.ಇದು ರಾಜಕಾರಣದ ಶಕ್ತಿ ಕೇಂದ್ರದಂತೆಯೂ ದಲಿತ ಶಕ್ತಿಯ ರೂಪಕದಂತೆಯೂ ಕಾಣುತ್ತದೆ.

ಸ್ವಲ್ಪ ವಿಚಾರ ಶೀಲ ನೋಟದಿಂದ ಇದನ್ನ ಗಮನಿಸಿದಾಗ ಇದೇ ಮೂರ್ತಿಯು ಪ್ರತಿನಿಧಿಸುವ ಸಾಮಾಜಿಕ ಆವರಣದಲ್ಲಿ ಆಯಾ ಸಮುದಾಯಗಳು ಚಲನಶೀಲಗೊಳ್ಳದೆ ಯಾಕೆ ಹಾಗೇ ಬರೀ ಮೂರ್ತಿಯಂತೆಯೇ ನಿಶ್ಚಲವಾಗಿ ನಿಂತ ಕೆಲವರ ಚಲನಶೀಲತೆಯ ನಿಶ್ಚಲ ಸ್ಥಿತಿಯನ್ನ ತೋರುವಂತಿದೆ.

ಮೂರ್ತಿಯು ಕಿಡಿಗೇಡಿಗಳಿಗೆ ಸಿಕ್ಕು ಹಾನಿಯಾಗಬಾರದೆಂದು ಕಬ್ಬಿಣ ಸಲಾಕೆಗಳ ವೃತ್ತ ಪಡೆದ ಈ ಮೂರ್ತಿಯು ಆಳದ ಆ ಜನಾಂಗಗಳ ಬಲಾಢ್ಯ ಗುಂಪನ್ನೂ ಆ ಗುಂಪನ್ನು ಮಣಿಸಲು ನಡೆಸೋ ಜನರ ಕ್ರಿಯೆಯು ಅದರೆದುರ ಕಬ್ಬಿಣದ ಬೇಲಿಯೊಳಗಿನ ಮೂರ್ತಿಯ ಮಂದಹಾಸವೂ ಅಂಗುಲಿಮಾಲನೆದುರ ಬುದ್ಧನ ನಗೆಯಂತೆಯೇ ಕಾಣುತ್ತದೆ.ಆಗಾಗ ಸಿಂಗಾರಗೊಳ್ಳುವ ಈ ಮೂರ್ತಿ ಲೋಕದ ಕಣ್ಣಿನ ಬರಿ ಮೂರ್ತಿಮಾತ್ರವಲ್ಲ ಇದು ಅನ್ನ,ಹಣ,ಅಧಿಕಾರ,ಕೀರ್ತಿ ಮತ್ತು ಪ್ರತಿಭಟಿಸುವ ಕೆಚ್ಚನ್ನ ತುಂಬುವ ಮಹಾನ್ ಬಯಲ ಸ್ಫೂರ್ತಿಯೂ ಹೌದು.



2) ಪಠ್ಯ ರೂಪ : ಅಂಬೇಡ್ಕರ್ ಎಂಬ ಹೆಸರಿನ ಒಳಗೇ ಭಾರತೀಯ ಚರಿತ್ರೆಯ ಐತಿಹಾಸಿಕ ರೂಪಗಳಿವೆ. ಅಪ್ಪ ರಾಮ್ ಜಿ ಅಮ್ಮ ಭೀಮಾಬಾಯಿ.ಭೀಮಾಬಾಯಿಯ ಹದಿನಾಲ್ಕನೇ ಮಗನೇ ಅಂಬೇಡ್ಕರ. ಐದನೇ ವರ್ಷಕ್ಕೇ ಅವರ ತಾಯಿ ತೀರಿದ್ದರಿಂದ ಅಂಬೇಡ್ಕರ್ ಸೋದರತ್ತೆ ಮೀರಾಬಾಯಿಯ ಮಡಿಲಲ್ಲೇ ಬೆಳೆಯಬೇಕಾಯಿತು. ಹದಿನಾಲ್ಕು ಮಕ್ಕಳಲ್ಲಿ ಉಳಿದವರು ಐದು ಜನ ಮಾತ್ರ ಎಂಬ ವಿಚಾರವೇ ಆ ಕಾಲದ ತಳವರ್ಗದ ಬಡಮಕ್ಕಳ ದೀನ ಸ್ಥಿತಿಯನ್ನ ತೋರುತ್ತದೆ.ಮುಂದೆ ಅಂಬೇಡ್ಕರರ ನಾಲ್ಕು ಮಕ್ಕಳೂ ತೀರುವುದು ಕಾಲಾಂತರದಲ್ಲೂ ಬದಲಾಗದ ದಮನಿತರ ಸಾವುಗಳ ಈ ಸ್ಥಿತಿಯನ್ನೇ ತೋರುತ್ತದೆ.

ಮುಂಬೈ ಮಹಾನಗರದ ಸ್ಲಮ್ ನಿಂದ ಬೆಳೆದ ಅಂಬೇಡ್ಕರ್ ಅಸ್ಪೃಶ್ಯ ಭಾರತದ ಮೊದಲ ಮೆಟ್ರಿಕ್ಯುಲೇಷನ್ ಮತ್ತು ಪದವಿ ಪಡೆದವರು.ಅಂಬೇಡ್ಕರರು ಮಹಾರಾಜ ಸೈಯ್ಯಾಜಿರಾವ್ ಗಾಯಕವಾಡರ ಸಹಾಯದಿಂದಾಗಿ ನ್ಯೂಯಾರ್ಕನಲ್ಲಿ ಎಂ.ಎ.ಪದವಿಯನ್ನು ಲಂಡನ್ ನಲ್ಲಿ ಪಿ.ಹೆಚ್.ಡಿ. ಪದವಿಯನ್ನೂ ಪಡೆದ ಮೊದಲ ಭಾರತೀಯ ಎನಿಸಿದರು.ಮಹಾರಾಜರು ಓದಿ ವಾಪಾಸಾದ ಅಂಬೇಡ್ಕರರನ್ನ ಹಣಕಾಸಿನ ಮಂತ್ರಿಯಾಗಿ ನೇಮಿಸಲು ಬಯಸಿದರೆ ಜಾತಿವಾದಿ ದಿವಾನರು ಬಿಡಲಿಲ್ಲ.ಕೊನೆಗೆ ಮಹಾರಾಜರು ಇವರನ್ನ ಸೇನಾ ಕಾರ್ಯದರ್ಶಿಯನ್ನಾಗಿ ನೇಮಿಸಿದರು.ಆದರೂ ಅಂಬೇಡ್ಕರರಿಗೆ ಅಪಮಾನಗಳು ತಪ್ಪಲಿಲ್ಲ.ಅವರ ಕೈಕೆಳಗಿನ ಯಾರೂ ಅವರ ಆದೇಶಗಳನ್ನ ಪಾಲಿಸುತ್ತಿರಲಿಲ್ಲ.ಡಿ ದರ್ಜೆಯ ಸಹಾಯಕರೂ ಕೂಡ ಪೈಲುಗಳನ್ನ ಅವರ ಮೇಜಿಗೆ ತಂದಿಡದೆ ದೂರದಿಂದಲೇ ಎಸೆಯುತ್ತಿದ್ದರು.ದೊಡ್ಡ ಹುದ್ದೆಯ ಅಂಬೇಡ್ಕರರಿಗೆ ವಾಸಿಸಲಿಕ್ಕೆ ಬಾಡಿಗೆ ಮನೆಯೂ ದೊರೆಯದೆ ಕೊನೆಗೆ ಪಾರ್ಸಿಯೊಬ್ಬರ ಹೋಟೇಲಿನಲ್ಲಿ ಉಳಿದುಕೊಳ್ಳಬೇಕಾಯಿತು.ಅವರ ಏಳ್ಗೆಯನ್ನ ಸಹಿಸದ ಜಾತಿವಾದಿ ಮತಾಂಧರು ಅಲ್ಲೂ ಬಿಡದೆ ಉಳಿದು ಕೊಂಡ ಹೋಟೇಲಿಗೆ ನುಗ್ಗಿ ಅಂಬೇಡ್ಕರರನ್ನ ಥಳಿಸಿ ಅವರ ಪುಸ್ತಕಗಳಿದ್ದ ಪೆಟ್ಟಿಗೆಯನ್ನ ಹೊರಗೆ ಎತ್ತಿ ಬಿಸಾಕಿ ಅವರನ್ನ ದರದರ ಎಳೆತಂದು ಹೊರನೂಕಿದರು. ಇದರಿಂದ ತೀವ್ರ ಅಪಮಾನಗೊಂಡ ಅಂಬೇಡ್ಕರರು ತೀವ್ರವಾಗಿ ನೊಂದರು. ದಿಕ್ಕು ದಿಕ್ಕಿಗೆ ಬಿದ್ದ ಪುಸ್ತಕಗಳನ್ನೆಲ್ಲಾ ಆರಿಸಿ ತಮ್ಮ ಟ್ರಂಕಿಗೆ ತುಂಬಿಕೊಂಡು ಊರ ಹೊರಗಿನ ಮರವೊಂದರ ಕೆಳಗೆ ಕುಳಿತು ಗಳ ಗಳನೆ ಅತ್ತುಬಿಟ್ಟರು! ನನ್ನಂತಹ ಉದ್ಯೋಗಸ್ಥ ವಿದ್ಯಾವಂತನನ್ನೇ ಈ ರೀತಿ ನಡೆಸಿಕೊಳ್ಳುವ ಈ ಮತಾಂಧರು ಇನ್ನು ಅಮಾಯಕ ಜನರನ್ನ ಎಷ್ಟು ಹೀನವಾಗಿ ಕಾಣಲಿಕ್ಕಿಲ್ಲ!?ಎಂದು ಪ್ರಶ್ನಿಸಿಕೊಂಡರು.ಮುಂದೆ ಅಂಬೇಡ್ಕರರು 'ಮೂಕನಾಯಕ' ಎಂಬ ಪತ್ರಿಕೆ ಆರಂಭಿಸಿದರು,ಈ ಪತ್ರಿಕೆ ದಮನಿತ ಜನರಿಗೆ ತಿಳಿಯಬೇಕೆಂದು ಶಾಹು ಮಹಾರಾಜರು ಓದಿ ಹೇಳಲು ಹಳ್ಳಿ ಹಳ್ಳಿಗೆ ಯುವಕರನ್ನ ಕಳಿಸಿ ಇಪ್ಪತ್ತು ರೂಪಾಯಿ ಭತ್ಯೆ ನೀಡಿದರು. ಮುಂದೆಯೂ ಅಂಬೇಡ್ಕರ್ ಅವರು ಜನ ಹಿತಕ್ಕಾಗಿ 'ಬಹಿಷ್ಕೃತ ಭಾರತ'ಮತ್ತು 'ಸಮತಾ' ಎಂಬ ಪತ್ರಿಕೆಗಳನ್ನ ನಡೆಸಿದರು. ಈ ಮಧ್ಯೆ ತಮಗೆ ಪ್ರಿಯವಾದ ಅಧ್ಯಾಪಕ ಹುದ್ದೆಯನ್ನೂ ನಿರ್ವಹಿಸಿದರು. ಅಂಬೇಡ್ಕರರು ಮತ್ತೆ ವಿದೇಶಕ್ಕೆ ತೆರಳಿ ರಾಜಕೀಯ ಅರ್ಥಶಾಸ್ತ್ರದಲ್ಲಿ ಪದವಿಯನ್ನ ಜರ್ಮನ್ ದೇಶದಲ್ಲೂ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಮತ್ತೊಂದು ಪಿ.ಹೆಚ್.ಡಿ. ಪದವಿಯನ್ನೂ ಪಡೆದರು. ಹಾಗೇ ಕಾನೂನು ಶಾಸ್ತ್ರದ ಬಾರ್ ಅಟ್ ಲಾ ಪದವಿಯನ್ನೂ ಪಡೆದರು.ಅಂಬೇಡ್ಕರರಿಗೆ ಆಗ ಕೇವಲ ಮುವತ್ತು ವರ್ಷ ಮಾತ್ರ!. ಇಷ್ಟು ಚಿಕ್ಕ ವಯಸ್ಸಿನಲ್ಲಿ ಅಮೇರಿಕಾ,ಇಂಗ್ಲೆಂಡ್,ಜರ್ಮನ್ ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದ ಮತ್ತೊಬ್ಬ ಭಾರತೀಯನಿಲ್ಲ ಎಂಬುದೇ ಗಮನಾರ್ಹ.

ಅಂಬೇಡ್ಕರರ ಹೋರಾಟದ ಮತ್ತೊಂದು ಮಜಲೇ ಪೂನಾ ಒಪ್ಪಂದ. ದಲಿತರ ಓಟಿನ ಪ್ರತ್ಯೇಕತೆಯು ಭಾರತವನ್ನೂ, ಹಿಂದು ಧರ್ಮವನ್ನೂ ಒಡೆವುದೆಂದು ಹೇಳಿದ ಗಾಂಧೀಜಿ ಅಂಬೇಡ್ಕರರ ವಿರುದ್ಧ ಯರವಾಡ ಜೈಲಿನಲ್ಲಿ ಉಪವಾಸ ಆರಂಭಿಸಿದರು. ಕೋಮುವಾದಿಗಳು 'ಗಾಂಧೀಜಿ ಅವರ ಪ್ರಾಣಕ್ಕೆ ತೊಂದರೆಯಾದರೆ ದೇಶದ ಎಲ್ಲಾ ಅಸ್ಪೃಶ್ಯರನ್ನ ಸುಟ್ಟು ಹಾಕಿಬಿಡುವುದಾಗಿ' ಬೆದರಿಕೆ ಒಡ್ಡಿದ್ದರಿಂದ ಪೂನಾ ಒಪ್ಪಂದಕ್ಕೆ ಅಂಬೇಡ್ಕರರು ಸಹಿಹಾಕಬೇಕಾಯಿತು. ಇದನ್ನ ಅಂಬೇಡ್ಕರರು ಬಲವಂತದ ಒಪ್ಪಂದವೆಂದೇ ಕರೆದರು.

ಐತಿಹಾಸಿಕ ಎಂದು ಕರೆಸಿಕೊಂಡದ್ದು ಅವರ 1935ರ ಜಾತಿವಿನಾಶ ಎಂಬ ಸುಪ್ರಸಿದ್ಧ ಭಾಷಣ. ಮುಂದೆ ಅಂಬೇಡ್ಕರರು ಮಂತ್ರಿಯಾದರು. ಕಾರ್ಮಿಕರ ಕೆಲಸದ ಅವಧಿಯನ್ನ ಹನ್ನೆರಡು ಗಂಟೆಯಿಂದ ಎಂಟು ಗಂಟೆಗೆ ಇಳಿಸಿದರು.ಸ್ತ್ರೀಯರಿಗೆ ಹೆರಿಗೆ ಭತ್ಯೆ ಮತ್ತು ಹೆರಿಗೆ ರಜೆ ನೀಡುವ ಕಾನೂನು ತಂದರು.ಅಂಬೇಡ್ಕರರು ಪ್ರತಿಪಾದಿಸಿದ 'ಹಿಂದೂ ಕೋಡ್ ಬಿಲ್'ನ್ನ ನೆಹರು ಮಂತ್ರಿ ಮಂಡಲ ವಾಪಾಸು ಪಡೆದ್ದನ್ನ ವಿರೋಧಿಸಿ ಕಾನೂನು ಮಂತ್ರಿ ಪದವಿಗೇ ರಾಜಿನಾಮೆ ನೀಡಿ ಹೊರಬಂದರು.ಹಿಂದೂ ಕಂದಾಚಾರಿಗಳ ಒತ್ತಡಕ್ಕೆ ಮಣಿದ ನೆಹರು ಅಂಬೇಡ್ಕರರು ಪ್ರತಿಪಾದಿಸಿದ ಮಹಿಳೆಯರ ಆಸ್ತಿ ಹಕ್ಕು,ವಿಚ್ಛೇದನಾ ಹಕ್ಕು,ದತ್ತು ಸ್ವೀಕಾರದ ಸಮಾನ ಹಕ್ಕು,ಮೊದಲಾದ ಮಹಿಳಾ ಪರ ನಿಲುವುಗಳನ್ನೇ ನಿರಾಕರಿಸಿಬಿಟ್ಟರು. ಮುಂದಿನ ಎರಡು ಚುನಾವಣೆಗಳಲ್ಲಿ ಇಂತಹ ಅಂಬೇಡ್ಕರರನ್ನೇ ಸೋಲಿಸಿದ್ದು ಭಾರತೀಯ ರಾಜಕೀಯ ರೀತಿಗೆ ಹಿಡಿದ ಕನ್ನಡಿ ಎನ್ನಬಹುದು.

ಅಂಬೇಡ್ಕರರು ಎಂದಿಗೂ ವ್ಯಕ್ತಿ ವಿರೋಧಿಯಲ್ಲ ಜೀವವಿರೋಧಿ ನಿಲುವುಗಳನ್ನ ಅವರು ವಿರೋಧಿಸುತ್ತಿದ್ದರು.ಜಿನ್ನ ತಳೆದ ದೇಶ ವಿಭಜನೆಯ ನಿಲುವನ್ನ ,ಮನುಸ್ಮೃತಿ ನಿರಾಕರಣೆಯನ್ನ ಈ ನೆಲೆಯಿಂದಲೇ ನಾವು ನೋಡಬೇಕು.ತಮ್ಮ ತೀಕ್ಷ್ಣವಾದ ತರ್ಕದಿಂದ ಅಪಾರ ಓದಿನ ಸಹಾಯದಿಂದ ವಿರೋಧಿಗಳ ಬಾಯಿ ಮುಚ್ಚಿಸುತ್ತಿದ್ದ ಅಂಬೇಡ್ಕರರು ಎಷ್ಟೋ ರಾತ್ರಿಗಳನ್ನ ದಮನಿತರ ವಿಮೋಚನೆಗಾಗಿ ಪುಸ್ತಕಗಳಲ್ಲಿ ಮುಳುಗಿ ಕಳೆದರು.ಮಹಾನ್ ಪುಸ್ತಕ ಪ್ರೇಮಿಯಾದ ಅವರು ಐವತ್ತು ಸಾವಿರ ಪುಸ್ತಕಗಳನ್ನ ಹೊಂದಿದ್ದಲ್ಲದೆ ಅವನ್ನೆಂದೂ ಶೋಕಿಗಾಗಿ ಇಟ್ಟಿರಲಿಲ್ಲ. ತಮ್ಮ ಜೀವಿತದ ಕೊನೆ ಕ್ಷಣವನ್ನೂ ಓದೆಂಬ ಉಸಿರಿಗೇ ಮೀಸಲಿಟ್ಟರು.


3) ಅಂಬೇಡ್ಕರ್ ಎಂಬ ಮನೋರೂಪ : ಅಂಬೇಡ್ಕರ್ ಎಂಬ ಚಿತ್ರ ತೊಂಭತ್ತರ ದಶಕಕ್ಕೂ ಇಂದಿಗೂ ಪರಿಣಾಮದ ದೃಷ್ಟಿಯಲ್ಲಿ ತುಂಬಾ ಬೆಳೆದಿದೆ. ಈಗೀಗ ಅಂಬೇಡ್ಕರರು ಎಲ್ಲಾ ಊರ ಹಬ್ಬಗಳಲ್ಲೂ ಸಿನಿಮಾತಾರೆಯರ ಜೊತೆಗೆ ಪ್ಲಕ್ಸಗಳಲ್ಲಿ ವಿಸ್ತರಿಸಿಕೊಳ್ಳುತ್ತಿರುವುದು ಗಮನಾರ್ಹ.

ಇತ್ತೀಚೆಗೆ ಯಾವ ದಲಿತರು ತಮ್ಮ ಮನೆಗಳಲ್ಲಿ ಅಂಬೇಡ್ಕರರ ಪೋಟೋ ಹಾಕಿಕೊಂಡರೆ ದಲಿತರೆಂದು ದೂರವಿಡುತ್ತಾರೆಂದು ದೂರವಿರುತ್ತಿದ್ದರೋ(ನಗರದಲ್ಲಿ ಬಾಡಿಗೆ ಮನೆಯೂ ಸಿಗದೆಂಬ ಭಯದಿಂದ) ಅಂತಹವರ ಮನೆಗಳಲ್ಲೂ ಮೆಲ್ಲಗೆ ಇಂದು ಅಂಬೇಡ್ಕರ್ ನಿಲ್ಲುತ್ತಿದ್ದಾರೆ.ಈಗೀಗ ಅಂಬೇಡ್ಕರ್ ಜಾತಿಗಿಂತಲೂ ದೇಶದ ಶ್ರೇಷ್ಟ ಸಾಧಕನೆಂದು ಸರ್ಕಾರಗಳು ಎಲ್ಲಾ ಶಾಲಾ ಕಛೇರಿಗಳಲ್ಲಿ ಪೋಟೋ ಕಡ್ಡಾಯ ಗೊಳಿಸಿರುವುದರ ಪರಿಣಾಮ ಅವರ ಪೋಟೋ ಎಲ್ಲರ ಕಣ್ಣಿಗೂ ಸಹನೀಯವೆನಿಸುತ್ತಿದೆ.

ದಲಿತರ ಒಳಗಿನ ಅನೇಕ ದೈವಗಳನ್ನ ಒಕ್ಕಲೆಬ್ಬಿಸಿ ಏಕದೈವ ಮತ್ತು ಏಕ ಸಂಸ್ಕೃತಿಯೇ ಶ್ರೇಷ್ಟವೆಂದು ಬಲಾಢ್ಯರ ಗುಂಪುಗಳು ಬಿಂಬಿಸುವ ಬಗೆಯನ್ನೂ ಎಚ್ಚರದಿಂದಲೇ ನಿಭಾಯಿಸಬೇಕಾಗಿದೆ."ಬದುಕಿ ಉಳಿಯುವುದೇ ದೊಡ್ಡ ಸಾಧನೆಯಲ್ಲ ಬದುಕಿ ಉಳಿಯುವ ಅನೇಕ ರೀತಿಗಳಿವೆ ಆದರೆ ಎಲ್ಲಾ ತರದ ಬದುಕು ನಮ್ಮ ಗೌರವ ಹಾಗೂ ಹೆಮ್ಮೆಗೆ ಅರ್ಹವಲ್ಲ ಒಬ್ಬ ವ್ಯಕ್ತಿಯಾಗಲಿ ಅಥವಾ ಒಂದು ಸಮಾಜವಾಗಲಿ ಸುಮ್ಮನೆ ಜೀವಂತವಾಗಿ ಉಳಿಯುವುದಕ್ಕು ಘನತೆ ಗೌರವದಿಂದ ಬಾಳಿ ಬದುಕುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ" ಎಂದ ಅಂಬೇಡ್ಕರರ ಜೀವಪರ ನಿಲುವೇ ಅನೇಕರ ದಾರಿಯಾಗಬೇಕಿದೆ.ಇಲ್ಲಿ ಅಸ್ಪೃಷ್ಯತೆಯ ಅರಿವು ಅನೇಕರಿಗಾಗುತ್ತಿದೆ.ಇದು ಅವರಲ್ಲಿ ಕರುಣೆ,ಪ್ರೀತಿಯ ಹುಟ್ಟಿಗೆ ಕಾರಣೂ ಆಗಿದೆ.ಆದರೆ ಅಸ್ಪೃಷ್ಯರ ಅನುಭವ ಅದು ವಿವರಗಳ ಆಚೆಗೂ ನಿಲ್ಲ ಬಹುದಾದ ನೋವು,ಸಂಕಟ.ಇಲ್ಲಿ ಅಸ್ಪೃಷ್ಯತೆಯ ಜೊತೆಗಿನ ಹೊಂದಾಣಿಕೆ ಹೊರ ರೂಪಿಯಾಗಿ ವಿಸ್ತಾರವಾದಂತೆ ಕಂಡರೂ ಒಳಗಿನ ತಾರತಮ್ಯದ ಅಂತರವೂ ಅಷ್ಟೇ ಬೆಚ್ಚಿ ಬೀಳಿಸುವಷ್ಟು ಬೆಳೆಯುತ್ತಿದೆ.

ಇಲ್ಲಿ ತಳವರ್ಗಗಳೇ ಅಸ್ಪೃಷ್ಯ ಕುಲಗಳೆಡೆಗೆ ತೋರುವ ಒಳ ಒಳಗಿನ ಅನಾದಾರಗಳ ಸ್ವರೂಪವೇ ನಮನಾರ್ಹ.ಆತ್ಮ ಗೌರವ ತೋರದ ಈ ಕರುಳ ಬಳ್ಳಿಗಳ ಎದರೂ ಈಗ ಅಸ್ಪೃಷ್ಯರು ಶಿಕ್ಷಣ ಎಂಬ ದಿವ್ಯಾಸ್ತ್ರದ ಮೂಲಕವೇ ತಲೆ ಎತ್ತಿ ನಿಲ್ಲಬೇಕಿದೆ.ಮನುಷ್ಯತ್ವ ತೋರದ ನೆಲೆಗಳು ಯಾವುದಾದರೇನು ಅವನ್ನ ದಾಟಲು ಅವರೇ ತೋರಿದ ಹಾಯಿ ಹಿಡಿದು ಆತ್ಮಗೌರವದ ದಡ ಕಾಣಬೇಕಿದೆ.ಅಂಬೇಡ್ಕರ್ ಎಂದಿಗೂ ಧರ್ಮವಿರೋಧಿಯಲ್ಲ ಜಾತಿ ತಾರತಮ್ಯ ಸೃಷ್ಟಿಸುವ ಮನಸುಗಳ ವಿರೋಧಿ ಎಂದು ಹೊರಗಿಡುವವರಿಗೆ ಸದಾ ತಿಳಿಸಿ ಹೇಳಬೇಕಿದೆ.

## ನಾನೆನ್ನುವುದು ಬರೀ ಮಾಯೆ



ನಿನ್ನ ಶಪಿಸುವ ಮುನ್ನ ನನ್ನ ನಾ
ಶಪಿಸಿಕೊಂಡಿದ್ದರೆ
ಶಮಂತಕಮಣಿಯಾಗುತ್ತಿದ್ದೆ

ನಿನ್ನ ಕೋಸುವ ಹೊತ್ತು ನನ್ನ ನಾ
ಕೋಸಿಕೊಂಡಿದ್ದರೆ ಕೊಹಿನೂರ್
ವಜ್ರವಾಗುತ್ತಿದ್ದೆ


ನನ್ನ ಗೆಲುವಿನ ದರ್ಪಣದಲಿ
ನೀನು ಪ್ರತಿಫಲಿಸಿದ್ದರೆ ನಾ
ಧನ್ಯನಾಗುತ್ತಿದ್ದೆ

ನನ್ನ ಸಾಧನೆಗಳ ಹೆಜ್ಜೆಗುರುತುಗಳು
ನಿನ್ನ ಮರಳಿನೆದೆಯಲಿ ಮೂಡಿರಲು
ನಾ ಸಾರ್ಥಕ್ಯ ಮೆರೆಯುತ್ತಿದ್ದೆ

ಸೋಲುಗಳ ನಿನಗೆ ಕೊಟ್ಟೆ,
ಗೆಲುವುಗಳ ಹೆಗಲಿಗಿಟ್ಟೆ
ಸೋಲು ಗೆಲುವುಗಳು
ನೀನು ಸೃಜಿಸಿದ ಹಗಲು
ರಾತ್ರಿಗಳು ಎನ್ನುವುದದನು
ಮರೆತುಬಿಟ್ಟೆ

ನನ್ನ ರಟ್ಟೆ ಬಲವ ನಂಬಿದೆ, ನಿನ್ನ
ಒಲವಿಗೆ ಎರವಾದೆ
ನನ್ನ ಎದೆಯ ಛಲವ ಲಂಬಿಸಿದೆ,
ಬಾಳಿನ ಚೆಂದದ ಘಳಿಗೆಗಳಿಗೆ ನಾ
ಹೊರತಾದೆ

ನಾನೆನ್ನುವುದು ಬರೀ ಮಾಯೆ,
ನೀ ನನ್ನೊಳಗಿದ್ದು ನಡೆಸಿದಂತೆ ನಾ
ಪೊರೆಯೆ
ಜೀವನ ದರ್ಶನದ ಈ ಜ್ಞಾನೋದಯ
ಯೌವನದ ಹೊಸ್ತಿಲಲಿ
ಸಂಭವಿಸೆ ಅವನೆ
ಬುದ್ಧ, ಬಸವ, ಅಂಬೇಡ್ಕರ
ಜೀವನದ ಅಂತಿಮ ಕ್ಷಣದಲಿ
ಕಾಡೆ ಅವನೆ ಮುಸಲೋನಿ,
ಸ್ಟಾಲಿನ್, ಹಿಟ್ಲರ



ಎನ್. ಸಿ. ಶಿವಪ್ರಕಾಶ್
ಮಸ್ಕತ್, ಒಮಾನ್

# ಸಮಸ್ಯೆಗಳ ಎದುರು ಈಜಿ ತಾರೆಯಾದ ಮಿರ್ಜಾ

● ಮಲ್ಲಿಕಾರ್ಜುನ ಹಿರೇಮಠ್

ಸಾನಿಯಾ ಮಿರ್ಜಾ ಆರಂಭಿಕ ದಿನಗಳಲ್ಲಿ ಎದುರಿಸಿದ ಸವಾಲುಗಳು ಒಂದೆರಡಲ್ಲ ಹಲವಾರು ಸಾಧನೆಗಳನ್ನು ಮಾಡಿದರು ಆಕೆಯ ಸಾಧನೆಗೂ ಮೀರಿ ಬಂದ ಸವಾಲುಗಳು ಇವೆಯಲ್ಲ ಅವು ಆಕೆಯ ವೃತ್ತಿಬದುಕನ್ನು ಇನ್ನಷ್ಟು ಕಲ್ಲಾಗಿ ಮಾಡಿತ್ತು ಹಾಗಾಗಿಯೇ ಆಕೆ ಹಲವರು ಸಾಧನೆಗಳನ್ನು ಮಾಡುತ್ತಲೇ ಮೆಟ್ಟಿಲುಗಳನ್ನು ಹತ್ತುತ್ತಲೇ ಟೆನಿಸ್‌ನಲ್ಲಿ ತಾರೆಯಾಗಿ ಮಿಂಚಿದರು

'ಸಾನಿಯಾ ಯಾವಾಗಲೂ ವೈರುಧ್ಯಗಳನ್ನು ಎದುರಿಸುತ್ತಲೇ ಬೆಳೆದವರು. ತಮ್ಮ ಏಕಾಗ್ರತೆ, ಆತ್ಮ ವಿಶ್ವಾಸ ಮತ್ತು ಆತ್ಮಗೌರವವನ್ನು ಎಂದೂ ಬಿಟ್ಟುಕೊಟ್ಟವರಲ್ಲ. ಭಾರತದ ಕ್ರೀಡೆಗೆ ಹೊಸದಿಕ್ಕು ತೋರಿಸುವಲ್ಲಿ ಆಕೆಯದ್ದು ಪ್ರಮುಖ ಪಾತ್ರ' ಎಂದು ಸಾನಿಯಾ ಆತ್ಮಚರಿತ್ರೆ 'ಏಸ್ ಅಗೇನ್‌ಸ್ಟ್ ಆಡ್ಸ್' ಕೃತಿಯ ಬೆನ್ನುಡಿಯಲ್ಲಿ ದಿಗ್ಗಜ ಮಹೇಶ್ ಭೂಪತಿ ಬರೆದಿರುವುದು ಅಕ್ಷರಶಃ ದಿಟವಾದದ್ದು.

ಇಂತ ಸಾನಿಯಾ ಮಿರ್ಜಾ ತಮ್ಮ ನಿವೃತ್ತಿ ಘೋಷಿಸಿದಾಗ ಸಹಜವಾಗಿಯೇ ಕೆಲವರಿಗೆ ಅಚ್ಚರಿಯೂ ಕಾದಿತ್ತು ಅದರಲ್ಲೂ ಆಸ್ಟ್ರೇಯನ್ ಓಪನ್‌ನ ಮಹಿಲೆಯರ ಡಬಲ್ಸ್‌ನಲ್ಲಿ ಭಾಗವಹಿಸಿದ ಸಾನಿಯಾ ಮಿರ್ಜಾ ಮೊದಲ ಸುತ್ತಿನಲ್ಲಿಯೇ ಸೋಲು ಅನುಭವಿಸಿದರು. ಈ ಸೋಲಿನ ಬಳಿಕ ಸಾನಿಯಾ ಮಿರ್ಜಾ ವೃತ್ತಿ ಜೀವನಕ್ಕೆ ವಿದಾಯ ಹೇಳುವ ಬಗ್ಗೆ ಮಾತನಾಡಿದರು. 2022ರ ಟೆನಿಸ್ ಋತು ತನ್ನ ಕೊನೇಯ ಋತುವಾಗಿರಲಿದೆ. ಈ ಋತುವನ್ನು ಸಂಪೂರ್ಣಗೊಳಿಸಿದ ಬಳಿಕ ನಿವೃತ್ತರಾಗುವುದಾಗಿ ಸಾನಿಯಾ ಮಿರ್ಜಾ ತಿಳಿಸಿದ್ದಾರೆ.

ಮಿರ್ಜಾ ಅವರು 2003 ರಲ್ಲಿ ತಮ್ಮ ಹಿರಿಯ ಚೊಚ್ಚಲ ಪಂದ್ಯವನ್ನು ಮಾಡಿದರು ಮತ್ತು ಭಾರತದಿಂದ ಅತ್ಯುನ್ನತ ಶ್ರೇಯಾಂಕದ ಮಹಿಳಾ ಸಿಂಗಲ್ಸ್ ಆಟಗಾರ್ತಿ ಎಂಬ ದಾಖಲೆಯನ್ನು ಹೊಂದಿದ್ದಾರೆ  ಅವರು 2013 ರಲ್ಲಿ ಸಿಂಗಲ್ಸ್‌ನಿಂದ ನಿವೃತ್ತಿ ಹೊಂದಿದ್ದರು ಮತ್ತು ಮಾರ್ಟಿನಾ ಹಿಂಗಿಸ್, ವಿಕ್ಟೋರಿಯಾ ಅಜರೆಂಕಾ, ಸ್ವೆಟ್ಲಾನಾ ಕುಜ್ನೆಟ್ಸೊವಾ ಮತ್ತು ದಿನರಾ ಸಫಿನಾ ಅವರಂತಹ ಹೆಸರಾಂತ ಆಟಗಾರರ ವಿರುದ್ಧ ತಮ್ಮ 10 ವರ್ಷಗಳ ವೃತ್ತಿಜೀವನದಲ್ಲಿ ಗಮನಾರ್ಹ ವಿಜಯಗಳನ್ನು ದಾಖಲಿಸಿದ್ದಾರೆ. ಗಾಯದ ಸಮಸ್ಯೆಗಳು ಅವರ ಸಿಂಗಲ್ಸ್ ಅವಧಿಯನ್ನು ಮೊಟಕುಗೊಳಿಸಿದರೆ, ಮಿರ್ಜಾ ಡಬಲ್ಸ್‌ನಲ್ಲಿ ಪರಿಣತಿ ಪಡೆದರು ಮತ್ತು ವಿಂಬಲ್ಡನ್ ಮತ್ತು ಗಖ ಓಪನ್‌ನಲ್ಲಿ (ಎರಡೂ 2015 ರಲ್ಲಿ), ಹಾಗೆಯೇ ಆಸ್ಟ್ರೇಲಿಯನ್ ಓಪನ್ (2016) ಮಹಿಳೆಯರ ಡಬಲ್ಸ್‌ನಲ್ಲಿ ಹಿಂಗಿಸ್ ಜೊತೆಗೆ ಗೆದ್ದರು. ಅವರು ಮೂರು ಮಿಶ್ರ ಡಬಲ್ಸ್ ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿಗಳನ್ನು ಗೆದ್ದರು, ಭಾರತೀಯ ಟೆನಿಸ್ ಇತಿಹಾಸದಲ್ಲಿ ಹೆಚ್ಚು ಅಲಂಕರಿಸಿದ ಆಟಗಾರ್ತಿಯಾಗಿದ್ದಾರೆ



ಸಾನಿಯಾ ಮಿರ್ಜಾ ತಮ್ಮ 6ನೇ ವಯಸ್ಸಿನಿಂದ ಟೆನಿಸ್ ಆಡಲು ಆರಂಭಿಸಿದ್ದರು. 2003ರಲ್ಲಿ ವೃತ್ತಿಪರ ಟೆನಿಸ್ ಆಟಗಾರ್ತಿಯಾಗಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡರು. ಅದಾದ ಬಳಿಕ ಭಾರತೀಯ ಟೆನ್ನಿಸ್ ಲೋಕದ ಸೂಪರ್‌ಸ್ಟಾರ್ ಆಗಿ ಮಿಂಚಿದರು ಸಾನಿಯಾ ಮಿರ್ಜಾ. ಹೈದರಾಬಾದ್ ಮೂಲದ  ಈ ಆಟಗಾರ್ತಿ ಭಾರತದ ಪರವಾಗಿ ಅನೇಕ ಗ್ರ್ಯಾಂಡ್ ಸ್ಲ್ಯಾಮ್‌ಗಳಲ್ಲಿ ಭಾಗಿಯಾಗಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಸಾನಿಯಾ ಮಿರ್ಜಾ ಅವರ ಈ ಸಾಧನೆಯಿಂದಾಗಿ ಕೇವಲ ಟೆನಿಸ್ ಲೋಕದ ಸೂಪರ್ ಸ್ಟಾರ್ ಆಗಿ ಮಾತ್ರವೇ ಮೆರೆಯಲಿಲ್ಲ. ದೇಶದ ಕ್ರೀಡಾ ಐಕಾನ್ ಆಗಿ ಸಾನಿಯಾ ಮನೆ ಮಾತಾದರು. 2009ರಲ್ಲಿ ಮೊದಲ ಗ್ರ್ಯಾಂಡ್‌ಸ್ಲ್ಯಾಮ್ ವಿಜಯ: ಸಾನಿಯಾ ಮಿರ್ಜಾ ಮೊದಲ ಬಾರಿಗೆ ಗ್ರ್ಯಾಂಡ್‌ಸ್ಲ್ಯಾಮ್ ಪ್ರಶಸ್ತಿ ಗೆದ್ದುಕೊಂಡಿದ್ದು 2009ರಲ್ಲಿ. ಆಸ್ಟ್ರೇಲಿಯನ್ ಓಪನ್‌ನ ಮಿಶ್ರ ಡಬಲ್ಸ್ ವಿಭಾಗದಲ್ಲಿ ಮಹೇಶ್ ಭೂಪತಿ ಜೊತೆಗೆ ಆಡಿದ ಸಾನಿಯಾ ಪ್ರಶಸ್ತಿ ಗೆದ್ದುಕೊಂಡಿದ್ದರು.

2012ರ ಫ್ರೆಂಚ್ ಓಪನ್ ಮಿಶ್ರ ಡಬಲ್ಸ್: ಆಸ್ಟ್ರೇಲಿಯನ್ ಓಪನ್‌ನ ಮಿಶ್ರ ಡಬಲ್ಸ್ ಗ್ರ್ಯಾಂಡ್ಸ್ಲ್ಯಾಮ್ ಟ್ರೋಫಿಗೆ ಮುತ್ತಿಕ್ಕಿದ ಮೂರು ವರ್ಷದ ಬಳಿಕ ಫ್ರೆಂಚ್ ಓಪನ್‌ನಲ್ಲಿಯೂ ಟೈಟಲ್ ಗೆದ್ದುಕೊಂಡರು ಸಾನಿಯಾ. ಈ ಬಾರಿಯೂ ಸಾನಿಯಾಗೆ ಜೊತೆಯಾಗಿ ಮಹೇಶ್ ಭೂಪತಿಯಿದ್ದರು. ಟೀಮ್ ಇಂಡಿಯಾಗೆ ಗೆಲ್ಲುವ ನಂಬಿಕೆ ಹೆಚ್ಚಿರುವುದು ಆ ಒಬ್ಬನಿಂದಲೇ ಎಂದ ನಾಯಕ ಕೆಎಲ್ ರಾಹುಲ್ 2014ರಲ್ಲಿ ಯುಎಸ್ ಓಪನ್: ಸಾನಿಯಾ ಮಿರ್ಜಾ ತಮ್ಮ ಮೂರನೇ ಗ್ರ್ಯಾಂಡ್ ಸ್ಲ್ಯಾಮ್ ಗೆದ್ದುಕೊಂಡಿದ್ದು 2014ರಲ್ಲಿ. ಈ ಬಾರಿ ಸಾನಿಯಾಗೆ ಮಿಶ್ರ ಡಬಲ್ಸ್‌ನಲ್ಲಿ ಸಾಥ್ ನೀಡಿದ್ದು ಬ್ರೆಜಿಲ್‌ನ ಬ್ರುನೋ ಸೋಯೆರ್ಸ್. ಮಾರ್ಟಿನಾ ಹಿಂಗಿಸ್ ಜೊತೆಗೆ ಸಾಲು ಸಾಲು ಸಾಧನೆ: 2015ರಲ್ಲಿ ಸಾನಿಯಾ ಡಬಲ್ಸ್ ವಿಭಾಗದಲ್ಲಿ ಸ್ವಿಜಲ್ಯಾಂಡ್ ದಿಗ್ಗಜ ಆಟಗಾರ್ತಿ ಮಾರ್ಟಿನಾ ಹಿಂಗಿಸ್ ಅವರೊಂದಿಗೆ ಕಣಕ್ಕಿಳಿದರು. ಈ ಜೋಡಿಗೆ ಯಶಸ್ಸಿನ ಮೇಲೆ ಯಶಸ್ಸು ದೊರೆಯಿತು. ಒಂದರ ಹೊಂದೊಂದರಂತೆ ಡಬಲ್ಸ್ ಟೈಟಲ್‌ಗಳನ್ನು ಈ ಜೋಡಿ ಗೆದ್ದುಕೊಂಡಿತು. ಮೊದಲಿಗೆ 2015ರಲ್ಲಿ ವಿಂಬಲ್ಡನ್ ಡಬಲ್ಸ್ ಟೂಟಲ್ ಗೆದ್ದ ಈ ಜೋಡಿ ನಂತರ 2015ರ ಯುಎಸ್ ಓಪನ್‌ನ ಡಬಲ್ಸ್‌ನಲ್ಲಿಯೂ ಪ್ರಶಸ್ತಿ ಗಳಿಸಿದರು. ನಂತರ 2016ರ ಆಸ್ಟ್ರೇಲಿಯನ್ ಓಪನ್‌ನಲ್ಲಿಯೂ ಡಬಲ್ಸ್ ಟೈಟಲ್ ಮುಡಿಗೇರಿಸಿಕೊಂಡ ಈ ಜೋಡಿ ಹ್ಯಾಟ್ರಿಕ್ ಗ್ರ್ಯಾಂಡ್‌ಸ್ಲ್ಯಾಮ್ ಗೆದ್ದ ಸಾಧನೆ ಮಾಡಿದರು. ಸಾನಿಯಾ ಮಿರ್ಜಾ ತಮ್ಮ ವೃತ್ತಿ ಜೀವನದ ಮೊದಲಾರ್ಧದಲ್ಲಿ ಸಮರ್ಥ ಸಿಂಗಲ್ಸ್ ಆಟಗಾರ್ತಿಯಾಗಿ ಗುರುತಿಸಿಕೊಂಡಿದ್ದರು. ಆದರೆ 2013ರಲ್ಲಿ ಮೋಣಕೈ ಗಾಯಕ್ಕೆ ತುತ್ತಾದ ಸಾನಿಯಾ ಬಳಿಕ ಕೇವಲ ಡಬಲ್ಸ್ ವಿಭಾಗದತ್ತ ಗಮನಹರಿಸಿದರು. ಇದಕ್ಕೂ ಮುನ್ನ 2007ರಲ್ಲಿ ಸಾನಿಯಾ ಮಿರ್ಜಾ ಸಿಂಗಲ್ಸ್‌ನಲ್ಲಿ ತಮ್ಮ ಅತ್ಯುನ್ನತ 27ನೇ ಶ್ರೇಯಾಂಕವನ್ನು ಗಳಿಸಿದ್ದರು. ಇದು ಭಾರತೀಯ ಟೆನಿಸ್ ಆಟಗಾರರ ಪೈಕಿ ಸಿಂಗಲ್ಸ್ ವಿಭಾಗದ ಅತ್ಯುತ್ತಮ ಸಾಧನೆಯೂ ಹೌದು.

2015ರಲ್ಲಿ ಸ್ವಿಟ್ಜರ್ಲೆಂಡ್‌ನ ದಿಗ್ಗಜ ಆಟಗಾರ್ತಿ ಮಾರ್ಟಿನಾ ಹಿಂಗಿಸ್ ಅವರೊಂದಿಗೆ ವಿಂಬಲ್ಡನ್ ಡಬಲ್ಸ್ ಕಿರೀಟ ಗೆದ್ದಿದ್ದು ಅವರ ಮಹತ್ಸಾಧನೆ. ಆ ಸಂದರ್ಭದಲ್ಲಿ ಅವರು ವಿಶ್ವದ ಅಗ್ರಶ್ರೇಯಾಂಕದ ಡಬಲ್ಸ್ ಆಟಗಾರ್ತಿಯಾಗಿದ್ದರು. ಇದೇ ಜೋಡಿ ಅಮೆರಿಕ ಓಪನ್‌ನಲ್ಲಿಯೂ ಮಿಂಚಿತು. 2016ರಲ್ಲಿ ಫ್ರೆಂಚ್ ಓಪನ್ ಮಿಶ್ರ ಡಬಲ್ಸ್‌ನಲ್ಲಿ ಇವಾನ್ ದೊಡಿಗ್ ಜೊತೆಗೆ ರನ್ನರ್ಸ್ ಅಪ್ ಕೂಡ ಆದರು. ರಿಯೊ ಒಲಿಂಪಿಕ್ಸ್‌ಗೆ ತೆರಳುವ ಮುನ್ನ ಅವರನ್ನು ತೆಲಂಗಾಣದ ಪ್ರಚಾರ ರಾಯಭಾರಿಯಾಗಿ ನೇಮಕ ಮಾಡಲಾಯಿತು. ಆ ಸಂದರ್ಭದಲ್ಲಿ ಕೆಲವರು 'ಆಕೆ ಪಾಕಿಸ್ತಾನದ ಸೊಸೆ' ಎಂದು ವ್ಯಂಗ್ಯವಾಡಿದರು. ಅದಕ್ಕೆ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್, 'ಸಾನಿಯಾ ಹೈದರಾಬಾದಿನ ಮಗಳು' ಎಂದು ತಿರುಗೇಟು ಕೊಟ್ಟಿದ್ದರು.

ಹೀಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಟೀಕೆಗಳನ್ನು ಹಿಂದಿಕ್ಕುತ್ತ ಮುಗುಳ್ನಗುತ್ತ ಮುಂದೆ ಸಾಗಿದ ಸಾನಿಯಾ 2018ರಲ್ಲಿ ಗಂಡು ಮಗುವಿನ ತಾಯಿಯಾದರು. ಆದರೆ, 'ತಾಯ್ತನ ಎಂಬುದು ಹೆಣ್ಣಿನ ಜೀವನದ ಅಂತ್ಯವಲ್ಲ. ಹೊಸ ಆರಂಭ' ಎಂದು ಹೇಳಿದರು. 26 ಕೆ.ಜಿ. ತೂಕವನ್ನು ಇಳಿಸಿಕೊಂಡು 2020ರಲ್ಲಿ ಹೋಬರ್ಟ್ ಟೆನಿಸ್ ಅಂಗಣಕ್ಕೆ ಧುಮುಕಿದರು. ನಾದಿಯಾ ಕಿಚೆನೊಕ್ ಜೊತೆಗೂಡಿ ಡಬಲ್ಸ್ ಪ್ರಶಸ್ತಿ ಗೆದ್ದರು.  ಅಪಹಾಸ್ಯ ಮಾಡಿದವರಿಗೆ ಪ್ರತಿಬಾರಿ ಸಾಧನೆಯ ಮೂಲಕ ಎದುರುತ್ತರ ಕೊಡುವ ಛಲಗಾತಿ ಈಗ ಅಂಕಣದಿಂದ ಹಿಂದೆ ಸರಿಯುತ್ತಿದ್ದಾರೆ. ಒಂದು ಯುಗಾಂತ್ಯವಾಗುತ್ತಿದೆ. ಆದರೆ  ಇದು ಹೊಸ ಯುಗದ ಆರಂಭಕ್ಕೆ ನಾಂದಿ ಯಾಗಬೇಕು. ಅವರ ಛಲಭರಿತ ಜೀವನ ಪ್ರೇರಣೆಯಾಗಬೇಕು. ಸಾನಿಯಾ ಅವರಂತೆ ಸಾಧನೆ ಮಾಡಿದ ಬಹಳಷ್ಟು ಹೆಣ್ಣು ಮಕ್ಕಳಿಗೆ ಸಾಧನೆ ಮಾಡುವ ದಾರಿ ಶುರುವಾಗುವುದೇ ಅವರ ಮನೆಯಂಗಳದಿಂದ ಎಂಬುದನ್ನು ಸಾನಿಯಾ, ಪಿ.ವಿ. ಸಿಂಧು, ಸೈನಾ ನೆಹ್ವಾಲ್, ಗೀತಾ ಪೋಗಟ್ ಮತ್ತಿತರರ ಜೀವನ ತೋರಿಸಿಕೊಡುತ್ತದೆ. ಅದರೊಂದಿಗೆ ಸಮಾಜ, ಕ್ರೀಡಾ ಆಡಳಿತ ಗಳು ಕೈಜೋಡಿಸಿದರೆ ಸಾನಿಯಾ ಹಚ್ಚಿದ ದೀಪದಿಂದ ಮತ್ತಷ್ಟು ದೀಪಗಳನ್ನು ಬೆಳಗಿಸಬಹುದು.

# ಬಿಬಿಎಂಪಿ ಚುನಾವಣೆಗೆ ಮೂರು ಪಕ್ಷಗಳು ತಯಾರಿ

● ಬಾಲು ಡಿ.

ಬಿಬಿಎಂಪಿ ಚುನಾವಣೆ ಎಂದಾಕ್ಷಣ ಅದೇಕೋ ಇರುವ ಸರ್ಕಾರಗಳು ಚುನಾವನೆ ನಡೆಸಲು ಇಚ್ಚಿಸುವುದಿಲ್ಲ ಬದಲಾಗಿ ಬೆಂಗಳೂರು ಶಾಸಕರು ಕೂಡ ಅದರ ವಿರೋಧಕೂಡ. ಹೀಗಾಗಿ ಯಾವುದೇ ಸರ್ಕಾರಗಳು ಬಂದರು ಚುನಾವಣೆಗಳನ್ನು ಉದ್ದೇಶಪೂರ್ವಕವಾಗಿ ನ್ಯಾಯಾಯಲಕ್ಕೆ ಅರ್ಜಿ ಸಲ್ಲಿಸುವ ಮೂಲಕ ಮುಂದೂಡುವ ಮಸಲತ್ತು ಮಾಡುತ್ತಲೇ ಇರುತ್ತದೆ.

ಹೌದು ನಿಯಮದ ಪ್ರಕಾರ ಬಿಬಿಎಂಪಿ ಚುನಾವಣೆ ಕಳೆದ ವರ್ಷ ಸೆಪ್ಟೆಂಬರ್ 20ಕ್ಕೆ ನಡೆಯಬೇಕಿತ್ತು ಆದರೆ  ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆ ಹಾಗೂ ಬಿಬಿಎಂಪಿ  ವಿಸ್ತರಣೆ  ಸಂಬಂಧ ಮುಂದೂಡಲಾಗಿತ್ತು ಹೀಗಾಗಿ ಬಿಬಿಎಂಪಿ ಚುನಾವಣೆ ನಿಶ್ಚಿತವಾಗಿತ್ತು ಆದರೆ ಈಗ ಸುಪ್ರೀಂ ಕೋರ್ಟ್ ಶೀಘ್ರ ಚುನಾವಣೆ ನಡೆಸುವಂತೆ ಸೂಚಿಸಿದೆ ಈ ಹಿನ್ನೆಲೆಯಲ್ಲಿ ಚುನಾವಣೆ  ನಡೆಸಲು ಮೂರು ಪಕ್ಷಗಳು ಸಜ್ಜಾಗಿವೆ. ಇನ್ನೊಂದು ಕಡೆ ಬಿಬಿಎಂಪಿ ಎಲ್ಲಾ ರೀತಿಯಿಂದಲೂ ಸಿದ್ದತೆಯನ್ನು ನಡೆಸುತ್ತಿದೆ.  .ಬಿಬಿಎಂಪಿ ಚುನಾವಣೆಯನ್ನು ಮುಂದೂಡಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ಮುಖಂಡರಾದ ಎಂ.ಶಿವರಾಜು ಹಾಗೂ ಅಬ್ದುಲ್ ವಾಜಿದ್ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ವಿಭಾಗೀಯ ಪೀಠವು 1976 ಕೆಎಂಸಿ ಕಾರ್ಯೆಗೆ ತಿದ್ದುಪಡಿ ತಂದು ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದ್ದರೂ 198 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕು ಎಂದು 2020ರ ಡಿಸೆಂಬರ್ 4ರಂದು ಆದೇಶ ಮಾಡಿತ್ತು. ಈ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಡಿ.10ರಂದು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು.ಆ ಬಳಿಕ, 2020ರ ಬಿಬಿಎಂಪಿ ಕಾಯ್ದೆಯನ್ನು ಸರ್ಕಾರವು ವಿಧಾನ ಮಂಡಲದಲ್ಲಿ ಅಂಗೀಕರಿಸಿ, ಜಾರಿಗೊಳಿಸಿತ್ತು. ಪಾಲಿಕೆಯ ಆಡಳಿತವು 2021ರ ಜ. 11ರಿಂದ ಬಿಬಿಎಂಪಿ ಕಾಯ್ದೆ ಪ್ರಕಾರ ನಡೆಯುತ್ತಿದೆ. ವರ್ಷದ ಬಳಿಕ ಮತ್ತೆ ಮರುವಿಂಗಡಣೆ2011ರ ಜನಗಣತಿ ಆಧಾರದಲ್ಲಿ ಬಿಬಿಎಂಪಿ ವಾರ್ಡ್‌ಗಳ ವಾರ್ಡ್ ಮರುವಿಂಗಡಣೆ ನಡೆಸಲು ಸರ್ಕಾರ 2020ರ ಮಾರ್ಚ್ 2ರಂದು ಕರಡು ಅಧಿಸೂಚನೆ ಪ್ರಕಟಿಸಿತ್ತು. ಈ ಕುರಿತ ಅಂತಿಮ ಅಧಿಸೂಚನೆಯನ್ನು 2020ರ ಜೂನ್ 23ರಂದು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು. ಮರುವಿಂಗಡಣೆಗೊಂಡ ವಾರ್ಡ್‌ಗಳ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗದ ಸೂಚನೆ ಮೇರೆಗೆ ಪರಿಷ್ಕರಿಸಲಾಗಿತ್ತು. ವಾರ್ಡ್‌ಗಳ ಮರುವಿಂಗಡಣೆಯಾಗಿ ವರ್ಷ ಪೂರ್ಣಗೊಂಡ ಬೆನ್ನಲ್ಲೇ ಬಿಬಿಎಂಪಿಯ ವಾರ್ಡ್‌ಗಳನ್ನು ಮತ್ತೆ ಮರುವಿಂಗಡಣೆ ಮಾಡುವ ಪ್ರಕ್ರಿಯೆ ಆರಂಭವಾಗಿತ್ತು ಆದರೆ ಅದರ  ಕಾರ್ಯಪೂರ್ಣಗೊಳ್ಳದಕಾರಣ ಈಗ ಚುನಾವಣೆಗೆ ಎಲ್ಲಾ ಸಿದ್ದತೆಗಳು ನಡೆಯುತ್ತಿವೆ ಸುಪ್ರೀಂ ಕೋರ್ಟ್ ಕೂಡ ಆದಷ್ಟು ಬೇಗ ಚುನಾವಣೆ ನಡೆಸಿ ಎಂದು ಚುನಾವಣೆ ಆಯೋಗಕ್ಕೆ ಸೂಚಿಸಿದ್ದು, ಚುನಾವಣೆ ನಡೆಸಲು ಆಯೋಗ ಸಿದ್ಧವಿದೆ. ಆದರೆ ಆಡಳಿತರೂಢ ಬಿಜೆಪಿ ಹಲವು ಕಾರಣಗಳನ್ನು ಕೊಟ್ಟು ಚುನಾವಣೆಯನ್ನು ಮುಂದೂಡುತ್ತಾ ಬಂದಿತ್ತು. ಆದರೆ ಇತ್ತೀಚೆಗೆ ಬಿಜೆಪಿ ತಮ್ಮ ರಾಜ್ಯ ಕಚೇರಿಯಲ್ಲಿ ಈ ಬಗ್ಗೆ ಕೋರ್ ಕಮಿಟಿ ಸಭೆ ನಡೆಸಿದ್ದು ಸಿದ್ಧತೆ ಮಾಡಿಕೊಳ್ಳುತ್ತಿದೆ. ಇನ್ನು ಕಾಂಗ್ರೆಸ್ ಹಾಗೂ ಜೆಡಿಎಸ್ ಪಾಲಿಕೆ ಚುನಾವಣೆ ಎದುರಿಸಲು ತುದಿಗಾಲಲ್ಲಿ ನಿಂತಿದೆ. ಇದರ ನಡುವೆ ಬಿಬಿಎಂಪಿ ಹೊಸದಾಗಿ ರೂಪಿಸಲಾಗಿರುವ ವಾರ್ಡ್‌ಗಳ ಡ್ರಾಫ್ಟ್ ಸಿದ್ಧಪಡಿಸಿದೆ. ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಬೆಂಗಳೂರನ್ನು ಮತ್ತಷ್ಟು ವಿಸ್ತಾರಗೊಳಿಸಬೇಕು ಎಂದು ಕೂಗು ಬಹಳ ಹಿಂದಿನಿಂದಲೂ ಕೇಳಿ ಬಂದಿದ್ದವು. ಇದೀಗ ಅದಕ್ಕೆ ಕಾಲ ಕೂಡಿ ಬಂದಿದ್ದು, 198 ವಾರ್ಡ್‌ಗಳಿಂದ 243 ವಾರ್ಡ್‌ಗಳಿಗೆ ಸಂಖ್ಯೆ ಏರಿಕೆಯಾಗಲಿದೆ. ಇತ್ತೀಚೆಗಷ್ಟೇ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಬಿಬಿಎಂಪಿ ಅಧಿಕಾರಿಗಳ ಸಭೆ ನಡೆಸಿ 243 ವಾರ್ಡ್‌ಗಳ ಕರುಡನ್ನು ಸಿದ್ಧಪಡಿಸಿ ಚುನಾವಣಾ ಆಯೋಗಕ್ಕೆ ಹಾಗೂ ಸರ್ಕಾರಕ್ಕೆ ಜನವರಿ 28ರ ಹೊತ್ತಿಗೆ ಸಲ್ಲಿಸಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 198 ವಾರ್ಡ್‌ಗಳು ಸದ್ಯಕ್ಕಿವೆ. ಇದನ್ನು ಮತ್ತಷ್ಟು ವಿಸ್ತರಿಸುವ ನಿಟ್ಟಿನಲ್ಲಿ 243 ವಾರ್ಡ್‌ಗಳನ್ನಾಗಿ ಮಾಡಲಿದೆ ಪಾಲಿಕೆ. ಹೀಗಾಗಿ ಈ ಬಾರಿ ಚುನಾವಣೆ ನಡೆದರೆ 243 ಕೌನ್ಸಿಲರ್‌ಗಳು ಚುನಾಯಿತಗೊಂಡು ಬರಲಿದ್ದಾರೆ. ಸದ್ಯ ಬಿಬಿಎಂಪಿ ಮುಖ್ಯ ಕಚೇರಿಯಲ್ಲಿ 198 ವಾರ್ಡ್ ಕೌನ್ಸಿಲರ್‌ಗಳು ಸೇರಿದಂತೆ 28 ಶಾಸಕರು, 6 ಸಂಸದರು ಹಾಗೂ 75 ಅಧಿಕಾರಿ ವರ್ಗಗಳಿಗೆ ಮಾತ್ರ ಆಸನದ ವ್ಯವಸ್ಥೆ ಇದೆ. 243 ವಾರ್ಡ್ ರೂಪುಗೊಂಡರೆ ಕೌನ್ಸಿಲ್ ಕಟ್ಟಡದಲ್ಲಿ ಅಷ್ಟೂ ಮಂದಿಗೆ ಬೇಕಾಗಿರುವ ಆಸನದ ವ್ಯವಸ್ಥೆ ಹಾಗೂ ಕೊಠಡಿಗಳ ಕೊರತೆ ಎದುರಾಗಲಿದೆ. ಇದನ್ನು ಪರಿಹರಿಸುವ ನಿಟ್ಟಿನಲ್ಲೂ ಬಿಬಿಎಂಪಿ ಕೆಲಸ ಮಾಡುತ್ತಿದೆ. ಹೊಸ ವಾರ್ಡ್ ಕರುಡಿನ ಅನ್ವಯ ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ, ಕೆಆರ್ ಪುರಂ, ದಾಸರಹಳ್ಳಿ ಹಾಗೂ ಮಹಾದೇವಪುರ ವಲಯಗಳಿಗೆ ಹೆಚ್ಚಿನ ವಾರ್ಡ್‌ಗಳು ಸೇರಿಕೊಳ್ಳಲಿದೆ. ಏಕೆಂದರೆ ಈ ಐದು ವಲಯಗಳು ಕೂಡ ಬೆಂಗಳೂರು ನಗರ ಜಿಲ್ಲೆಗಳಿಗೆ ಹೊಂದಿಕೊಂಡಿದ್ದು, ನಗರ ಜಿಲ್ಲೆಗಳಿಗೆ ಸೇರಿಕೊಂಡಿರುವ ಕೆಲವು ಹಳ್ಳಿಗಳು ಈ ವೇಳೆ ಬಿಬಿಎಂಪಿ ವ್ಯಾಪ್ತಿಗೆ ಸೇರಿಕೊಳ್ಳಲಿದೆ. ಇದೇ ವೇಳೆ ನಗರದ ಬಸವನಗುಡಿ, ಗಾಂಧಿನಗರ, ಗೋಂವಿದರಾಜನಗರ, ಹೆಬ್ಬಾಳ, ಸರ್ವಜ್ಞನಗರ ಮತ್ತು ಶಾಂತಿನಗರ ತಲಾ ಒಂದೊಂದು ಹೊಸ ವಾರ್ಡ್‌ಗಳು ಪಡೆದುಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಈ ಭಾಗದಲ್ಲಿ ಬಿಜೆಪಿ ಶಾಸಕರೇ ಹೆಚ್ಚಿದ್ದು ಆಡಳಿತರೂಢ ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಲೆಕ್ಕಾಚಾರ ಹಾಕಿಕೊಂಡಿತ್ತು. ಕಳೆದ ಅಧಿಕಾರವಧಿಯಲ್ಲಿ ಬಿಜೆಪಿಯೇ ಪಾಲಿಕೆಯ ಆಡಳಿತದ ಚುಕ್ಕಾಣಿ ಹಿಡಿದಿದ್ದು ಬಿಜೆಪಿಯಿಂದ ಗೌತಮ್ ಕುಮಾರ್ ಮೇಯರ್ ಆಗಿದ್ದರು. ಕರೋನಾ ಹಾಗೂ ಬಿಜೆಪಿಯ ರಾಜಕೀಯ ಲೆಕ್ಕಾಚಾರದ ಕಾರಣಗಳಿಗೆ ಮುಂದೂಡಲ್ಪಟ್ಟಿದ್ದ ಪಾಲಿಕೆ ಚುನಾವಣೆ ಇದೀಗ ಆಗಸ್ಟ್ ಹೊತ್ತಿಗೆ ನಡೆಯುವ ಸಂಭವ ದಟ್ಟವಾಗಿದೆ. ಈಗಾಗಲೇ ಎಲ್ಲಾ ಪಕ್ಷಗಳು ಆಂತರಿಕವಾಗಿ ಸಿದ್ಧತೆಗಳು ಶುರು ಮಾಡಿದ್ದು, ದಿನಾಂಕ ಘೋಷಣೆಯಾದ ಬೆನ್ನಲ್ಲೇ ಬಾಹ್ಯವಾಗಿ ಚುನಾವಣೆ ಚಟುವಟಿಕೆಗಳು ತಾರಕಕ್ಕೇರಲಿದೆ.

# ಭೂದಾನ ಚಿತ್ರದಲ್ಲಿ ರಾಜಕುಮಾರ್ ತಂದೆ, ಉದಯಕುಮಾರ್ ಮತ್ತು ಕಲ್ಯಾಣಕುಮಾರ್ ಮಕ್ಕಳು

ತೆರೆಮರೆ

**ಕನ್ನಡ ಚಿತ್ರ ಇತಿಹಾಸ**

ಭಾಗ–63



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ರಾಜಕುಮಾರ್, ಕಲ್ಯಾಣಕುಮಾರ್ ಹಾಗೂ ಉದಯಕುಮಾರ್ ಮೂರೂ ಮಂದಿ ನಾಯಕ ನಟರು ಪೂರ್ಣ ಪ್ರಮಾಣದಲ್ಲಿ ಒಂದೇ ಚಿತ್ರದಲ್ಲಿ ಅಭಿನಯಿಸಿದ 'ಭೂದಾನ' ಕಪ್ಪು–ಬಿಳುಪು ಸಾಮಾಜಿಕ ಕಥಾ ಹಂದರದ ಚಿತ್ರ ಅನಂತಲಕ್ಷ್ಮೀ ಪಿಕ್ಚರ್ ಲಾಂಛನದಲ್ಲಿ 1962ರಲ್ಲಿ ತೆರೆಕಂಡಿತು. ಪಿ.ಎನ್.ಗೋಪಾಲಕೃಷ್ಣ ಹಾಗೂ ಜಿ.ವಿ.ಅಯ್ಯರ್ ಜಂಟಿಯಾಗಿ ನಿರ್ಮಾಣ ಮಾಡಿದ ಈ ಚಿತ್ರವನ್ನು ಮೊದಲ ಬಾರಿಗೆ ಜಿ.ವಿ.ಅಯ್ಯರ್ ನಿರ್ದೇಶಿಸಿದರಲ್ಲದೆ, ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಗೀತೆಗಳನ್ನು ರಚಿಸಿದರು. ಎಸ್.ಕೆ.ಭಗವಾನ್ ಹಾಗೂ ರಾಮಚಂದ್ರ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು.


ಉಳಿದಂತೆ ಅಶ್ವತ್, ನರಸಿಂಹರಾಜು, ಬಾಲಕೃಷ್ಣ,



ಹೆಚ್.ರಾಮಚಂದ್ರಶಾಸ್ತ್ರಿ, ಲೀಲಾವತಿ, ಆದವಾನಿ ಲಕ್ಷ್ಮಿದೇವಿ ಮುಂತಾದವರು ಅಭಿನಯಿಸಿದರು. ಜಿ.ಕೆ.ವೆಂಕಟೇಶ್ ಸಂಗೀತ ನೀಡಿದಚಿತ್ರದಲ್ಲಿ ಪುರಂದರದಾಸರ 'ಭಾಗ್ಯಾದ ಲಕ್ಷ್ಮಿ ಬಾರಮ್ಮ' ಜನಪ್ರಿಯ ಕೃತಿಯೂ ಸೇರಿದಂತೆ 6 ಹಾಡುಗಳನ್ನು ಅಳವಡಿಸಿದ್ದು, ಪಿ.ಬಿ.ಶ್ರೀನಿವಾಸ್, ಎಸ್. ಜಾನಕಿ, ಜಿ.ಕೆ.ವೆಂಕಟೇಶ್, ರಾಧಾಜಯಲಕ್ಷ್ಮಿ ಗೀತೆಗಳನ್ನು ಹಾಡಿದ್ದಾರೆ. ಎನ್.ಸಿ.ರಾಜನ್ ಸಂಕಲನ, ಬಿ.ದೊರೈರಾಜ್ ಛಾಯಾಗ್ರಹಣ ಇರುವ ಚಿತ್ರ ಮದರಾಸಿನ ಮೆಜೆಸ್ಟಿಕ್ ಸ್ಟುಡಿಯೊದಲ್ಲಿ ಚಿತ್ರೀಕರಣವಾಯಿತು. ಚಿತ್ರ ನಿರ್ಮಾಣಕಾರ್ಯದಲ್ಲಿ ಬಿ.ಆರ್.ಪಂತುಲು ಅವರು ಸಾಕಷ್ಟು ನೆರವು ನೀಡಿದ್ದು ಅವರಿಗೆ ಚಿತ್ರದ ಆರಂಭದಲ್ಲಿ ಆಭಾರ ಮನ್ನಣೆ ಸಲ್ಲಿಸಲಾಗಿದೆ.




ವಿನೋಬಾ ಭಾವೆಯವರ ಭೂದಾನ ಚಳವಳಿಯಿಂದ ಪ್ರೇರಣೆಗೊಂಡು ತಯಾರಿಸಿದ ಚಿತ್ರಇದಾಗಿದ್ದು, ಕಥೆಗಾರ ಜಿ.ವಿ.ಅಯ್ಯರ್‌ಅವರಿಗೆ ವಿನೋಬಾ ಭಾವೆಅವರ ಚಳವಳಿ ಹಾಗೂ ಶಿವರಾಮ ಕಾರಂತರ 'ಚೋಮನದುಡಿ' ಕಾದಂಬರಿ ಕಥೆ ರಚಿಸಲು ಪ್ರೇರಣೆ ನಿಡಿತು. ನಾಯಕ ನಟರಾಗಿ ಜನಪ್ರಿಯರಾಗಿದ್ದ ರಾಜಕುಮಾರ್ ಈ ಚಿತ್ರ'ದಲ್ಲಿ ತಂದೆಯಾಗಿ ಅಭಿನಯಿಸಿದ್ದು, ಉದಯಕುಮಾರ್ ಮತ್ತು ಕಲ್ಯಾಣಕುಮಾರ್ ಮಕ್ಕಳಾಗಿ ಅಭಿನಯಿಸಿರುವುದು ಒಂದು ವಿಶೇಷ. ಇದೇರೀತಿ ಮಹಬೂಬ್ ಅವರ 'ಮದರ್‌ಇಂಡಿಯಾ' ಹಿಂದಿ ಚಿತ್ರದಲ್ಲಿ ಅಂದಿನ ಖ್ಯಾತತಾರೆ ನರ್ಗಿಸ್ ಅವರು ರಾಜೇಂದ್ರಕುಮಾರ್ ಮತ್ತು ಸುನಿಲ್‌ದತ್ ಅವರ ತಾಯಿಯ ಪಾತ್ರದಲ್ಲಿ ಅಭಿನಯಿಸಿದ್ದರು. 'ಭೂದಾನ' ತಮಿಳಿನಲ್ಲಿ 'ಪಳನಿ' ಹೆಸರಿನಿಂದ ರೀಮೇಕ್ ಆಯಿತು. ಶಿವಾಜಿ ಗಣೇಶನ್, ಎಸ್.ಎಸ್.ರಾಜೇಂದ್ರನ್ ಮತ್ತು ಶ್ರೀರಾಮ್ ಕುಮಾರತ್ರಯರ ಪಾತ್ರಗಳಲ್ಲಿದ್ದರು.



ಲಕ್ಷ್ಮೀಪತಿ ಶ್ರೀಮಂತ ಜಮೀನ್ದಾರ ಮಹಾಸ್ವಾರ್ಥಿ. ಈತನ ಬಳಿ ದಾಸಣ್ಣ ಹಾಗೂ ಪುತ್ರರಾದರಾಮ ಮತ್ತು ಲಕ್ಷ್ಮಣ ಜೀತದಾಳುಗಳಾಗಿ ದುಡಿಯುತ್ತಿರುತ್ತಾರೆ.ಇವರಿಗೆ ಸ್ವಂತ ಭೂಮಿ ಹೊಂದುವ ಆಸೆ. ತುಂಡು ಭೂಮಿ ನೀಡುವಂತೆದಾಸಣ್ಣ ಮಾಲೀಕರಲ್ಲಿ ಮನವಿ ಮಾಡುತ್ತಾನೆ. ಜಮೀನ್ದಾರ ಹುಸಿ ಭರವಸೆ ನೀಡುತ್ತಾನೆ. ಭೂದಾನ ಚಳವಳಿ ಆರಂಭಗೊಂಡು ಕಾರ್ಯಕರ್ತರು ಹಳ್ಳಿಗೆ ಬಂದಾಗ ಲಕ್ಷ್ಮೀಪತಿ ಐದು ಎಕರೆ ಭೂಮಿದಾನ ನೀಡುತ್ತಾನೆ. ಕಾರ್ಯಕರ್ತರು ಈ ಭೂಮಿಯನ್ನು ದಾಸಣ್ಣನಿಗೆ ನೀಡುತ್ತಾರೆ. ದಾಸಣ್ಣ ಹಾಗೂ ಮಕ್ಕಳು ಶ್ರಮವಹಿಸಿ ಈ ಭೂಮಿಯಲ್ಲಿ ಫಲವತ್ತಾದ ಬೆಳೆ ಬೆಳೆದಾಗ ಲಕ್ಷ್ಮೀಪತಿಗೆ ಅಸೂಯೆ ಉಂಟಾಗುತ್ತದೆ. ಪತ್ನಿಯ ಬಲವಂತಕ್ಕೆ ಮಣಿದು ಲಕ್ಷ್ಮೀಪತಿ ಭೂಮಿಯನ್ನು ದಾಸಣ್ಣನಿಂದ ಮರಳಿ ಪಡೆಯುತ್ತಾನೆ. ದಾಸಣ್ಣ ಹುಚ್ಚನಾಗುತ್ತಾನೆ. ರಾಮ, ಲಕ್ಷ್ಮಣರು ಮತಾಂತರಗೊಳ್ಳುತ್ತಾರೆ.

**ಕರೀಂಖಾನ್‌ಗೀತೆ ರಚಿಸಿದ ಸ್ವರ್ಣಗೌರಿ:**

ಶ್ಯಾಮಪ್ರಸಾದ್ ಮೂವೀಸ್ ಲಾಂಛನದಲ್ಲಿ ಡಿ.ಆರ್.ನಾಯ್ಡು ನಿರ್ಮಾಣ ಮಾಡಿದ ಸ್ವರ್ಣಗೌರಿಕಪ್ಪು ಬಿಳುಪು ಭಕ್ತಿಪ್ರಧಾನಚಿತ್ರ 1962ರಲ್ಲಿ ತೆರೆಕಂಡಿತು. ವೈ.ಆರ್.ಸ್ವಾಮಿ ನಿದೇಶನ ಮಾಡಿದ ಈ ಚಿತ್ರಕ್ಕಾಗಿಅವರೇಚಿತ್ರಕಥೆ ರಚಿಸಿದ್ದು, ಕಥೆ, ಸಂಭಾಷಣೆ ಹಾಗೂ ಹಾಡುಗಳನ್ನು ಸಾಹಿತಿಎಸ್.ಕೆ.ಕರೀಂಖಾನ್ ಬರೆದಿದ್ದಾರೆ. ಚಿತ್ರದಲ್ಲಿ ರಾಜಕುಮಾರ್ ಕಾಳಿಂಗನ ಪಾತ್ರ ನಿರ್ವಹಿಸಿದ್ದು, ಮಾಲಿನಿಯಾಗಿ ರಾಜಶ್ರೀ ಹಾಗೂ ಗೌರಿಯಾಗಿ ಕೃಷ್ಣಕುಮಾರಿ ಅಭಿನಯಿಸಿದ್ದಾರೆ. ತೆಲುಗು ನಟ ಸತ್ಯನಾರಾಯಣ ಶಿವನಾಗಿ ಹಾಗೂ ಸಂಧ್ಯಾ ಪಾರ್ವತಿಯಾಗಿ ನಟಿಸಿದ್ದಾರೆ. ಕೆ.ಎಸ್.ಅಶ್ವತ್ ನಾರದನಾಗಿ ನರಸಿಂಹರಾಜು (ಗಣಪತಿಯಾಗಿ ಅಭಿನಯಿಸಿದ್ದಾರೆ.ಗಣಪತಿಭಟ್, ಉದಯಕುಮಾರ್, ರಾಮಚಂದ್ರಶಾಸ್ತ್ರಿ, ಸೋರಟ್‌ಅಶ್ವತ್, ಜಯಶ್ರೀ, ರಮಾದೇವಿ, ಜಯಾ, ವಾದಿರಾಜ್ ಪಾತ್ರವರ್ಗದಲ್ಲಿದ್ದಾರೆ. ಎಂ.ವೆಂಕಟರಾಜು ಸಂಗೀತ ನಿರ್ದೇಶನ ಮಾಡಿದ್ದು, ಕರೀಂರಚನೆಯಶಿವಗುಣ ಸಂಕೀರ್ತನಾ, ನಟವರಗಂಗಾಧರಉಮಾಶಂಕರ ಮುಂತಾದ 5 ಹಾಡುಗಳನ್ನು ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಬಾಲಮುರುಳಿಕೃಷ್ಣ, ಚಿತ್ತರಂಜನ್ ಹಾಡಿದ್ದಾರೆ. ಆರ್.ಮಧುಛಾಯಾಗ್ರಹಣ, ವೇಣುಗೋಪಾಲ್ ನೃತ್ಯ ನಿರ್ದೇಶನ, ಎಸ್.ಕೃಷ್ಣ ಹಾಗೂ ಭೋಜರಾಜು ಸಂಕಲನ ಚಿತ್ರಕ್ಕಿದ್ದು, 3895 ಮೀಟರ್‌ಉದ್ದದ ಹಾಗೂ 17 ರೀಲ್ ಒಳಗೊಂಡಿತ್ತು.



## ನಿಮ್ಮ ಮಾತು

### ಮಾಹಿತಿ ಪೂರ್ಣವಾಗಿದೆ

ಕೆಂಧೂಳಿ ತುಂಬಾ ಚನ್ನಾಗಿ ಮೂಡಿ ಬರುತ್ತಿದೆ ರೆಡ್ ಸ್ಯಾಂಡಲ್ ಸ್ಮಗ್ಲಿಂಗ್ ದಂಧೆಯ ರೂವಾರಿಗಳೇ ಪೊಲೀಸರು ಎನ್ನುವ ಮುಖಪುಟದ ಸಂಚಿಕೆ ಪುಷ್ಪ ಚಿತ್ರವನ್ನು ನೆನಪಿಸುತ್ತದೆ ಇತ್ತೀಚೆಗೆ ಪೊಲೀಸರು ಕೂಡ ದರೋಡೆಕೋರರಾಗುತ್ತಿದ್ದಾರೆ ಎನ್ನುವ ಸಂಗತಿ ನಿಜಕ್ಕೂ ಆತಂಕಕಾರಿಯಾಗಿದೆ. ಹಾಗೆಯೇ ರಾಜಕೀಯ ಸುದ್ದಿಗಳು ಡಿ.ಉಮಾಪತಿ ಅವರು ಬರೆದಿರುವ ಪತ್ರಕರ್ತರ ನಿಧನ ಸುದ್ದಿ ಅತ್ಯಂತ ವಿಶಿಷ್ಟವಾಗಿದೆ.ಹಾಗೆಯೇ ಭಾಸ್ಕರ್ ರಾವ್ ಅವರ ಲೇಖನ' ಜೊತೆಗೆ ಎಲ್ಲಾ ಅಂಕಣಗಳು ಕೂಡ ಉತ್ತಮವಾಗಿವೆ.. ನಿಮ್ಮ ಮಾಹಿತಿಗಳಿಗೆ ಧನ್ಯವಾದಗಳು

● ಭೀಮಪ್ಪ ಉಳ್ಳಾಗಡ್ಡಿ ಬಸವರಾಜ್ ಬಾಗಲಕೋಟೆ

### ಸಾಂದರ್ಭಿಕ ವಿಷಯಗಳ ಚರ್ಚೆ

ಇತ್ತೀಚಿನ ಪತ್ರಿಕೆಗಳು ಬಹುಶಃ ಒಬ್ಬ ವ್ಯಕ್ತಿ ಅಥವಾ ಒಂದು ಪಕ್ಷದ ಪರವಾಗಿಯೇ ಇರುತ್ತವೆ ಆದರೆ ನಿಮ್ಮ ಪತ್ರಿಕೆಯನ್ನು ಗಮನಿಸುತ್ತಿದ್ದೇನೆ ವಿಚಾರಪೂರ್ಣವಾಗಿ ಸಾಂದರ್ಭಿಕ ವಿಷಯಗಳನ್ನಿಟ್ಟುಕೊಂಡು ಬೆಳಕು ಚೆಲ್ಲುತ್ತೀದ್ದೀರಿ. ಗ್ರಾಮೀಣ ಪ್ರದೇಶದಲ್ಲಿನ ಕೊರೊನಾ ಕುರಿತು ಯಾವ ಪತ್ರಿಕೆಗಳು ಹೆಚ್ಚು ಗಮನಿಸಲಿಲ್ಲ ನಿಮ್ಮ ಪತ್ರಿಕೆ ಗಮನಿಸಿ ಬರದಿದ್ದೀರಾ ಅಲ್ಲದೆ ಪತ್ರಕರ್ತರ ರಾಜಕೀಯ ಗೀಳು ಎನ್ನುವ ಲೇಖನ ತುಂಬಾ ಚನ್ನಾಗಿದೆ. ಒಟ್ಟಾರೆ ಪತ್ರಿಕೆಯಲ್ಲಿನ ವಿಷಯಗಳು ವಸ್ತುನಿಷ್ಟವಾಗಿವೆ ಎಂದು ಹೇಳಬಲ್ಲೆ ನಿಮ್ಮ ಪತ್ರಿಕೆಗೆ ಭವಿಷ್ಯವಿದೆ..

● ಲೋಕನಾಥ್,ಎಂ. ತುಮಕೂರು.




### ಪತ್ರಿಕೆ ಮುನ್ನಡೆಯಲಿ

ಕೆಂಧೂಳಿ ಮಹತ್ವಪೂರ್ಣ ಪತ್ರಿಕೆ ವಿಚಾರಗಳ ವಿಶ್ಲೇಷಣೆ. ಸುದ್ದಿಗಳ ಪ್ರಸ್ತುತಿ ತುಂಬಾ ಮಹತ್ವದ್ದಾಗಿದೆ ಹೀಗಾಗಿ ನಿಮ್ಮ ಪತ್ರಿಕೆ ಮುನ್ನಡೆಯಲಿ ಎಂದು ಆಶಿಸುತ್ತೇನೆ

●ಮರೀಗೌಡ.ಎಚ್.ಟಿ. ಬೆಂಗಳೂರು

### ಚನ್ನಾಗಿ ಬರುತ್ತಿದೆ

ಕೆಂಧೂಳಿ ಮತ್ತಷ್ಟು ಚನ್ನಾಗಿ ಬರುತ್ತಿದೆ ಜನವರಿ 19 ರ ಸಂಚಿಕೆ ಅತ್ಯುತ್ತಮವಾಗಿ ಮೂಡಿ ಬಂದಿದೆ ಪತ್ರಿಕೆಲ್ಲಿನ ಬಹುತೇಕ ಮಾಹಿತಿಗಳು ಚನ್ನಾಗಿವೆ.ಇನ್ನೊಂದಿಷ್ಟು ಒಳ್ಳೆಯ ರೀತಿಯಲ್ಲಿ ಬರಲಿ ಎನ್ನುವುದು ನನ್ನ ಅನಿಸಿಕೆ. ತಪ್ಪುಗಳ ಇರಬಾರದು,ಅದನ್ನು ಗಮನಿಸಿ ಕೆಲವು ಕಡೆ ಸ್ಪೆಲಿಂಗ್ ಮಿಸ್ಟೇಕು ಬರುತ್ತಿವೆ ದಯವಿಟ್ಟು ಅದನ್ನು ಸರಿ ಮಾಡಿಕೊಳ್ಳಿ.. ಧನ್ಯವಾದಗಳು

● ಈಶ್ವರ್.ಕೆ.ಟಿ ದಾವಣಗೆರೆ

### ನಿಮ್ಮ ಸಾಹಸ ಮೆಚ್ಚಬೇಕು

ಕರ್ನಾಟಕದಲ್ಲಿ ಸದ್ಯ ವಾರಪತ್ರಿಕೆಗಳು ಇಲ್ಲ ಇದ್ದರೂ ಅವುಗಳ ಕಾರ್ಯವೈಖರಿಯೇ ಬೇರೆ ಆದರೆ ನಿಮ್ಮ ಪತ್ರಿಕೆ ಒಂದು ವಿಚಾರಪೂರ್ಣವಾಗಿ ಪತ್ರಕರ್ತರಿಗೆ ಮಾದರಿಯ ರೀತಿಯಲ್ಲಿ ಬರುತ್ತಿದೆ ಎನ್ನುವುದು ನನಗೆ ಹೆಮ್ಮೆ ಯಾಕೆಂದರೆ ನಾನೂ ಒಬ್ಬ ಪತ್ರಕರ್ತರನಾಗಿ ನಿಮ್ಮ ಪತ್ರಿಕೆಯನ್ನು ಗಮನಿಸಿದಾಗ ನನಗೆ ತಿಳಿದ ಎರಡು ವಿಚಾರಗಳನ್ನು ಹೇಳುತ್ತಿದ್ದೇನೆ. ಎರಡು ಪತ್ರಿಕೆಗಳು ಹೋದ ನಂತರ ಯಾವುದೇ ಪತ್ರಿಕೆಗಳು ಇಲ್ಲ ಹೀಗಾಗಿ ಆ ಸ್ಥಾನವನ್ನು ನೀವು ತುಂಬುತ್ತೀದ್ದೀರಾ ಅನಿಸುತ್ತಿದೆ. ನಾನು ಪತ್ರಿಕೆಯಲ್ಲಿ ಇರುವ ವಿಚಾರಗಳ ಬಗ್ಗೆ ಹೇಳುವುದಿಲ್ಲ ಆದರೆ ಒಟ್ಟಾರೆಯಾಗಿ ನಿಮ್ಮ ಪತ್ರಿಕೆಯನ್ನು ಕಳೆದ ಆರೇಳು ತಿಂಗಳುಗಳಿಂದ ಗಮನಿಸುತ್ತಿದ್ದೇನೆ ತುಂಬಾ ವಿಶ್ಲೇಷಣಾತ್ಮಕವಾಗಿ ವಿಚಾರವಾಗಿ ಹಾಗೂ ಒಬ್ಬ ಪತ್ರಕರ್ತ ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೀರಾ. ಆದರೆ ನೀವು ಹೇಗೆ ಹಣಕಾಸನ್ನು ನಿರ್ವಹಿಸುತ್ತೀರಾ ಎನ್ನುವುದು ತಿಳಿಯುತ್ತಿಲ್ಲ,ಇಂದು ಪತ್ರಿಕೆ ನಡೆಸುವುದು ಸುಲಭದ ಕೆಲಸವಲ್ಲ ಇಂತ ಹೊತ್ತಿನಲ್ಲಿ ನಿಮ್ಮ ಈ ಸಾಹಸಕ್ಕೆ ಮೆಚ್ಚಲೇ ಬೇಕು..ಮುಂದುವರೆಸಿ ಯಾವುದೇ ಕಾರಣಕ್ಕೂ ನಿಲ್ಲಿಸಬೇಡಿ ಭವಿಷ್ಯವಿದೆ.

● ರಾಜೇಂದ್ರ ಕುಮಾರ್.ಎಂ ಹುಬ್ಬಳ್ಳಿ

**ಬೇಕಾಗಿದ್ದಾರೆ :** 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109

**KENDHOOLI** *Kannada Weekly*
ಸಂಪುಟ - 02 । ಸಂಚಿಕೆ - 63 । ಪುಟ - 16 । ರೂ. 16/- । ಜನವರಿ 27 ರಿಂದ ಫೆಬ್ರವರಿ 2, 2022
kendhooli.com/e-paper/
RNI no KARKAN/2018/76310

# ಅಪ್ಪು ಜೇಮ್ಸ್ ಚಿತ್ರಕ್ಕೆ ಶಿವಣ್ಣ, ರಾಘಣ್ಣ ಸಾಥ್

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಿಧನವಾದ ನಂತರ ಅವರ ಕೊನೆಯ ಚಿತ್ರ ಜೇಮ್ಸ್ ಬಗ್ಗೆ ಬಹಳಷ್ಟು ಕುತೂಹಲವಿಟ್ಟುಕೊಂಡಿದ್ದಾರೆ ಅವರ ಅಭಿಮಾನಿಗಳು ಈ ಚಿತ್ರ ಬಿಡುಗಡೆಗೆ ಕಾತುರದಿಮದ ಕಾಯಿತ್ತಿದ್ದಾರೆ ಹಾಗಾಗಿ ಬಹುತೇಕ ಮಾರ್ಚ ತಿಂಗಳು ಅವರ ಹುಟ್ಟುಹಬ್ಬದ ದಿನವೇ ರಿಲೀಜ್ ಮಾಡಲು ಸಿದ್ದತೆ ಮಾಡಿಕೊಳ್ಳಲಾಗಿದೆ


ಸದ್ಯ ಶೂಟಿಂಗ್ ಮುಗಿಸಿದ್ದಾಗಿ 'ಜೇಮ್ಸ್' ಚಿತ್ರತಂಡ ಘೋಷಿಸಿದೆ. ಕುಂಬಳಕಾಯಿ ಒಡೆದಿರೋ ಚಿತ್ರಗಳನ್ನು ಚಿತ್ರತಂಡ ಶೇರ್ ಮಾಡಿದೆ. ಅದರ ಜೊತೆಗೆ ಚಿತ್ರ ತಂಡದಿಂದ ಮತ್ತೊಂದು ಗುಡ್ ನ್ಯೂಸ್ ಸಿಕ್ಕಿದೆ. ಅಪ್ಪುಗೆ ಸಾಥ್ ನೀಡಿದ ಶಿವಣ್ಣ-ರಾಘಣ್ಣ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಹಾಗೂ ರಾಘವೇಂದ್ರ ರಾಜ್ ಕುಮಾರ್ ಇಬ್ಬರೂ ಈ ಸಿನಿಮಾದಲ್ಲಿ ನಟಿಸ್ತಿದ್ದಾರೆ ಎನ್ನಲಾಗ್ತಿದೆ. ಈಗಾಗಲೇ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ವೈರಲ್ ಆಗಿದೆ. ಈ ಸುದ್ದಿ ನಿಜವಾಗಲಪ್ಪ ಅಂತ ಅಭಿಮಾನಿಗಳೂ ಕೂಡ ಪ್ರಾರ್ಥಿಸ್ತಿದ್ದಾರೆ.



ಇನ್ನು ಖಾಸಗಿ ರೆಸಾರ್ಟ್‌ವೊಂದರಲ್ಲಿ 'ಜೇಮ್ಸ್' ಕೊನೆಯ ದಿನದ ಶೂಟಿಂಗ್ ಮುಗಿದಿದೆ. ಸೆಟ್‌ನಲ್ಲಿ ಶಿವರಾಜ್‌ಕುಮಾರ್ ಹಾಗೂ ರಾಘವೇಂದ್ರ ರಾಜ್‌ಕುಮಾರ್ ಇರೋ ಫೋಟೋಗಳು ಶೇರ್ ಆಗ್ತಿವೆ. ಜೊತೆಗೆ ರಾಘವೇಂದ್ರ ರಾಜ್ ಕುಮಾರ್ ಪುತ್ರ ಯುವ ರಾಜ್‌ಕುಮಾರ್, ರಾಮ್‌ಕುಮಾರ್ ಪುತ್ರ ಧೀರೇನ್ ಹಾಜರಿದ್ದರು. ಪುನೀತ್ ರಾಜ್ ಕುಮಾರ್ ಅಭಿನಯದ ಭಾಗದ ಚಿತ್ರೀಕರಣವೇನೂ ಪೂರ್ಣವಾಗಿದೆ. ಆದ್ರೆ ಪುನೀತ್ ವಾಯ್ಸ್ ಡಬ್ಬಿಂಗ್ ಮಾತ್ರ ಬಾಕಿ ಉಳಿದಿದೆ. ಶೂಟಿಂಗ್ ಸಮಯದಲ್ಲಿ ಅಪ್ಪು ಮಾತನಾಡಿದ್ದ ಧ್ವನಿಯನ್ನೇ ಇಟ್ಟುಕೊಂಡು, ಅದನ್ನೇ ಬಳಸಿಕೊಳ್ಳಲು ಚಿತ್ರತಂಡ ನಿರ್ಧರಿಸಿದೆ. ಅದು ಸಾಧ್ಯವಾಗದೇ ಇದ್ದರೆ ಶಿವರಾಜ್ ಕುಮಾರ್ ಅವ್ರಿಂದ ಡಬ್ಬಿಂಗ್ ಮಾಡಿಸೋ ಬಗ್ಗೆಯೂ ಚಿಂತನೆ ನಡೆಸಲಾಗಿದೆ.

ಎಲ್ಲಾ ಅಂದುಕೊಂಡಂತೆ ಆದರೆ ಅಪ್ಪು ಹುಟ್ಟುಹಬ್ಬದಂದೇ ಸಿನಿಮಾ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿದೆ. ಅಂದರೆ ಮಾರ್ಚ್ 17ರಂದು ಸಿನಿಮಾ ಬಿಡುಗಡೆ ಮಾಡಲು ಸಿದ್ಧತೆ ನಡೆಸಲಾಗಿದೆ ಹಾಗೇನಾದ್ರೂ ಆದರೆ ಅಪ್ಪು ಅಭಿಮಾನಿಗಳಿಗೆ ಭರ್ಜರಿ ಗಿಫ್ಟ್ ಕೊಟ್ಟಂತಾಗುತ್ತದೆ.

ಜೇಮ್ಸ್ ನಲ್ಲಿ ಪುನೀತ್ ರಾಜ್ ಕುಮಾರ್'ಗೆ ಹಿರಿ-ಕಿರಿಯ ಕಲಾವಿದರು ಸಾಥ್ ನೀಡಿದ್ದಾರೆ. ನಾಯಕಿಯಾಗಿ ತಮಿಳಿನ ಬೆಡಗಿ ಪ್ರಿಯಾ ಆನಂದ್ ಅಭಿನಯಿಸುತ್ತಿದ್ದಾರೆ. ಹಿರಿಯ ನಟ ಶರತ್ ಕುಮಾರ್ ವಿಲನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎನ್ನಲಾಗಿದೆ. ಇನ್ನು ಚಿತ್ರಕ್ಕೆ ಚೇತನ್ ಕುಮಾರ್ ಆಕ್ಷನ್ ಕಟ್ ಹೇಳಿದ್ದಾರೆ.






# ರಕ್ಷಿತ್ ಶೆಟ್ಟಿ ನಟನೆಯ 777 ಚಾರ್ಲಿ

ರಕ್ಷಿತ್ ಶೆಟ್ಟಿ ನಟನೆಯ 777 ಚಾರ್ಲಿ ಸಿನಿಮಾ ಬಿಡುಗಡೆ ದಿನಾಂಕವನ್ನು ಅಂತಿಮಗೊಳಿಸಲಾಗುತ್ತಿದೆ, ಈ ನಡುವೆ ಸೆನ್ಸಾರ್ ಮಂಡಳಿ ಸಿನಿಮಾಗೆ ಯು/ಎ ಪ್ರಮಾಣಪತ್ರ ನೀಡಿದೆ. ಎಲ್ಲವೂ ಅಂದಕೊಂಡಂತೆ ಹಾಗಿದ್ದರೇ 777 ಚಾರ್ಲಿ ಡಿಸೆಂಬರ್ 31ರಂದು ರಿಲೀಸ್ ಆಗಬೇಕಿತ್ತು, ಆದರೆ ಸಿನಿಮಾಗೆ ಸರಿಯಾದ ನ್ಯಾಯಸಿಗುವುದಿಲ್ಲ ಎಂದು ತಿಳಿದು ಬಿಡುಗಡೆ ದಿನಾಂಕ ಮುಂದೂಡಲಾಗಿದೆ. ಪ್ಯಾನ್ ಇಂಡಿಯಾ ಸಿನಿಮಾ ನಿರ್ದೇಶಕ ಕಿರಣ್ ರಾಜ್ ಸೆನ್ಸಾರ್ ಮಂಡಳಿ ಪ್ರಮಾಣ ಪತ್ರ ಪಡೆದಿದ್ದಾರೆ. ಚಿತ್ರವನ್ನು ವೀಕ್ಷಿಸಿದ ಕೆಲವು ನಿರ್ಮಾಣ ಸಂಸ್ಥೆಗಳು ಮತ್ತು ವಿತರಕರಿಂದ ಭಾರೀ ರೆಸ್ಪಾನ್ಸ್ ಸಿಕ್ಕಿದೆ ಎಂದು ನಿರ್ದೇಶಕರು ತಿಳಿಸಿದ್ದಾರೆ. ವಿವಿಧ ವಿತರಕರೊಂದಿಗೆ ಅಂತಿಮ ಚರ್ಚೆಯು ಈ ತಿಂಗಳ ಕೊನೆಯಲ್ಲಿ ನಡೆಯಲಿದೆ. ಫೆಬ್ರವರಿ ತಿಂಗಳಲ್ಲಿ ಸಿನಿಮಾ ಬಿಡುಗಡೆಯ ಅಧಿಕೃತ ದಿನಾಂಕವನ್ನು ಪ್ರಕಟಿಸಲಾಗುವುದು," ಎಂದು ಕಿರಣ್‌ರಾಜ್ ತಿಳಿಸಿದ್ದಾರೆ. 777 ಚಾರ್ಲಿ ಸಿನಿಮಾವನ್ನು ಜಿಎಸ್ ಗುಪ್ತಾ ಮತ್ತು ರಕ್ಷಿತ್ ಶೆಟ್ಟಿ ಅವರ ಪರಮಾವ್ ಸ್ಟುಡಿಯೋಸ್ ಬ್ಯಾನರ್ ನಲ್ಲಿ ನಿರ್ಮಾಣ ಮಾಡಲಾಗಿದೆ. ಚಿತ್ರಕ್ಕೆ ನೋಬಿನ್ ಪಾಲ್ ಸಂಗೀತ ಸಂಯೋಜಿಸಿದ್ದಾರೆ ಮತ್ತು ಅರವಿಂದ್ ಕಶ್ಯಪ್ ಕ್ಯಾಮೆರಾವರ್ಕ್ ನಿರ್ವಹಿಸಿದ್ದಾರೆ. ಚಲನಚಿತ್ರವು ಧರ್ಮ (ರಕ್ಷಿತ್ ಶೆಟ್ಟಿ) ಮತ್ತು ಚಾರ್ಲಿ ಎಂಬ ನಾಯಿಯ ನಡುವಿನ ಸಂಬಂಧ ಕುರಿತಾಗಿದೆ. ಸಂಗೀತಾ ಶೃಂಗೇರಿ, ರಾಜ್ ಬಿ ಶೆಟ್ಟಿ ಮತ್ತು ಡ್ಯಾನಿಶ್ ಸೇಟ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ತಮಿಳು ನಟ ಬಾಬ್ಬಿ ಸಿಂಹ ಅವರು 777 ಚಾರ್ಲಿಯೊಂದಿಗೆ ಕನ್ನಡಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ.

# ಮತ್ತೊಂದು ಭೂಗತ ಕತೆ ಚಿತ್ರದಲ್ಲಿ ಶಿವಣ್ಣ

ಭೂಗತ ಲೋಕದ ಕಥೆ ಇಟ್ಟುಕೊಂಡು ಮಾಡಲಾದ ಓಂ ಸಿನಿಮಾ ದೊಡ್ಡ ಮಟ್ಟದಲ್ಲಿ ಹಿಟ್ ಆಗಿತ್ತು. ನಿರ್ದೇಶಕ ಉಪೇಂದ್ರ ಅವರ ಡೈರೆಕ್ಷನ್ ನೋಡಿ ಅಭಿಮಾನಿಗಳು ಉಘೇಉಘೇ ಎಂದಿದ್ದರು. ಈ ಮೂಲಕ ಓಂ ಚಿತ್ರ ಸ್ಯಾಂಡಲ್‌ವುಡ್‌ನಲ್ಲಿ ಹೊಸ ಮೈಲಿಗಲ್ಲನ್ನೇ ಸೃಷ್ಟಿ ಮಾಡಿತ್ತು. 'ಓಂ' ಸಿನಿಮಾ ಶಿವರಾಜ್‌ಕುಮಾರ್ ಅವರ ವೃತ್ತಿ ಜೀವನದ ತೂಕವನ್ನು ಹೆಚ್ಚಿಸಿತ್ತು. ಶಿವಣ್ಣ ಅವರು ಮೊದಲ ಬಾರಿಗೆ ಮಚ್ಚು ಹಿಡಿದಿದ್ದು ಇದೇ ಸಿನಿಮಾದಲ್ಲಿ. ಈಗ 'ಓಂ' ಸಿನಿಮಾದ ಸತ್ಯನ ರೀತಿ ಇನ್ನೊಂದು ವಿಭಿನ್ನ ಅವತಾರದಲ್ಲಿ ಕಮಾಲ್ ಮಾಡಲು ಅವರು ರೆಡಿ ಆಗಿದ್ದಾರೆ. ಭೂಗತ ಲೋಕದ ಕಥೆಯಲ್ಲಿ ನಟಿಸಲು ಶಿವರಾಜ್‌ಕುಮಾರ್ ರೆಡಿ ಆಗಿದ್ದಾರೆ.



ಈ ವಿಚಾರ ಕೇಳಿ ಅಭಿಮಾನಿಗಳು ಸಖತ್ ಥ್ರಿಲ್ ಆಗಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ರಕ್ತಸಿಕ್ತ ಕಥೆಯೊಂದನ್ನು ಇಟ್ಟುಕೊಂಡು ಹೊಸ ಸಿನಿಮಾದ ಕಥೆ ಸಿದ್ಧಗೊಂಡಿದೆ. ಇದರಲ್ಲಿ ಶಿವಣ್ಣ ನಟಿಸಲಿದ್ದಾರೆ ಅನ್ನೋದು ವಿಶೇಷ. ಫೆಬ್ರವರಿಯಲ್ಲಿ ಈ ಸಿನಿಮಾಗೆ ಮೂಹೂರ್ತ ಮಾಡಲು ಚಿತ್ರತಂಡ ನಿರ್ಧರಿಸಿದೆ. ಆ ಬಳಿಕ ಸಿನಿಮಾಗೆ ಶೂಟಿಂಗ್ ನಡೆಯಲಿದೆ.

# ಸ್ತಬ್ಧ ಚಿತ್ರದಲ್ಲಿ ರಾಘವೇಂದ್ರ ರಾಜ್‌ಕುಮಾರ್

ಇತ್ತಿಚೆಗಷ್ಟೇ ಚಾಮರಾಜನಗರದ ಕಲಾವಿದರ ಸಂಘದಲ್ಲಿ ಮುಹೂರ್ತ ಸಮಾರಂಭ ನೆರವೇರಿದ್ದು, ಶಾಸಕ ರಾಮಲಿಂಗಾರೆಡ್ಡಿ ಅವರ ಪುತ್ರ ಶ್ರೀರಾಜ್ ಮೊದಲ ಕ್ಲಾಪ್ ಮೂಲಕ ಚಿತ್ರಕ್ಕೆ ಶುಭ ಹಾರೈಸಿದ್ದಾರೆ. ಇದರಲ್ಲಿ ಉದಯೋನ್ಮುಖ ನಟ ಪ್ರತಾಪ ಸಿಂಹ ಸಿನಿ ಜಗತ್ತಿಗೆ ಕಾಲಿಡುತ್ತಿದ್ದು, ಹರ್ಷಿಕಾ ಪೂಣಚ್ಚ ಅವರಿಗೆ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇದಲ್ಲದೇ ನಟ ಪ್ರತಾಪ್ ಸಿಂಹ, ರಾಜತಂತ್ರ ಮತ್ತು ರಾಜಿ ಚಿತ್ರಗಳಲ್ಲಿಯೂ ಸಹ ಅಭಿನಯಿಸಿದ್ದಾರೆ. ಈ ಚಿತ್ರಕ್ಕೆ ಲಾಲಿ ರಾಘವ ಆಕ್ಷನ್ ಕಟ್ ಹೇಳುತ್ತಿದ್ದು, ಇದು ಕನ್ನಡದ ಮೊದಲ ಸಿನಿಮಾವಾಗಿದ್ದರೂ ತಮಿಳಿನಲ್ಲಿ ಒಂದು ಸಿನಿಮಾ ನಿರ್ದೇಶನ ಮಾಡಿ ಸೈ ಎನಿಸಿಕೊಂಡಿದ್ದಾರೆ. ದಂತ ವೈದ್ಯರಾಗಿರುವ ಡಾ. ಡಿ. ವಿ ಸಾಗರ್ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಹಂಸಲೇಖ ಅವರ ಸಾಹಿತ್ಯ, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನವೂ ಈ ಚಿತ್ರಕ್ಕಿದೆ.






# ಪಿಆರ್‌ಕೆ ಪ್ರೊಡಕ್ಷನ್ಸ್‌ನ 'ಒನ್ ಕಟ್ ಟು ಕಟ್' ಫಸ್ಟ್ ಲುಕ್ ಬಿಡುಗಡೆ

ಪುನೀತ್ ರಾಜ್ ಕುಮಾರ್ ಅವರ ನಿರ್ಮಾಣ ಸಂಸ್ಥೆ ಪಿ ಆರ್ ಕೆ ಪ್ರೊಡಕ್ಷನ್ಸ್ ನಿರ್ಮಿಸಿರುವ, ದಾನಿಶ್ ಸೇಠ್ ನಾಯಕರಾಗಿ ಅಭಿನಯಿಸಿರುವ 'ಒನ್ ಕಟ್ ಟು ಕಟ್' ಕನ್ನಡ ಸಿನಿಮಾದ ಫರ್ಸ್ಟ್ ಲುಕ್ ಅನ್ನು ಅಮೆಜಾನ್ ಪ್ರೈಮ್ ವಿಡಿಯೊ ಬಿಡುಗಡೆಗೊಳಿಸಿದೆ. ದಾನಿಶ್ ಅವರ ಹಂಬಲ್ ಪೊಲಿಟಿಷಿಯನ್ ನೊಗ್ರಾಜ್ ಸಿನಿಮಾ ಜನಪ್ರಿಯತೆ ಗಳಿಸಿದ ನಂತರ ಇತ್ತೀಚಿಗಷ್ಟೆ ಅದೇ ಹೆಸರಿನ ವೆಬ್ ಸಿರೀಸ್ ವೂಟ್ ಸೆಲೆಕ್ಟ್ ಒಟಿಟಿ ತಾಣದಲ್ಲಿ ತೆರೆಕಂಡಿತ್ತು. ಇದೀಗ ಅಮೆಜಾನ್ ಪ್ರೈಮ್ ನಲ್ಲಿ ದಾನಿಶ್ ಅವರ ಒನ್ ಕಟ್ ಟು ಕಟ್ ಸಿನಿಮಾ ತೆರೆ ಕಾಣಲು ಸಜ್ಜಾಗಿದೆ. ಈ ಸಿನಿಮಾವನ್ನು ವಂಸೀಧರ್ ಬೋಗರಾಜು ನಿರ್ದೇಶನ ಮಾಡಿದ್ದಾರೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act